# ನೇಸರು

ತಿಂಗಳೋಲೆ

ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XVI 4 ಏಪ್ರಿಲ್ 1996

## ಈ ಸಂಚಿಕೆಯಲ್ಲಿ


ಮುಂಬಯಿ ಮೈಸೂರು ಅಸೋಸಿಯೇಷನ್ ಒಂದು ಸವಿನೆನಪು — **ಕೇಶವ ಮೂರ್ತಿ** 2

ಕಂಪ್ಯೂಟರಿನಿಂದ ಮಾಯಾ ಸತ್ಯ!
ಬನ್ನಿ ಗೆಳೆಯರೇ, ಮಾಯಾಲೋಕಕ್ಕೆ ● **ಊರ್ಮಿಳಾ** 4

ಕೆ. ಕೆ. ಹೆಬ್ಬಾರ 6

'ಸತ್ಯ ಧ್ಯಾನ ಪೀಠ'ದ ಕುಲಪತಿಗಳಾದ
ಶ್ರೀ ವಿದ್ಯಾನರಸಿಂಹಾಚಾರ್ಯ ● **ರೇಖಾ** 7

ಚಿತ್ತದ ಏಕಾಗ್ರತೆ ● **ವಿನೋಬಾ** 9

'ಜ್ಞಾಪೀಠ ಪ್ರಶಸ್ತಿ' ವಿಜೇತ ಕನ್ನಡಿಗರು 2
ವರಕವಿ ದ.ರಾ. ಬೇಂದ್ರೆಯವರ 'ನಾಕು ತಂತಿ' ● **ಡಾ. ಜೀವಿ ಕುಲಕರ್ಣಿ** 11

ಪತ್ರ ● **ಮೂಲ ಮರಾಠಿ : ಉಷಾ**
**ಕನ್ನಡಕ್ಕೆ: ಎನ್. ಜಿ. ನವಿಲೇಕರ್** 13

ಸುತ್ತ ಮುತ್ತ... 15

ಸಂಮೋಹಿನಿ ಚಿಕಿತ್ಸೆ (2) ● **ಡಾ| ಉಷಾ ರಾವ್** 16

ಕವನಗಳು ● **ಬಶೀರ್** 16



**The Mysore Association, Bombay**

393, Bhaudaji Road, Matunga, Bombay 400 019.

[redacted] Tel.: 402 46 47 Grams: "KARUNADU"

# ಮುಂಬಯಿ ಮೈಸೂರು ಅಸೋಸಿಯೇಷನ್ ಒಂದು ಸವಿನೆನಪು

ಕೇಶವ ಮೂರ್ತಿ



ನಾವು 1929ರಲ್ಲಿ L.L.B. ಓದುವುದಕ್ಕೆ ಮುಂಬಯಿಗೆ ಬಂದೆ. ಆಗ V.T.ನಲ್ಲಿ ಒಂದು ಪ್ರಸಿದ್ಧ ಮಂಗಳೂರು ಹೋಟೇಲ್ ಇತ್ತು. ಆ ಹೋಟೇಲಿನವರು V.T. ಸ್ಟೇಷನ್‌ಗೆ ಬಂದು ಅಲ್ಲಿ ಬರುವ ಯಾತ್ರಿಕರಿಗೆಲ್ಲಾ ತಮ್ಮ ಹೋಟೇಲಿನಲ್ಲಿ ಇಳಿದುಕೊಳ್ಳಬೇಕೆಂದು ಹೋಟೇಲಿನ ಬೋರ್ಡ್‌ನ್ನು ತೋರಿಸುತ್ತಿದ್ದರು. ನಾನು ಆ ಹೋಟೇಲಿನ ಬಗ್ಗೆ ಬಹಳಷ್ಟು ಜನರಿಂದ ಕೇಳಿದ್ದೆ. ಆದ್ದರಿಂದ ಅಲ್ಲಿಯೇ ಹೋಗಿ ಇಳಿದುಕೊಂಡೆ. ಅಲ್ಲಿ ಬಲರಾಮ ರಾವ್ ಎಂಬ ಕನ್ನಡಿಗರ ಪರಿಚಯ ಆಯಿತು. ``ಓರಿಯಂಟಲ್ ಇನ್‌ಶ್ಯೂರೆನ್ಸ್ ಕಂಪನಿಯಲ್ಲಿ ಕೆಲಸ ಖಾಲಿ ಇದೆ. ನೀವು ಯಾಕೆ ಅರ್ಜಿ ಹಾಕಬಾರದು", ಎಂದು ಅವರು ನನಗೆ ಹೇಳಿದರು. ಅದರಂತೆ ನಾನು ಅರ್ಜಿ ಸಲ್ಲಿಸಿದೆ. ಸಂದರ್ಶನಕ್ಕೆ ಕರೆಯೂ ಬಂತು. ಅದರ ಫಲವಾಗಿ ಕೆಲಸವು ಸಿಕ್ಕಿತು. ಬೆಳಿಗ್ಗೆ 10-30 ಘಂಟೆವರೆಗೂ Law ಕ್ಲಾಸಸ್ ಇರುತ್ತಿತ್ತು. ಅದನ್ನು ಮುಗಿಸಿಕೊಂಡು ಕೆಲಸಕ್ಕೆ ಹೋಗುತ್ತಿದ್ದೆ. ಅದೇ ಕಾಲದಲ್ಲಿ ನನ್ನ ಸ್ನೇಹಿತಶ್ರೀ ನಾಗಭೂಷಣರಾಯರು ಸೆಂಟ್ರಲ್ ಕಾಟನ್ ಲ್ಯಾಬ್‌ನಲ್ಲಿ ಕೆಲಸದಲ್ಲಿದ್ದರು. ಅವರು ಮಾಟುಂಗದಲ್ಲಿ ಇನ್ನು ಕೆಲವು ಕನ್ನಡಿಗರೊಡನೆ ರೂಮ್ ಮಾಡಿಕೊಂಡಿದ್ದರು. ಇನ್ನೂ ಸುಮಾರು ಕನ್ನಡಿಗರು ಮಾಟುಂಗದಲ್ಲೇ ಒಂದು ರೂಮಿಗೆ ಎರಡೂ ಮೂರು ಜನರಂತೆ ಸೇರಿಕೊಂಡು ಇರುತ್ತಿದ್ದರು. ಸ್ವಲ್ಪ ದಿನಗಳಾದ ಮೇಲೆ ನಾನೂ ಸಹ ಮಾಟುಂಗಗೆ ಬಂದು ನನ್ನ ಇನ್ನೊಬ್ಬ ಸ್ನೇಹಿತನ ರೂಮಿನಲ್ಲಿ ಸೇರಿಕೊಂಡೆ. ಅಲ್ಲಿಂದ ನನಗೆ ಮೈಸೂರು ಅಸೋಸಿಯೇಷನ್ನೊಡನೆ ಸಂಪರ್ಕ ಶುರುವಾಯಿತು.

ಆಗ ಮೈಸೂರು ಅಸೋಸಿಯೇಷನ್ ಮಾಟುಂಗದಲ್ಲಿರುವ ನಪ್ಪೂ ಹಾಲ್ ಪಕ್ಕದ ``Vejbhai" ಕಟ್ಟಡದಲ್ಲಿ ಬಾಡಿಗೆಗೆ ತೆಗೆದುಕೊಂಡಿತ್ತು. ಅಸೋಸಿಯೇಷನ್‌ನ ಅಂದರೆ ಮೂರು ರೂಮುಗಳು ಮಾತ್ರ ಇತ್ತು. ಒಂದು ಆಫೀಸು, ಒಂದು Gymnasium ಮತ್ತು ಹಾಲ್ ಇತ್ತು. ಅಲ್ಲಿನ ನಿತ್ಯದ ಚಟುವಟಿಕೆ ಎಂದರೆ Gymnasiumನಲ್ಲಿ ಕಸರತ್ತು ಮತ್ತು Carrom ಆಟವಾಗಿತ್ತು. ದಿವಾನ್ ಬಹದ್ದೂರ್ ರಾಮಸ್ವಾಮಯ್ಯನವರು ಈ ಸಂಘದ ಮುಖ್ಯ ಸ್ಥಾಪಕರಲ್ಲಿ ಒಬ್ಬರಾಗಿದ್ದರು. ಅವರು ಅಸೋಸಿಯೇಷನ್ ಬೆಳೆಯಲು ಬೇಕಾದಷ್ಟು ನೆರವು ನೀಡಿದ್ದರು.

ಆಗಿನ ಕಾರ್ಯಕ್ರಮಗಳಲ್ಲಿ ಮುಖ್ಯವಾದುದು ಮೈಸೂರು ಮಹಾರಾಜರ ವರ್ಧಂತಿ ಉತ್ಸವ. ಅರಮನೆಯ ಆಡಳಿತದವರು 100 ವರಹಗಳನ್ನು ಕಳುಹಿಸುತ್ತಿದ್ದರು. ಆ ದುಡ್ಡಿನಲ್ಲಿ ಉತ್ಸವವನ್ನು ಆಚರಿಸುತ್ತಿದ್ದೆವು. ಮತ್ತೊಂದು ಕಾರ್ಯಕ್ರಮವೆಂದರೆ ಅಸೋಸಿಯೇಷನ್ನಿನ ವಾರ್ಷಿಕೋತ್ಸವ ಸಮಾರಂಭ. ಅವತ್ತಿನ ದಿನ, ರಾಮಸ್ವಾಮಯ್ಯನವರು ತಮ್ಮ ಸ್ವಂತ ಖರ್ಚಿನಲ್ಲಿ ಎಲ್ಲರಿಗೂ ಊಟ ಹಾಕಿಸುತ್ತಿದ್ದರು. ಆಗ ಸುಮಾರು 30 ಜನ ಸದಸ್ಯರು ಇದ್ದರು. ಸದಸ್ಯತ್ವಕ್ಕೆ ತಿಂಗಳಿಗೆ ಒಂದು ರೂಪಾಯಿ ಕೊಡಬೇಕಾಗಿತ್ತು. ಆಗ ಮಾಗಲ್‌ರವರು ಸೆಕ್ರೆಟರಿ ಆಗಿದ್ದರು. ``ನೀವು ಕನ್ನಡದವರೆಲ್ಲಾ ಹೋಟೇಲ್‌ನಲ್ಲಿ ಊಟ ಮಾಡುವ ಬದಲು ಇಲ್ಲೇ ಒಂದು ಊಟದ ಮೆಸ್ಸು ಏಕೆ ಶುರು ಮಾಡಬಾರದು", ಎಂದು ರಾಮಸ್ವಾಮಯ್ಯನವರು ಸೂಚಿಸಿದರು. ``ಅದು ಅಷ್ಟು ಸುಲಭದ ಕೆಲಸ ಅಲ್ಲ. ಅದಕ್ಕೆ ತುಂಬ ಖರ್ಚಾಗುತ್ತೆ" ಎಂದು ಸೆಕ್ರೆಟರಿಯವರು ಉತ್ತರಿಸಿದರು. ಅದಕ್ಕೆ ರಾಮಸ್ವಾಮಯ್ಯನವರು, ``ನೀವು ಶುರು ಮಾಡಿ. ಅದಕ್ಕೆ ಬೇಕಾಗುವ ಪಾತ್ರೆ, ತಟ್ಟೆ, ಮಣೆ, ಮತ್ತಿತರ ಸಾಮಾನುಗಳನ್ನು ಮೊದಲಿಗೆ ನಾನು ಕೊಡುತ್ತೇನೆ", ಎಂದು ಹೇಳಿದರು. ಅಂತೂ ಒಂದು ಶುಭ ದಿವಸ ಊಟದ ಮೆಸ್ಸು ಶುರುವಾಯಿತು. ತಿಂಗಳಿಗೆ ಇಬ್ಬರು ಸದಸ್ಯರಂತೆ ಮೆಸ್ಸಿನ ಆಡಳಿತ ನಡೆಸುತ್ತಿದ್ದೆವು. ಪ್ರತಿ ತಿಂಗಳ ಆಗುವ ಖರ್ಚು ವೆಚ್ಚವನ್ನು ಅಲ್ಲಿ ಊಟ ಮಾಡುತ್ತಿದ್ದ ಸದಸ್ಯರುಗಳೆಲ್ಲ ಹಂಚಿಕೊಳ್ಳುತ್ತಿದ್ದೆವು. ಊಟ ಚೆನ್ನಾಗಿರುತ್ತಿತ್ತು. ಪ್ರತಿ ತಿಂಗಳ ಮೀಟಿಂಗ್ ಆಗ ಬೇಕಾದರೆ Compoundನಲ್ಲೇ Canvas ಹಾಕಿಕೊಂಡು ಕೂಡುತ್ತಿದ್ದೆವು.

ಹೀಗೆ ಸುಮಾರು ವರ್ಷ ಅದೇ ಬಿಲ್ಡಿಂಗ್‌ನಲ್ಲೇ ಅಸೋಸಿಯೇಷನ್ ನಡೆಯಿತು. ಅಸೋಸಿಯೇಷನ್ನಿನ ಒಂದು ಸ್ವಂತ ಕಟ್ಟಡ ಮಾಡಬೇಕೆಂದು ಮುಖ್ಯಸ್ಥಾಪಕರುಗಳಿಗೆ ಯೋಜನೆ ಇತ್ತು. ಆಗಿನ ಕಾಲದಲ್ಲಿ M. N. S. Iyengar ಎಂಬ ಕನ್ನಡಿಗರೊಬ್ಬರು Municipalityಯಲ್ಲಿ Engineer ಆಗಿದ್ದರು. ಅವರ ಸಹಾಯದಿಂದ ಅರ್ಜಿ ಹಾಕಿ ಇಂದು ಅಸೋಸಿಯೇಷನ್ ಇರುವ ಜಾಗ ತೆಗೆದುಕೊಳ್ಳಲಾಯಿತು. ಬರಿ ಜಾಗ ಇದ್ದರೆ ಸಾಕೇ? ಒಂದು ಕಟ್ಟಡ ಬೇಕಾಗಿತ್ತು. ಸರಿ ಅದಕ್ಕೆ ಕೆಲವು ಮುಖ್ಯ ಸದಸ್ಯರ ಆರ್ಥಿಕ ಸಹಾಯದಿಂದ ಒಂದು ಸಣ್ಣ ಕಟ್ಟಡದ ನಿರ್ಮಾಣವಾಯಿತು. ಸಂಘದ ಕಾರ್ಯ ನಿರ್ವಹಣೆಗೆ ಒಂದು ಕಾರ್ಯಕಾರಿ ಸಮಿತಿಯನ್ನು ಮಾಡಲಾಯಿತು. ಅದರಲ್ಲಿ ಅನೇಕ ಗಣ್ಯ ವ್ಯಕ್ತಿಗಳಿದ್ದರು. ಹೆಚ್ಚು ಹೆಚ್ಚಿನ ಚಟುವಟಿಕೆಗಳು ಶುರುವಾದವು. ಆಗಿಂದಾಗ್ಗೆ ಸದಸ್ಯರು ನಾಟಕಗಳನ್ನು ಏರ್ಪಾಡು ಮಾಡುತ್ತಿದ್ದರು. ಊಟದ ಮೆಸ್ಸು ದೊಡ್ಡದಾಯಿತು. ಹೊರಗಿನವರು ಊಟಕ್ಕೆ ಬರುತ್ತಿದ್ದರು. ಸದಸ್ಯರ ಸಂಖ್ಯೆಯು ಜಾಸ್ತಿಯಾಯಿತು. ಕಮಿಟಿಯ ಸದಸ್ಯರೊಳ್ಳೊಬ್ಬರಾದ R. D. Char ಎಂಬುವವರು ಸಂಜೆಯ ಹೊತ್ತು ಯಾರದ್ದಾದರೂ ಉಪನ್ಯಾಸವಿಡಬಹುದೆಂದು ಸೂಚಿಸಿದರು. ಅದರಂತೆ ಪ್ರತೀ ಸೋಮವಾರ ಸಂಜೆಯ ಸಮಯದಲ್ಲಿ ವೇದಾಂತ ವಿದ್ವಾನ್ ಶ್ರೀ ಗೋಪಾಲಾಚಾರ್ಯರ ಭಗವದ್ಗೀತೆ ಪ್ರವಚನವನ್ನು ಏರ್ಪಡಿಸಲಾಯಿತು. ಇದಕ್ಕೆ ಮುಖ್ಯ ಸದಸ್ಯರು ಅವರ ಕುಟುಂಬದವರೆಲ್ಲಾ ಬರುತ್ತಿದ್ದರು. ಇದಾದ ಸ್ವಲ್ಪ ದಿನದ ಮೇಲೆ ಒಂದು ಗ್ರಂಥಾಲಯವೂ ಶುರುವಾಯಿತು. Life Membership ಸಹ ಶುರುವಾಯಿತು. ಆಜೀವ ಸದಸ್ಯತ್ವ ಇದಕ್ಕೆ ಶುಲ್ಕ 50ರೂಪಾಯಿ ಗಳಷ್ಟೇ ಇತ್ತು. ಹೀಗೆ ದಿನ ಕಳೆದಂತೆ ಅಸೋಸಿಯೇಷನ್ ದೊಡ್ಡದಾಗುತ್ತ ಬಂತು. ಆಗಿನ ಕಾಲದಲ್ಲಿ ಸುಮಾರು ಸದಸ್ಯರು ಮಾಟುಂಗದಲ್ಲೆ ನೆಲೆಸಿದ್ದರು. ಈಗ ಮುಂಬಯಿನ ಕೋಣೆ ಕೋಣೆಯಲ್ಲಿ ಸದಸ್ಯರಿದ್ದಾರೆ. ಈಚೆಗೆ ಅಸೋಸಿಯೇಷನ್, ಬೃಹದಾಕಾರವಾಗಿ ಬೆಳೆದು ಮುಂಬಯಿಗೆ ಒಂದು ಪ್ರಸಿದ್ಧ ಕನ್ನಡಿಗರ ಸಂಸ್ಥೆಯಾಗಿದೆ. ಈಗಿನ ಚಟುವಟಿಕೆಗಳಲ್ಲಿ ಸ್ತ್ರೀಯರು, ಮಕ್ಕಳೂ ಸಹ ಹೆಚ್ಚು ಹೆಚ್ಚಾಗಿ ಭಾಗವಹಿಸುತ್ತಿದ್ದಾರೆ. ನಮ್ಮ ನಾಡು ಬಿಟ್ಟು ಬಂದರೂ ನಮಗೆ ಈ ಅಸೋಸಿಯೇಷನ್ ಸಂಪರ್ಕದಿಂದ ನಮ್ಮ ನಾಡಿನಲ್ಲಿದ್ದ ಹಾಗೆ ಅನ್ನಿಸುತ್ತೆ. ಹೀಗೆ ಹೆಚ್ಚು ಹೆಚ್ಚು ಕನ್ನಡಿಗರು ಸದಸ್ಯರಾಗಿ, ಈ ಅಸೋಸಿಯೇಷನ್ ಇನ್ನೂ ಹೆಚ್ಚು ಪ್ರಬುದ್ಧಮಾನಕ್ಕೆ ಬರಲಿ ಎಂದು ಹಾರೈಸುತ್ತೇನೆ.

ಪ್ರಿಯ ಓದುಗರೆ,

ಜನವರಿ ತಿಂಗಳ ಸಂಚಿಕೆಯಲ್ಲಿ, ಮಹರ್ಷಿ ವಾಲ್ಮೀಕಿಯವರ ರಾಮಾಯಣದಲ್ಲಿ ಮೂಡಿ ಬಂದಿರುವ, ಮಹಾಮಹಿಮಳಾದ, ಮತ್ತು ನನ್ನ ಮನಸ್ಸನ್ನು ಸೂರೆಗೊಂಡ, ನನ್ನ ಮೆಚ್ಚಿನ ಊರ್ಮಿಳೆಯ ವ್ಯಕ್ತಿತ್ವದ ಪರಿಚಯವನ್ನು, ನಿಮ್ಮಗಳಿಗೆ ಕೊಡುಗೆಯಾಗಿ ಕೊಡುವ ಸಾಹಸ ಮಾಡಿದೆ. ನನ್ನ ಆ ಕೊಡುಗೆ, ನಿಮ್ಮಗಳಿಗೆಲ್ಲಾ, ಇಷ್ಟವಾಗಿರಬಹುದೆಂತ ಅಂದ್ಕೊಂಡು, ಈಗ ಮತ್ತೊಂದು, ಮಹಾಕಾವ್ಯವಾದ, ಮಹಾಭಾರತದಲ್ಲಿ, ಮೂಡಿ ಬಂದಿರತಕ್ಕಂಥಾ ಒಬ್ಬ ಮಹಾಪುರುಷನ, ವ್ಯಕ್ತಿತ್ವದ ಪರಿಚಯವನ್ನು, ನಿಮ್ಮಗಳ ಗಮನಕ್ಕೆ ತರ್‍ತಾ ಇದಿನಿ. ಆ ಮಹಾಪುರುಷಯಾರೆಂತೆಂದ್ರೆ - ತನ್ನ ನಿಸ್ಸಹಾಯಕತೆ, ನಿಷ್ಕಳಂಕ ಚಾರಿತ್ರ್ಯದಿಂದ, ಮಹಾಭಾರತವನ್ನು ಓದಿರುವವರೆಲ್ಲರ, ಮತ್ತು ಓದುವವರೆಲ್ಲರ, ಹೃದಯದಲ್ಲಿ, ಆ ವ್ಯಕ್ತಿಯ ಬಗ್ಗೆ, ಅನುತಾಪ, ಅನುಕಂಪಗಳ ತರಂಗಗಳನ್ನೆಬ್ಬಿಸುವ ಕರುಣೆಯ ಕೂಸುನತದೃಷ್ಟ ಕರ್ಣನೇ ಆ ಮಹಾಪುರುಷ.

ನೋಡಿ ಮಹಾಭಾರತ ಒಂದು ಮಹಾಸಾಗರ. ಆ ಸಾಗರದಲ್ಲಿ, ಅನೇಕ ವ್ಯಕ್ತಿಗಳು ನಮ್ಮ ಮನಸ್ಸನ್ನು ಸೂರೆಗೊಳ್ಳುತ್ತಾರೆ. ಶ್ರೀ ಕೃಷ್ಣ ಪರಮಾತ್ಮ, ಪಂಚ ಪಾಂಡವರು, ಸರಿಯೇ ಸರಿ. ಕುಂತಿ, ಸುಭದ್ರೆ, ದುರ್ಯೋಧನ ಮತ್ತು ಕರ್ಣ. ಈ ಪಾತ್ರಗಳು ನಮ್ಮ ಹೃದಯದಲ್ಲಿ ನೆಲಸಿ, ನಮ್ಮ ಮೆಚ್ಚುಗೆಗೆ ಪಾತ್ರರಾಗುತ್ತಾರೆ. ಅದರಲ್ಲೂ ಕರ್ಣನ ಪಾತ್ರ, ಎಲ್ಲರ ಮನಸ್ಸನ್ನೂ ಸೂರೆಗೊಳ್ಳುತ್ತದೆ. ಅದಕ್ಕೇ ಆದಿ ಕವಿ ಪಂಪ, ಕರ್ಣನನ್ನು ಕುರಿತು ``ಕರ್ಣ ರಸಾಯನವಲ್ತೆ ಭಾರತಂ'' ಎಂದು ಹೇಳಿದ್ದಾನೆ.

ಹುಟ್ಟಿದಂದು ಮೊದಲಾಗಿ, ಸಾಯುವ ತನಕ, ವಿಧಿಯ ಕೈಗೊಂಬೆಯಾಗಿನತ ದೃಷ್ಟನಾಗಿ ನರಳಿದವನು ಕರ್ಣ. ಹಸುಳೆಯಾಗಿದ್ದಾಗಲೇ ತಾಯಿ ತ್ಯಜಿಸುತ್ತಾಳೆ. ಬೆಸ್ತರ ಪ್ರೀತ್ಯಾದರಗಳಿಗೆ ಪಾತ್ರನಾಗಿ ``ಸೂತಪುತ್ರ''ನೆನಿಸಿ ಕೊಳ್ಳುತ್ತಾನೆ. ದ್ರೋಣಾಚಾರ್ಯರಲ್ಲಿ, ಸ್ಪರ್ಧೆ ನಡೆಸುವಾಗಲೇ, ಅರ್ಜುನನ ಹಗೆತನಕ್ಕೊಳಗಾಗಿ, ಎಲ್ಲರಿಂದ ಹೀಯಾಳಿಸಲ್ಪಡುತ್ತಾನೆ. ಆದ್ರೆ ಶೌರ್ಯ, ಹೃದಯ ವೈಶಾಲ್ಯ, ಗಾಂಭೀರ್ಯ, ಇವುಗಳಿಗೆ ಮಾರು ಹೋಗಿ, ಅವನನ್ನು ಆತ್ಮ ಸ್ನೇಹಿತನನ್ನಾಗಿ ಗೌರವಿಸಿದ ಕೀರ್ತಿ ದುರ್ಯೋಧನನಿಗೆ ಸಲ್ಲಬೇಕು. ಎಲ್ಲರಿಂದ ಸೂತ ಪುತ್ರನೆಂದು ತಿರಸ್ಕರಿಸಲ್ಪಟ್ಟ ಕರ್ಣನಿಗೆ, ದುರ್ಯೋಧನನ ಸ್ನೇಹ ಲಾಭ ದೊರೆತುದುದು, ಮಡುವಿನಲ್ಲಿ ಮುಳುಗಿ ಸಾಯುತ್ತಿದ್ದವನಿಗೆ, ಮರದ ತುಂಡು ಸಿಕ್ಕಂತಾಯಿತು. ತನ್ನದಾದ ಎಲ್ಲವನ್ನೂ, ದುರ್ಯೋಧನನ ಸೇವೆಗಾಗಿ ಮುಡುಪಾಗಿಡುತ್ತಾನೆ ಕರ್ಣ. ದುರ್ಯೋಧನನೂ ಅಷ್ಟೇ ಕರ್ಣನ ಮಾತೆಂದ್ರೆ, ವೇದ ವಾಕ್ಯ. ಏನು ಮಾಡುವಾಗಲೂ ಕರ್ಣನ ಬೆಂಬಲವಿದ್ದರೆ ತೀರಿತು. ಹಾಗೆ ನೋಡಿದಲ್ಲಿ, ಕರ್ಣನ ಶೌರ್ಯವನ್ನು ನಂಬಿ, ದುರ್ಯೋಧನ, ಪಾಂಡವರೊಡನೆ, ಯುದ್ಧಕ್ಕೆ ತೊಡಗಿದ್ದರೆ ತಪ್ಪಿರಲಾರದು. ಕರ್ಣನಲ್ಲಿ ದುರ್ಯೋಧನನಿಗೆ ಎಷ್ಟು ಮೈತ್ರಿ ಇತ್ತು, ಯಾವ ಭಾವನೆ ಇತ್ತು, ಎಂಬುದನ್ನು ಕರ್ಣ ಸತ್ತಾಗ, ದುರ್ಯೋಧನ ಪ್ರಲಾಪಿಸುವುದನ್ನು ಗಮನಿಸಿ ತಿಳಿಯಬಹುದು.

ನಿಜವಾಗಿ ನೋಡಿದರೆ, ಶೌರ್ಯದಲ್ಲಿ, ಗಾಂಭೀರ್ಯದಲ್ಲಿ ಮತ್ತು ಉದಾರತ್ವದಲ್ಲಿ (ನೋಡಿ ಸಾಧಾರಣವಾಗಿ, ದೇಹಿ ಅಂದವರಿಗೆ, ಜಾಸ್ತಿ ಅನ್ನದೆ ತನಗಿಲ್ಲದಿದ್ರು, ಇದ್ದಿದ್ದರಲ್ಲೇ ಇನ್ನೊಬ್ಬರ ಕಷ್ಟ ಪರಿಸ್ಥಿತಿಗೆ ಮರುಗಿ, ಉದಾರವಾಗಿ ದಾನ ಮಾಡುವ ವ್ಯಕ್ತಿಯನ್ನು ಕಂಡ್ರೆ, ಏಯ್ ಬಿಡೊ ಬಿಡೊ ಅವನೊಬ್ಬ ದಾನ ಶೂರ ಕರ್ಣ ಅಂತ ಹೀಯಾಳಿಸಿ ಮಾತನಾಡೋದು ಜನ ಸಾಮಾನ್ಯರು ಹೇಳುವ ಮಾತು), ಕರ್ಣನನ್ನು ಮೀರಿಸಿದವರು ಮಹಾಭಾರತದಲ್ಲಿ ಯಾರೂ ಇಲ್ಲ, ಇದುವರೆಗೂ ಯಾರೂ ಹುಟ್ಟಿಲ್ಲ. ಮತ್ತೊಬ್ಬರ ಶೌರ್ಯಕ್ಕೆ ಅಸೂಯೆ ಪಡದೆ, ತನ್ನದನ್ನು ಕೊಚ್ಚಿಕೊಳ್ಳದೆ, ನೈಜತ್ವವನ್ನು ಮೆರೆದವನೆಂದರೆ ಕರ್ಣನೇ.

ಕೌರವ ಪಾಂಡವರೆಲ್ಲರಿಗೂ ಹಿರಿಯನಾಗಿ, ಇಡೀ ಭಾರತ ವರ್ಷಕ್ಕೆ ಸಾಮ್ರಾಟನಾಗಿ ಮೆರೆಯ ಬೇಕಾಗಿದ್ದ ಕರ್ಣ, ಕುಂತಿಯ ಹಿರಿಯ ಪುತ್ರ, ಕೌರವನ ದಾಕ್ಷಿಣ್ಯಕ್ಕೆ ಒಳಗಾಗಿ, ಅವನ ಮೈತ್ರಿಗೆ ಕಟ್ಟು ಬಿದ್ದು, ಅವನ ಉಪ್ಪು ತಿಂದ ಋಣವನ್ನು ತೀರಿಸಲು ಹೆಣಗ ಬೇಕಾಯಿತು. ಉಪ್ಪು ತಿಂದ ಮನೆಗೆ ಎರಡು ಬಗೆಯಲಿಲ್ಲ. ಕಡೆಯವರೆಗೂ ಸ್ವಾಮಿ ದ್ರೋಹ ಮಾಡದೆ, ಕರ್ತವ್ಯ ದೃಷ್ಟಿಯಿಂದ ಸೇವೆ ಮಾಡಿ ಮೆರೆದ ಕರ್ಣ.

ಮುಂದೆ ರಣರಂಗದಲ್ಲಿ ಅವನಿಗಾದ ಮೋಸವನ್ನು ನೆನೆಸಿಕೊಂಡ್ರೆ, ಎಂಥಾ ಕಲ್ಲೆದೆಯಾದ್ರೂ ಕರಗಿ ನೀರಾಗುತ್ತದೆ. ಶಸ್ತ್ರಾಸ್ತ್ರಗಳನ್ನು ಕಳಚಿಟ್ಟು ರಥದ ಚಕ್ರವನ್ನು ಮೇಲೆತ್ತುತ್ತಿರುವ ಸಮಯ ಸಾಧಿಸಿ, ಅರ್ಜುನ ಅವನ ಮೇಲೆ ಬಾಣ ಪ್ರಯೋಗ ಮಾಡುತ್ತಾನೆ. ಅದೂ ಸಾಲದೆಂಬಂತೆ ಕೃಷ್ಣ ಬ್ರಾಹ್ಮಣನ ವೇಷದಿಂದ ಬಂದು, ಕರ್ಣ ಕುಂಡಲವನ್ನು ಯಾಚಿಸಿ, ಕರ್ಣನ ಧಾರುಣ ಕಥೆಯನ್ನು ಮುಕ್ತಾಯಗೊಳಿಸುತ್ತಾನೆ.

ಇದು ವಿಧಿಯ ಆಟವೆನ್ನಿ, ಅಥ್‌ವಾ ಸರ್ವಾಂತರ್ಯಾಮಿಯಾದ ಕೃಷ್ಣನ ಲೀಲೆಯೆನ್ನಿ, ಆದ್ರೆ ಕರ್ಣನ ಕಥೆ, ಮಹಾಭಾರತದಲ್ಲಿ ಮರೆಯಲಾರದಂಥ ಕಥೆ ಎನ್ನೋಣವೇ?

- ಸೀತಮ್ಮ ಆರ್. ರಾವ್

**MATRIMONIAL**

Alliance invited for a girl. Birth date 04-09-1964, Ayeslseha Nakshatra, Bhardwaja Gotra, Madhwa Brahmin, Ht. 5'-5". H.S.C. with Secretarial Practice Diploma and Diploma in Russian language. Employed in Cosmos Travel & Tours Pvt. Ltd. as Manager in New Delhi. Please reply to Box No. 112, Nesaru.

***

Parents of Kannada Madhwa boy, Kaundinyasa Gotra, 180 cm (6') fair complexioned B.E. (Electronics) University of Bombay. Manager in MNC invite proposals from girls fair, tall, B.E. (Computer Science), M.Sc. Apply with details to Nesaru Box No. 113.

**FOR ALL YOUR DOMESTIC AND INTERNATIONAL TRAVEL ARRANGEMENTS**

*CONTACT*

**AUGUST TRAVEL SERVICE**

**Agents For**
**INDIAN AIR LINES, EAST WEST, MODI LUFT & JET AIRLINES**

**REGD. OFFICE:**
3/15 ASHIANA, SECTOR 17,
VASHI, NEW BOMBAY.
PHONE: 768 25 91 * 768 25 58
767 09 02
GRAMS: AUGTRASERV
**ALSO AT:**
2/16, KABBUR HOUSE,
SION (E), BOMBAY-400 022.
PHONE: 407 29 84 * 409 35 73
* 407 77 50

**ಕಂಪ್ಯೂಟರ್ ಅನ್ವಯ**



## ಕಂಪ್ಯೂಟರಿನಿಂದ ಮಾಯಾ ಸತ್ಯ!

# ಬನ್ನಿ ಗೆಳೆಯರೇ, ಮಾಯಾಲೋಕಕ್ಕೆ

● ಊರ್ಮಿಳಾ

ಓದುಗರೇ, ನಾವೆಲ್ಲರೂ ಒಮ್ಮೊಮ್ಮೆ ಕಲ್ಪನಾಲೋಕದ ವಿಹಾರಿಗಳಾಗುತ್ತೇವೆ ಅಲ್ಲವೇ? ಬೇಸರವಾದಾಗ ನಮ್ಮ ಕಲ್ಪನಾಶಕ್ತಿಯ ಸಹಾಯದಿಂದ ನಮಗಿಷ್ಟವಾದ ವಿಷಯಗಳನ್ನು ಕಲ್ಪಿಸಿಕೊಂಡು ಆನಂದಿಸುತ್ತೇವೆ ಅಲ್ಲವೇ? ನಮ್ಮ ಇಚ್ಛೆಗೆ ಅನುಗುಣವಾಗಿ ಅಲಂಕೃತವಾದ ಬಂಗಲೆಯನ್ನು ಒಳಗಣ್ಣಿನಿಂದ ನೋಡಿ ಆನಂದಿಸುತ್ತೇವೆ; ಯುದ್ಧ, ಕದನಗಳ ಬಗ್ಗೆ ಕಥೆ, ಕಾದಂಬರಿ ಓದಿ ಮುಗಿಸಿದ ಮೇಲೆ ನಾವೇ ಯುದ್ಧ ರಂಗದಲ್ಲಿ ಇದ್ದಂತೆ, ಶತ್ರು ವಿಮಾನಗಳ ದಾಳಿಯನ್ನು ನೋಡುತ್ತಿರುವಂತೆ ಕಲ್ಪಿಸಿಕೊಳ್ಳುತ್ತೇವೆ. ರೋಮಾಂಚಕಾರಿ ವೈಜ್ಞಾನಿಕ ಕತೆಗಳನ್ನು ಓದಿ ನಾವೇ ಸಮುದ್ರದಾಳದಲ್ಲಿ ಇಳಿದಂತೆ ಹಾಗೂ ಅಲ್ಲಿನ ಬಗೆಬಗೆಯ ಜೀವಿಗಳನ್ನು ಎದುರಿಸುತ್ತಿರುವಂತೆ ಕನಸು ಕಾಣುತ್ತೇವೆ. ಇವೆಲ್ಲಾ ಕಲ್ಪನೆಯೆಂದು ನಾವು ಬಲ್ಲೆವು.

ಒಂದು ವೇಳೆ ನಾವು ಕಲ್ಪನೆಯಲ್ಲಿ ಅನುಭವಿಸುವುದನ್ನೆಲ್ಲಾ ನಿಜವೋ ಎಂಬಂತೆ ಅನುಭವಿಸಲು ಸಾಧ್ಯವಾದರೆ ಅದೊಂದು ಬಹು ರೋಮಾಂಚಕಾರಿಯಾದ ಅನುಭವವಲ್ಲವೇ? ಅದೆಲ್ಲಿ ಸಾಧ್ಯ ಎಂದು ಮೂಗೆಳೆಯುವಿರೋ? ಅದು ಸಾಧ್ಯ ಎಂದು ಇತ್ತೀಚೆಗೆ ಕಂಪ್ಯೂಟರ್ ಬಲ್ಲವರು ಮಾಡಿ ತೋರಿಸಿದ್ದಾರೆ. ಇಂತಹ ಮಾಯೆಯನ್ನು ಅವರು `ವರ್ಚುವಲ್ ರಿಯಾಲಿಟಿ' ಎಂದು ಕರೆದಿದ್ದಾರೆ. ನಾವು ಮಿಥ್ಯಾ ವಾಸ್ತವತೆ ಅಥವಾ ಮಾಯಾಸತ್ಯ ಎಂದು ಕರೆಯೋಣ.

ಅನಾದಿಕಾಲದಿಂದ ಮಾನವಜೀವಿ ತನ್ನ ಸಮಗ್ರ ಅನುಭವಗಳನ್ನು ಎರಡು ಭಾಗಗಳಾಗಿ ವಿಂಗಡಿಸಿಕೊಂಡಿದ್ದಾನೆ; ಒಂದು, ಇಂದ್ರಿಯಗ್ರಾಹ್ಯವಾದ ವಾಸ್ತವ ಲೋಕ; ಇನ್ನೊಂದು ವಾಸ್ತವತೆಯ ಆಧಾರದ ಮೇಲೆ ತನ್ನ ಮನಸ್ಸು ಸೃಷ್ಟಿಸಿಕೊಳ್ಳುವ ಕಲ್ಪನಾಲೋಕ. ಇವೆರಡು ಲೋಕಗಳನ್ನು ಬೇರ್ಪಡಿಸುವ ಗೆರೆ ಮಂಕಾಗಿ ಹೋದಾಗ? ತಾನು ಕಲ್ಪಿಸಿಕೊಳ್ಳುವುದನ್ನು ನಿಜವೋ ಎಂಬಂತೆ ಅನುಭವಿಸಲು ಸಾಧ್ಯವಾಗಬಹುದೇ? ನೋಡೋಣ.

ಕಂಪ್ಯೂಟರ್ ನಿರ್ಮಿತ ಮಾಯಾ ವಾಸ್ತವಲೋಕದ ಬಗ್ಗೆ ಸರಳವಾಗಿ ತಿಳಿದುಕೊಳ್ಳುವ ಮೊದಲು ಕಂಪ್ಯೂಟರ್ ಬಗ್ಗೆ ನಾಲ್ಕು ಮಾತು ಜ್ಞಾಪಿಸಿಕೊಳ್ಳೋಣ. ಸರಳ ಕಂಪ್ಯೂಟರ್‌ಗಳ ಪ್ರಥಮ ಆವಿಷ್ಕಾರವಾದಾಗ ಅವು ಕೇವಲ ಗಣಕ ಯಂತ್ರಗಳೆಂದೇ ಪರಿಗಣಿಸಲ್ಪಟ್ಟಿದ್ದುವು. ನಮಗೆ ಬೇಸರ ತರಿಸುವ ಕೂಡುವ, ಕಳೆಯುವ, ಗುಣಿಸುವ, ಭಾಗಿಸುವ ಅಸಂಖ್ಯಾತ ಕೆಲಸಗಳ್ನು ಅವು ಅಲ್ಪ ಸಮಯದಲ್ಲಿ ಮಾಡಿದಾಗ ಅದು ವರದಾನವೇ ಆಯಿತು. ಆದರೆ ಕಂಪ್ಯೂಟರ್‌ಗಳ ಬೆಳವಣಿಗೆ ಇಷ್ಟಕ್ಕೇ ನಿಲ್ಲಲಿಲ್ಲ. ಅನೇಕ ಕ್ಲಿಷ್ಟ ಸಮಸ್ಯೆಗಳನ್ನು ಪರಿಹರಿಸಲೂ ಅವು ಸಹಾಯಕವಾಗಬಲ್ಲವು ಎಂದು ಮನವರಿಕೆ ಆಯಿತು. ಬಸ್ ಹಾಗೂ ರೈಲ್ವೆ ನಿಲ್ದಾಣಗಳಲ್ಲಿ, ರಿಸರ್ವೇಷನ್ ಕೌಂಟರ್‌ಗಳಲ್ಲಿ ಉಪಯೋಗಿಸುವ ಚಿಕ್ಕ ಕಂಪ್ಯೂಟರ್‌ಗಳಿಂದ ಹಿಡಿದು, ದೊಡ್ಡ ದೊಡ್ಡ ವಿಮಾನಗಳಲ್ಲಿ ಚಾಲಕನಿಗೆ ಮಾರ್ಗದರ್ಶಿಯಾಗಿ ಕೆಲಸ ಮಾಡುವ ಸಮರ್ಥ ಕಂಪ್ಯೂಟರ್‌ಗಳವರೆಗೆ ಅವುಗಳ ವ್ಯಾಪ್ತಿ ಬೆಳೆಯಿತು. ಕಂಪ್ಯೂಟರ್ ವಿಜ್ಞಾನಿಗಳು ಸದ್ದಿಲ್ಲದೆ ಕೆಲಸ ಮಾಡುತ್ತಾ, ಊಹಿಸಲೂ ಸಾಧ್ಯವಿಲ್ಲದಿದ್ದ ಉಪಯೋಗಗಳಿಗೆ ಕಂಪ್ಯೂಟರ್‌ನ್ನು ಬಳಸುವ ಸಾಧ್ಯತೆಯನ್ನು ಕಂಡುಕೊಂಡರು.

ಯಾವ ರೀತಿ ಕಂಪ್ಯೂಟರ್‌ನ್ನು ಬಳಸಿ ಕಾರ್, ಬಸ್ ಇತ್ಯಾದಿ ವಾಹನಗಳನ್ನು ಬಿಡಲು ಕಲಿಯಬಹುದೆಂದು ಇತ್ತೀಚೆಗೆ ಟಿವಿಯಲ್ಲಿ ವಿಜ್ಞಾನ ಕಾರ್ಯಕ್ರಮವೊಂದರಲ್ಲಿ ತೋರಿಸಲಾಯಿತು. ನಾವು ನಿಜವಾದ ರಸ್ತೆಯಲ್ಲಿ ವಾಹನ ಬಿಡುತ್ತಿದ್ದೇವೆ ಎಂದೇ ಕಂಪ್ಯೂಟರ್ ಮುಂದೆ ಕುಳಿತು ಕಲಿಯುವವರಿಗೆ ಅನಿಸಿಬಿಡುತ್ತದೆ. ತೆರೆಯ ಮೇಲೆ ಕಂಡು ಬರುವ ರಸ್ತೆ, ಅದರಲ್ಲಿನ ವಾಹನ ಸಂಚಾರ ಎಲ್ಲಾ ನಿಜ ಜೀವನದ ಸನ್ನಿವೇಶಗಳಂತೇ ಇರುತ್ತವೆ. ರಸ್ತೆಯಲ್ಲಿ ಒಮ್ಮೊಮ್ಮೆ ತಿರುವು ಕಾಣಿಸಿಕೊಳ್ಳುತ್ತದೆ; ಎದುರಿನಲ್ಲಿ ವಾಹನಗಳು ಬರುತ್ತವೆ. ಇಂತಹ ಸನ್ನಿವೇಶದಲ್ಲಿ ಚಾಲಕ ಹೇಗೆ ನಡೆದುಕೊಳ್ಳಬೇಕೋ ಅದಕ್ಕೆ ಬೇಕಾದ ಎಲ್ಲಾ ತೋರಿಕೆ ಅಥವಾ ಭ್ರಮೆ ತೆರೆಯಮೇಲೆ ನಿರ್ಮಾಣವಾಗುತ್ತದೆ. ಎದುರಿನಲ್ಲಿ ಕುಳಿತು ಕಲಿಯುವವರಿಗೆ ರಸ್ತೆಯ ಭದ್ರಿತ ಬಿಂಬ ಅವರೆಡೆಗೆ ಚಲಿಸುತ್ತಿರುವಂತೆ ಕಾಣುವುದರಿಂದ ತಾವು ರಸ್ತೆಯಲ್ಲಿ ವಾಹನ ಬಿಡುತ್ತಾ ಮುಂದುವರೆಯುತ್ತಿದ್ದೇವೆ ಎಂಬ ಭ್ರಮೆ ಉಂಟಾಗುತ್ತದೆ.

`ವರ್ಚುವಲ್ ರಿಯಾಲಿಟಿ' ಅಥವಾ ಕನ್ನಡದಲ್ಲಿ `ಮಾಯಾಸತ್ಯ'ವೆಂದು ಕರೆಯಬಹುದಾದ ಕ್ಷೇತ್ರದಲ್ಲಿ ಹೇಗೆ ಕಂಪ್ಯೂಟರನ್ನು ಉಪಯೋಗಿಸಬಹುದೆಂಬುದರ ಬಗ್ಗೆ ಇತ್ತೀಚೆಗೆ ಹೆಚ್ಚು ತಿಳಿದಿದ್ದಾರೆ. ಮಾಯಾಸತ್ಯ ಎಂದರೇನು? ಹೆಸರೇ ಹೇಳುವಂತೆ ಅದು ವಾಸ್ತವಿಕತೆ ಅಲ್ಲ; ಕಂಪ್ಯೂಟರ್ ಸಹಾಯದಿಂದ ನಿರ್ಮಿತವಾದ, ವಾಸ್ತವತೆಯನ್ನೇ ಹೋಲುವ ಕೃತಕಲೋಕ. ಕಂಪ್ಯೂಟರ್ ಗ್ರಾಫಿಕ್ಸ್ ಅಂದರೆ ಗಣಿತ ಯಂತ್ರ ನಿರ್ಮಿತ ಚಿತ್ರಣದ ಆಧಾರದಿಂದ ಸೃಷ್ಟಿಸಲ್ಪಟ್ಟ ಲೋಕ ಇದು.

ಕಂಪ್ಯೂಟರ್ ವಿಜ್ಞಾನ ಬಲ್ಲವರು ಗಣಿತ ಶಾಸ್ತ್ರದ ಸಹಾಯದಿಂದ ಬಗೆಬಗೆಯ ಚಿತ್ರಗಳನ್ನು ತೆರೆಯ ಮೇಲೆ ಮೂಡಿಸಬಲ್ಲರು. ಪ್ರೊಫೆಸರ್ ಹರ್ಬರ್ಟ್ ಫ್ರಾಂಕ್ ಎಂಬವರು ಹೇಳಿದಂತೆ `ಗಣಿತ ಶಾಸ್ತ್ರಜ್ಞ ಆಯಾ ಚಿತ್ರದ ನಿರ್ಮಾಣಕ್ಕೆ ಬೇಕಾಗುವ ಬರೆಯುವ ಸಲಕರಣೆ' - ಕಂಪ್ಯೂಟರ್ ಸಾಫ್ಟ್‌ವೇರ್ ಅಥವಾ ಲಕ್ಷಣವರವನ್ನು ಮೊದಲು ತಯಾರಿಸುತ್ತಾರೆ.

ಇದೊಂದು ಕ್ರಮ ವಿಧಿ; ಕಂಪ್ಯೂಟರ್‌ಗೆ `ಹೀಗೆ ಚಿತ್ರಿಸು' ಎಂದು ಹೇಳುವ ವಿಶೇಷ ಆಜ್ಞೆಗಳ ಭಾಷೆ. ಅನಂತರ ಚಿತ್ರದ ರೇಖೆಯ ಉದ್ದವನ್ನು, ಅಗಲವನ್ನು, ಆಕೃತಿಯನ್ನು ಬದಲಾಯಿಸುವ ಎಲ್ಲಾ ಆಜ್ಞೆಗಳನ್ನು ಕೇವಲ ಗುಂಡಿಗಳನ್ನು ಒತ್ತಿ ನೀಡುತ್ತಾರೆ. ಅದ್ಭುತ ಭೂದೃಶ್ಯಗಳು, ಜ್ಯಾಮಿತಿಯ ಬಗೆ ಬಗೆಯ ವಿನ್ಯಾಸಗಳು ಎಲ್ಲವನ್ನೂ ಈ ರೀತಿ ವರ್ಣರಂಜಿತವಾಗಿ ಚಿತ್ರಿಸಬಹುದು. (ಇದಕ್ಕಾಗಿ ಸಂಬಂಧಪಟ್ಟ ಗೆರೆಗಳು ದೂರದಲ್ಲಿ ಮಂಕಾಗಿ ಕಾಣುವಂತೆ ಮಾಡುತ್ತಾರೆ).

ಉಚ್ಚ ಸಾಮರ್ಥ್ಯದ ಕಂಪ್ಯೂಟರ್‌ಗಳನ್ನು ಈ ಕೆಲಸಕ್ಕೆ ಉಪಯೋಗಿಸುತ್ತಾರೆ. ಇವು ಸೂಕ್ತ ದತ್ತಾಧಾರದ ಸಹಾಯದಿಂದ ಕ್ಲಿಷ್ಟ, ಮನರಂಜನಾತ್ಮಕ ಚಿತ್ರಗಳನ್ನು ತೆರೆಯ ಮೇಲೆ ಸೃಷ್ಟಿಸುವುದಲ್ಲದೇ ವೀಕ್ಷಕನ ಶಿರ ಹಾಗೂ ಇತರ ಅವಲಂಬಿತಗಳ ಚಲನೆಯನ್ನು ಸೂಕ್ಷ್ಮವಾಗಿ ಗ್ರಹಿಸಿ (ಇದಕ್ಕಾಗಿ ವೀಕ್ಷಕ ಧರಿಸಿರುವ, ಶಿರಸ್ತ್ರಾಣ, ಕೈಗವಸು ಇತ್ಯಾದಿಗಳಿಗೆ ಕೇಬಲ್ ಜೋಡಿಸಿರುತ್ತಾರೆ) ಆತ ಯಾವೆಡೆ, ಯಾವಾಗ ನೋಡುತ್ತಿದ್ದಾನೆ ಎಂಬುದನ್ನು ತಿಳಿದು ಕೊಳ್ಳುತ್ತವೆ. ವೀಕ್ಷಕನಾದರೋ ತೆರೆಯ ಮೇಲೆ ಕಂಡು ಬರುತ್ತಿರುವ ಬಿಂಬಗಳೊಡನೆ ಅಂತರ್ವರ್ತಿಸಲು ಕೈಗವಸು, ಸನ್ನೆಗೋಲು, ಅನ್ವೇಷಕ ಇತ್ಯಾದಿ ಸಲಕರಣೆಗಳನ್ನು

ಬಳಸುತ್ತಾನೆ. ಕೊನೆಗೆ ತೆರೆಯ ಮೇಲೆ ಕಂಡು ಬರುತ್ತಿರುವ ಬಿಂಬಗಳು ಹಾಗೂ ಅದಕ್ಕೆ ವೀಕ್ಷಕ ತೋರುವ ಪ್ರತಿಕ್ರಿಯೆ ಇವುಗಳ ಪರಸ್ಪರ ಮೇಳನದಿಂದಾಗಿ ಬೇರೊಂದು ಅದ್ಭುತ ಲೋಕವೇ ಸೃಷ್ಟಿಯಾಗಿ ಬಿಡುತ್ತದೆ. ತನ್ನ ಅನುಭವಕ್ಕೆ ಬರುತ್ತಿರುವುದೆಲ್ಲಾ ಸತ್ಯ ಎಂದು ವೀಕ್ಷಕ ನಂಬಿ ಆ ಮಾಯಾಲೋಕದಲ್ಲಿ ಲೀನನಾಗಿ ಬಿಡುತ್ತಾನೆ.

ಇಲ್ಲಿ ನೋಡಿ ಒಂದು ಉದಾಹರಣೆ: ಸ್ಕಾಟ್ ಎಂಗಲ್‌ಬರ್ಟ್ ಎಂಬಾತ ರ್‍ಯಾಂಡಿಪಾಶ್ ಎಂಬ ಕಂಪ್ಯೂಟರ್ ಶಾಸ್ತ್ರ ಪ್ರವೀಣನ ಮಾರ್ಗದರ್ಶನದಲ್ಲಿ ಈ ಅದ್ಭುತಲೋಕ ಪ್ರವೇಶ ಮಾಡಿದ. ಅದನ್ನು ಅವನು ಹೀಗೆ ವರ್ಣಿಸಿದ್ದಾನೆ. ``ಆ ಮಾಯಾಲೋಕ ಪ್ರವೇಶವು ನನ್ನ ಶಿರಸ್ತ್ರಾಣದ ಮುಖಭಾಗಕ್ಕೆ ಜೋಡಿಸಿದ್ದ ಎರಡು ಪುಟ್ಟ ಟಿವಿ ತೆರೆಗಳಿಂದ (ಟಿವಿ ಸ್ಕ್ರೀನ್) ಸಾಧ್ಯವಾಯಿತು. ಒಂದೊಂದು ಕಣ್ಣಿನ ಮುಂದೆ ಒಂದೊಂದು ತೆರೆ ಇದ್ದಿದ್ದರಿಂದ (ಒಂದು ಕಣ್ಣು ನೋಡುವ ದೃಶ್ಯದ ಕೋನ ಇನ್ನೊಂದಕ್ಕಿಂತ ಕೊಂಚ ಭಿನ್ನವಾಗಿರುತ್ತದೆ ಅಲ್ಲವೇ?) ಮೂರು ಆಯಾಮದ ದೃಶ್ಯ ಸೃಷ್ಟಿಯಾಯಿತು. ನಾನು ನೋಡಿದ್ದ ಮೂರು ಆಯಾಮದ ಚಲನ ಚಿತ್ರಗಳಿಗಿಂತ ಇದು ಭಿನ್ನವಾಗಿತ್ತು; ನಾನೇ ಆ ಸನ್ನಿವೇಶದಲ್ಲಿ ಇದ್ದಂತೆ ನನಗೆ ಭಾಸವಾಯಿತು. ಅಡ್ಡಾಡುತ್ತಾ ಕೈಗವಸು ಧರಿಸಿದ ನನ್ನ ಕೈಗಳಿಂದ ಸುತ್ತಮುತ್ತಲಿನ ಪದಾರ್ಥಗಳನ್ನು ನಾನು ಮುಟ್ಟಬಹುದಾಗಿತ್ತ. ಬಾಹ್ಯಾಕಾಶದ, ಯಾವುದೋ ಸೂರಿಲ್ಲದ ಕೋಣೆಯಂತೆ ಕಾಣುತ್ತಿದ್ದ ಸ್ಥಳದಲ್ಲಿ ನಾನು ಗೋಡೆಯನ್ನು ದಿಟ್ಟಿಸಿದೆ; ಕೆಳಗೆ ನೋಡಿದಾಗ ನೀಲಾಕಾಶ ಹಾಗೂ ಮೋಡಗಳು ಕಂಡವು. ಹಿಂದಿರುಗಿ ನೋಡಿದಾಗ ನೀಲಾಕಾಶ ಹಾಗೂ ಮೋಡಗಳು ಕಂಡವು. ನಾನು ಒಂದು ಮೇಜಿನ ಮೇಲಿದ್ದ ಉರಿಯುತ್ತಿರುವ ಮೇಣದ ಬತ್ತಿಯನ್ನು ಕೈಗವಸು ಧರಿಸಿದ ನನ್ನ ಕೈಗಳಿಂದ ಎತ್ತಿ ಒಂದು ಕಿರಿದಾದ ಷೆಲ್ಫ್ ಮೇಲೆ ಇಟ್ಟೆ.

``ಇದ್ದಕ್ಕಿದ್ದಂತೆ ಆ ಕೋಣೆಯಲ್ಲಿ ದೊಡ್ಡ ತಿಮಿಂಗಿಲವೊಂದು ನನ್ನನ್ನು ತಿನ್ನಲು ಹವಣಿಸುವಂತೆ ಕಂಡಿತು. ನನ್ನ ತಾರ್ಕಿಕ ಬುದ್ಧಿ `ಇದೆಲ್ಲ ಭ್ರಮೆ' ಎಂದರೂ ಅನುಮಾನ ಉಳಿದೇ ಇತ್ತು. ಆಗ ರ್‍ಯಾಂಡಿಪಾಶ್ ಅಭಯ ನೀಡುತ್ತಾ `ಅದು ನಿನ್ನ ಮೇಲೆ ಆಕ್ರಮಣಕ್ಕೆ ಬಂದರೂ ಏನೂ ತೊಂದರೆ ಇಲ್ಲ; ಅದು ನಿನ್ನನ್ನು ನಿಜವಾಗಿ ಸ್ಪರ್ಶಿಸಲಾರದು' ಎಂದರು. ಹೀಗಿದೆ ಈ ಮಾಯಾಲೋಕದ ಗಾರುಡಿ?"

ಗ್ಯಾರೀ ಬಿಷಪ್ ಎಂಬ ಕಂಪ್ಯೂಟರ್ ವಿಜ್ಞಾನಿ ಹೇಳುವಂತೆ `ಈ ಮಾಯಾ ಲೋಕದಲ್ಲಿ ಕಾಣುವುದೆಲ್ಲವೂ ನಿಜವಾಗಿ ವಾಸ್ತವತೆ ಎಂಬ ಭ್ರಮೆ ಹುಟ್ಟಿಸುವುದೇ `ವರ್ಚುವಲ್ ರಿಯಾಲಿಟಿ'ಯ ಗುರಿ. ಹಾಗಾದರೆ ಕೇವಲ ಮನೋರಂಜನೆಯೊಂದೇ ಈ ಎಲ್ಲಾ ಚಟುವಟಿಕೆಗಳ ಗುರಿಯೇ? ನೋಡೋಣ.

ವೈದ್ಯಕೀಯ ಕ್ಷೇತ್ರದ ಒಂದು ಉದಾಹರಣೆ ತೆಗೆದುಕೊಳ್ಳೋಣ. ಟೆರಿ ಪ್ಲಂಬ್ ಎಂಬ ಹುಡುಗಿ ಅಪರೂಪದ ಅನುವಂಶಿಕ ಕೊರತೆಯಿಂದಾಗಿ ಕುರೂಪಿಯಾಗಿದ್ದಳು. ಪರಸ್ಪರ ಹೆಚ್ಚು ಅಂತರದಲ್ಲಿದ್ದ ಕಣ್ಣುಗಳು, ಚಪ್ಪಟೆಯಾದ ಕೆನ್ನೆಯ ಮೂಳೆ, ವಿಚಿತ್ರ ದವಡೆಯಿಂದಾಗಿ ಆಕೆ ಕುರೂಪಿಯಾಗಿದ್ದಳು. ಇದಕ್ಕಾಗಿ ತನ್ನ ಹದಿವಯಸ್ಸಿನಲ್ಲಿ ಆಕೆ ಶಸ್ತ್ರ ಚಿಕಿತ್ಸೆ ಮಾಡಿಸಿ ಕೊಳ್ಳಲು ನಿರ್ಧರಿಸಿದಳು. ಡಾ! ಡೇವಿಡ್ ಆಲ್ಟೊಬೆಲ್ಲಿ ಎಂಬ ತಜ್ಞವೈದ್ಯ, ಕಂಪ್ಯೂಟರ್ ತಜ್ಞರ ಸಹಾಯದಿಂದ ಆಕೆಯ ಮುಖದ ಬಗೆಗಿನ ಅಂಶಗಳನ್ನು ಅತಿ ಸಮರ್ಥ ವಿ.ಆರ್. ಕಂಪ್ಯೂಟರ್‌ಗೆ (ವರ್ಚುವಲ್ ರಿಯಾಲಿಟಿ ಕಂಪ್ಯೂಟರ್) ಕೊಟ್ಟಾಗ ಆಕೆಯ ಶಿರದ ಮೂರು ಆಯಾಮದ ಚಿತ್ರವನ್ನು ಅದು ತೋರಿಸಿತು. ಒಂದು ವಿದ್ಯುತ್ ಸ್ಕಾಲ್ಪೆಲ್ (ಶಸ್ತ್ರ ವೈದ್ಯನ ಹಗುರವಾದ ಸಣ್ಣ ಚೂರಿ) ಸಹಾಯದಿಂದ ಆತ ಕಂಪ್ಯೂಟರ್ ನಿರ್ಮಿತ ಮಾಯಾಲೋಕದಲ್ಲಿ ವಿಹರಿಸಿ ಆಕೆಯ ಶಿರವನ್ನು ಅಲ್ಲಲ್ಲಿ ಕೆತ್ತಿ, ನಾನಾ ರೀತಿ ಸರಿಪಡಿಸಿ ನೋಡಿ, ಶಸ್ತ್ರ ಕ್ರಿಯೆ ಹೇಗೆ ಮಾಡಬೇಕೆಂಬುದರ ಬಗ್ಗೆ ನಿರ್ಧಾರಕ್ಕೆ ಬಂದ. ಮುಂದೆ ಆತ ಬಿಡಿಸಿದ ಚಿತ್ರದ ಸಹಾಯದಿಂದ ಆ ಹುಡುಗಿಗೆ ಯಾವ ರೀತಿಯ ಪ್ಲಾಸ್ಟಿಕ್ ಶಸ್ತ್ರ ಚಿಕಿತ್ಸೆ - ಅಂದಗಾರಿಕೆ ಚಿಕಿತ್ಸೆ - ಸರಿಹೊಂದಬಹುದೆಂದು ನಿರ್ಧರಿಸಲಾಯಿತು. 22 ಗಂಟೆಗಳ ಕಾಲ ನಡೆದ ಶಸ್ತ್ರ ಚಿಕಿತ್ಸೆಯ ಅನಂತರ ಆಕೆ ತನ್ನ ಮುಖದಲ್ಲಿನ ಅಂಗಗಳ ಜೋಡಣೆಯ ಬಗ್ಗೆ ತೃಪ್ತಿ ವ್ಯಕ್ತ ಪಡಿಸಿದಳು. ವೈದ್ಯಕೀಯ ವಿದ್ಯಾರ್ಥಿಗಳು ಈ ಮಾಯಾಲೋಕದಲ್ಲಿ, ಮಾಯಾ ಆಪರೇಷನ್ ಥಿಯೇಟರುಗಳಲ್ಲಿ, ಕೈಯಲ್ಲಿ ಸ್ಕಾಲ್ಪೆಲ್ ಹಿಡಿದು, ಮಾನವ ದೇಹದ ಭಾಗಗಳನ್ನು ಕೊಯ್ದು, ದುರ್ಮಾಂಸಗಳನ್ನು ತೆಗೆಯುವುದನ್ನು ಅಭ್ಯಾಸ ಮಾಡಿಕೊಳ್ಳಬಹುದು. ಅನುಭವ ಪಡೆಯಬಹುದು. ಇಂಥ ಅನುಭವಗಳು ನೈಜತೆಯನ್ನು ಎಷ್ಟು ಹೋಲುತ್ತವೆ ಎಂದರೆ ನೈಜ ಜೀವನದ ಅಂತಹ ಸನ್ನಿವೇಶಗಳನ್ನು ಅವರು ಮುಂದೆ ಯಶಸ್ವಿಯಾಗಿ ಎದುರಿಸುತ್ತಾರೆ.

ದೇಶದ ರಕ್ಷಣಾ ಪಡೆಗಳ ತರಬೇತಿಗೆ ಈ ಹೊಸ ಬೆಳವಣಿಗೆ ಅದ್ಭುತವಾಗಿ ಸಹಾಯಕವಾಗಬಲ್ಲದು. ಭದ್ಮಿತ ಕದನವನ್ನು ಎಷ್ಟು ನೈಜವಾಗಿ ಚಿತ್ರಿಸಲು ಸಾಧ್ಯವೆಂದರೆ, ತರಬೇತಿ ಪಡೆಯುವವರು ಈ ಮಾಯಾಲೋಕದ ಅನುಭವಾನಂತರ ಮೈ ಬೆವರುತ್ತಾ ಹೊರಗೆ ಬರುವವರಂತೆ.

ಇನ್ನು ವ್ಯಾಪಾರ, ವಾಣಿಜ್ಯ ಕ್ಷೇತ್ರದವರು ಈ ಹೊಸ ಆವಿಷ್ಕಾರದ ಪ್ರಯೋಜನ ಪಡೆಯದಿದ್ದಾರೆಯೇ? ಜಪಾನಿನ ಒಂದು ವ್ಯಾಪಾರೀ ಸಂಸ್ಥೆಯಲ್ಲಿ ಗ್ರಾಹಕರು ಹೆಡ್‌ಸೆಟ್ ಹಾಗೂ ಕೈಗವಸು ಧರಿಸಿ ಕಂಪ್ಯೂಟರ್ ನಿರ್ಮಿತ ಲೋಕ ಪ್ರವೇಶಿಸಿ ಅಲ್ಲಿ ತಮಗಾಗಿ ಸುಸಜ್ಜಿತವಾದ ಅಡುಗೆ ಮನೆಯ ವಿನ್ಯಾಸ, ಪದಾರ್ಥಗಳ ಜೋಡಣೆಯನ್ನು ವೀಕ್ಷಿಸಿ ಪರೀಕ್ಷಿಸುತ್ತಾರೆ. ಎಲ್ಲಾ ನಿಜವೋ ಎಂಬಂತೆ ಕ್ಯಾಬಿನೆಟ್‌ಗಳ ಬಾಗಿಲನ್ನು ಹಾಕುವುದು, ತೆಗೆಯುವುದು ಎಲ್ಲಾ ಅವರು ಮಾಡಬಹುದು.

ಅಡುಗೆ ಮನೆಯಾ ಮಾತು ಹಾಗಿರಲಿ. ದೊಡ್ಡ ಬೋಯಿಂಗ್ ವಿಮಾನಗಳ ಒಳರೂಪವನ್ನು ಮಾಯಾಲೋಕದಲ್ಲಿ ಚಿತ್ರಿಸಿದ್ದಾರೆ. ಅವುಗಳ `ಏನು ಎಂತು'ಗಳ ಬಗ್ಗೆ ನಿಜವಾದ ವಿಮಾನ ನೋಡಿದಂತೆಯೇ ಪರೀಕ್ಷೆ ಮಾಡಬಹುದು.

ನಮ್ಮಲ್ಲಿ ಅನೇಕರು ಪ್ಲಾನೆಟೇರಿಯಂಗಳಿಗೆ ಹೋಗಿ ಬಂದಿದ್ದೇವಲ್ಲವೇ? ಅಲ್ಲಿನ ಬಗೆ ಬಗೆಯ ಗ್ರಹ, ನಕ್ಷತ್ರ ಪ್ರದರ್ಶನಗಳನ್ನು ನೋಡಿ ಆನಂದಿಸಿದ್ದೇವಲ್ಲವೇ? ಅದರ ನೂರರಷ್ಟು ನೈಜ ವಾತಾವರಣದ `ಬಾಹ್ಯಾಕಾಶ', ಮಿಥ್ಯಾ ವಾಸ್ತವತೆಯ ತಂತ್ರದ ಮೂಲಕ ಸೃಷ್ಟಿಯಾಗಲಿದೆ.

ಇಂತಹ ಬಣ್ಣದ ಮಾಯಾಲೋಕವನ್ನು ಮನೋರಂಜನೆಗೆ ಬಳಸಲಿದ್ದಾರೆಯೇ? ಅಮೆರಿಕದ ಚಿಕಾಗೋ ನಗರದಲ್ಲಿ ಜನಕ್ಕೆ ಮನೋರಂಜನೆ ಕೊಡುವುದರಲ್ಲಿ ನಿರತವಾದ ಒಂದು ಸಂಸ್ಥೆ ವಿ.ಆರ್. ತಂತ್ರ ಜ್ಞಾನದ ಮೂಲಕ ಅಪರೂಪದ ರೋಮಾಂಚಕಾರೀ ಅನುಭವಗಳನ್ನು ಜನತೆಗೆ ಕೊಡುತ್ತಿದೆ. ನೂರಾರು ಜನರು ತಲಾ 9 ಡಾಲರ್ ಟಿಕೆಟ್ ತೆಗೆದುಕೊಂಡು 30 ನಿಮಿಷ ಕಾಲ ಈ ಅದ್ಭುತ ಮಾಯಾಲೋಕವನ್ನು ಪ್ರವೇಶ ಮಾಡುತ್ತಾರೆ.

ಮನೆ ಮನೆಗೂ ಈ ವಿ.ಆರ್. ಕಂಪ್ಯೂಟರ್‌ಗಳು ಪ್ರವೇಶಿಸಿದ್ದೇ ಆದರೆ ಒಂಟಿತನ, ಬೇಸರಗಳನ್ನು ದೂರೀಕರಿಸಬಹುದೇನೋ! ಯಾವುದೇ ವ್ಯಕ್ತಿಗೆ ಬೇಕಾದಾಗ ಕಂಪ್ಯೂಟರ್‌ಗಳ ಸಹಾಯದಿಂದ ವಾಸ್ತವ ಲೋಕವನ್ನೇ ಹೋಲುವ ಮತ್ತೊಂದು ಮಾಯಾಲೋಕವನ್ನೇ ಸೃಷ್ಟಿಸಬಹುದಾದರೆ ತಂತ್ರ ಜ್ಞಾನದ ಎಲ್ಲೆ ನಮ್ಮ ಕಲ್ಪನಾ ಶಕ್ತಿಯಷ್ಟೇ ವಿಸ್ತಾರವಾಗುತ್ತದೆ.

●

# ಕೆ. ಕೆ. ಹೆಬ್ಬಾರ



ಕಲಾವಿದ ಹೆಬ್ಬಾರ ವಿಶ್ವ ಕಲಾ ಇತಿಹಾಸದಲ್ಲಿ ಲೀನ. ಜೀವನದ ``ಹಾಡುವ ರೇಖೆ''ಗಳನ್ನು ನಿರ್ಮಿಸಿದ ಅಪ್ರತಿಮ ಕಲಾದೃಷ್ಟಾರ ಇನ್ನು ನಮಗೆ ನೆನಪು ಮಾತ್ರ. ಆದರೆ ಅವರ ಅಪರಿಮಿತ ಕಲಾ ಚಿತ್ರಗಳು ನಮಗೆ ಅವರು ಬಿಟ್ಟು ಹೋದ ಅತ್ಯಮೂಲ್ಯ ಆಸ್ತಿ.

ಅವರ ಜೀವನ ಸರಳ ಸುಂದರ. ಕೃತಿಯೂ ಅಷ್ಟೇ. ಅತಿ ವಿರಳವೆನಿಸಬಹುದಾದ ತುಂಬು ಜೀವನದಲ್ಲಿ ಸಾಧನೆಯ ಸೋಪಾನದ ಮೆಟ್ಟಿಲನ್ನು ಏರಿ ವಿಜೃಂಭಿಸಿದ ಕಲಾ ತಪಸ್ವಿ ಅವರು. ಅವರ ಕೃತಿಗಳು ಕಲಾಭ್ಯಾಸಿಗಳಿಗೆ, ಕಲಾನುಭವಿಗಳಿಗೆ ಸೃಷ್ಟಿಯ ವೈವಿಧ್ಯತೆಯನ್ನು ಚಿರನೂತನತೆಯಿಂದ ಬಣ್ಣಿಸುವ ಮಾಧ್ಯಮ ಎನ್ನುವುದರಲ್ಲಿ ಎರಡು ಮಾತಿಲ್ಲ. ದಕ್ಷಿಣ ಕನ್ನಡದ ಕಟ್ಟಿಂಗೇರಿಯಿಂದ ಆರಂಭವಾದ ಅವರ ಜೀವನ ಮುಂಬಯಿಯಲ್ಲಿ ಪರ್ಯವಸಾನ. ನಾಡಿನ ಕಲಾ ವಿಕಸನಕ್ಕೆ ಅವರ ಆರು ದಶಕಗಳ ಕೊಡುಗೆ ಅಪ್ರತಿಮ. ಆರ್ಷೇಯ ಸಂಪ್ರದಾಯ ನಿಷ್ಠೆಯನ್ನು ಆಧುನಿಕ ಕಾಲ ಪ್ರಜ್ಞೆ ಹಾಗು ಭಾವನೆಗಳಿಗೆ ಸಮೀಕರಿಸಿದ ಕಲಾ ಋಷಿಯಾತ.

ಮುಂಬಯಿಯ ಕರ್ನಾಟಕ ಸಂಘದಲ್ಲಿ ಅವರದೊಂದು ರೇಖಾ ಚಿತ್ರವಿದೆ. ವಿದ್ಯಾ ನಿಧಿಯಾದ ಮಹ್ಷಿನದು. ಜ್ಞಾನದ ಪ್ರತೀಕವಾದ ಕಮಲದ ಹೂವನ್ನು ಬಲಗೈನಿಂದ ಆಶೀಸ ಹೊರಟಿರುವ ಬ್ರಹ್ಮರ್ಷಿಯ ಮುಖದಲ್ಲಿನ ತೇಜಸ್ಸು, ಕಣ್ಣುಗಳಲ್ಲಿನ ಕಾಂತಿ, ಜಡೆಯನ್ನು ಮೂಡಿಸಿದ ರೇಖೆಗಳು, ಜ್ಞಾನ ಮುದ್ರೆಯಿಂದ ನೆಲವನ್ನು ಮುಟ್ಟುತ್ತಿರುವ ಎಡಹಸ್ತ, ಸಿದ್ಧಾಸನದಲ್ಲಿ ಆಸೀನನಾದ ಬ್ರಹ್ಮ ಋಷಿ ಸಮಗ್ರವಾಗಿ ಪ್ರತಿಮೆಗಳಿಂದ, ಪ್ರತೀಕಗಳಿಂದ ಹೆಬ್ಬಾರರ ಕಲಾ ಪರಿಪೂರ್ಣತೆಯನ್ನು ಪ್ರತಿಬಿಂಬಿಸುತ್ತದೆ.

ಕು. ಶಿ. ಹರಿದಾಸ ಭಟ್ಟರ ಮಹತ್ಕೃತಿ - ಕಟ್ಟಿಂಗೇರಿ ಕೃಷ್ಣ ಹೆಬ್ಬಾರ: ಕಲೆ ಮತ್ತು ಬದುಕು ಹೆಬ್ಬಾರ್‌ರ ಜೀವನ, ಕಲೆ ಮತ್ತು ಸಾಧನೆಯನ್ನು ಬಹು ಸುಂದರವಾಗಿ ನಿರೂಪಿಸುವ ಒಂದು ಅತ್ಯಮೂಲ್ಯ ಪುಸ್ತಕ. ಅದರಲ್ಲಿರುವ `ಯಾರಿವನು?' ಕವನ ಬಹು ರಮ್ಯವಾಗಿ ಅರ್ಥವತ್ತಾಗಿದೆ. ಅದು ಹೆಬ್ಬಾರರನ್ನು ಬಣ್ಣಿಸುವ ಒಂದು ಕಥನ ಕವನ. ಅವರ ಸಾಧನೆಯ ಸಿಂಹಾವಲೋಕನವನ್ನು ಮೂಡಿಸುತ್ತದೆ ಸಹೃದಯ ಕಲಾ ರಸಿಕರಲ್ಲಿ.

ಯಾರಿವನು?
ಕಲೆಯಾ ಕಾಯಕದಲ್ಲಿ ಮಾಗಿ ಹಣ್ಣಾದ
ಒಂದು ಚೇತನ
ತಾಯ ನೆರಳಲ್ಲಿ ಬಡತನದ ಕಷ್ಟಗಳಿಗೆ
ಎದೆಗೊಟ್ಟು ನಿಂತ ಸಾಹಸಿ
ಉಡುಪಿಯ ಸೀಮಿತ ವಲಯದಿಂದ ಪಡೆವಷ್ಟು
ಪಡೆದು ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು ನಡೆದು
ಮುಂಬಯಿಯೆಂಬ ಸಾಗರದಲ್ಲಿ
ಬಾಳದೋಣಿಯನ್ನು
ತೇಲಗೊಟ್ಟು ಗುರಿಮುಟ್ಟಿದ ಧೀರ
ಪರಿಸ್ಥಿತಿಗೆ ಸಡ್ಡು ಹೊಡೆಯದೆ ಸ್ವಸಾಮರ್ಥ್ಯದ
ಬಲದಿಂದಲೆ ರಾಷ್ಟ್ರದ ಉನ್ನತೋನ್ನತ
ಕಲಾವಲಯದಲ್ಲಿ ಮುದ್ರೆಯೊತ್ತಿದ ಹೆಬ್ಬಾರ.
ಯಾವುದೇ ಕಲಾಪಂಥಕ್ಕೆ ಬಂದಿಯಾಗದೆ
ಕಾಲಕಾಲಕ್ಕೆ ಬದಲಾಗುತ್ತ
ಸ್ವಕೀಯ ಕಲಾವಿಕಸನದ ಹೊಸಹೊಸ
ಆಯಾಮಗಳನ್ನು
ಹೂವಿನ ಪಕಳೆ ಬಿಡಿಸಿಕೊಳ್ಳುವಷ್ಟು ಸಹಜವಾಗಿ
ಬಿಡಿಸಿ ತೋರಿಸಿದ ಕಲಾಜಾಣ.
ಭಾರತೀಯ ಸಂಸ್ಕೃತಿಯಲ್ಲಿರುವ ಕಲಾಂಶಗಳನ್ನು
ಆಧುನಿಕವೆನಿಸುವ ಶೈಲಿಯಲ್ಲಿ ಮೂಡಿಸಲು
ಶಕ್ಯವೆಂಬುದನ್ನು ಕಲಾಜಗತ್ತಿಗೆ ಸಾರಿತೋರಿದ
ಸ್ವಕಾರ್ಯಧುರಂಧರ.
ಭಾರತೀಯ ಚಿತ್ರಕಲೆಗೆ ಕನ್ನಡ ತಾಯಿ ಕೊಟ್ಟ
ಕೊಡುಗೆ
ತೆರೆದ ಮನ, ಬಿರಿದ ಎದೆ
ಪರಿಸರದ ಗುಣಾಂಶಗಳನ್ನು ಹೀರಿಕೊಳ್ಳುವ
ಮೃದುಮಧುರ
ಸ್ಪಂದನ.
ಬೇಡವೇ ಬದುಕಿನ ಪ್ರವಾಹದಲ್ಲಿ
ಧೃತಿಗೆಡದ
ಈಸಬೇಕು, ಇದ್ದು ಜೈಸಬೇಕು ಎಂಬ ಛಲ
ನೇರ ನುಡಿ, ನೇರ ನಡೆ.
ತಾನೆಷ್ಟು ಎತ್ತರಕೇರಿದರೂ ಹಾಗೆ ಏರದವರ
ಮೇಲೆ
ಸೋತವರ ಮೇಲೆ, ಕಿರಿಯರ ಮೇಲೆ
ಅಪಾರ ಕರುಣೆ, ನೆರವು ಕೈ
ಮಗುವಿನಂತೆ ಮುಗ್ಧತೆ, ಸತ್ಯವಾಕ್ಯ
ಸರಳ, ಸ್ಪಷ್ಟ.
ಕಲಾವಿದನಾಗಿ, ಮನುಷ್ಯನಾಗಿ ಬಾಳಿದ ದೊಡ್ಡ ಬದುಕು
ಪುತ್ಥಳಿ, ಬಂಗಾರ.
ಸಾಹಸ, ಋಜುತ್ವ, ಅಂತಃಕರಣಗಳೇ ಅದರ
ಸಾರ ಚಿತ್ರಕಲಾ ಪ್ರಪಂಚದ ಒಂದು ಮಹಾಜೀವ
ಕಟ್ಟಿಂಗೇರಿ ಕೃಷ್ಣ ಹೆಬ್ಬಾರ.

ಮುಂಬಯಿಯ ಕಲಾ ರಸಿಕರಿಗಾಗಿ ಹೆಬ್ಬಾರರು ಮಾಹಿತಿ ಕೇಂದ್ರಕ್ಕೆ ತಮ್ಮ 23 ಚಿತ್ರಗಳ ಸ್ಲೈಡ್ಸ್ ಅನ್ನು ಕೊಡುಗೆಯಾಗಿ ನೀಡಿದ್ದಾರೆ. ಹಿರಿಯ ಸಾಹಿತಿ ವ್ಯಾಸರಾಯ ಬಲ್ಲಾಳರು ಈ ಕೃತಿಗಳ ಬಗ್ಗೆ ವಿವರಣೆ ನೀಡಿದನ್ನು ಕರ್ನಾಟಕ ಸಂಘದ ಮಾಹಿತಿ ಕೇಂದ್ರ ಕಲಾ ರಸಿಕರಿಗಾಗಿ ದೃಶ್ಯ-ಶ್ರವ್ಯ ಪ್ರದರ್ಶನಕ್ಕೆ ಏರ್ಪಾಟು ಮಾಡಿದೆ. ಕಲೆಯ ಅನುಭವ ಬೇಕಿದ್ದರೆ ರಸಾಸ್ವಾದನೆಗೆ ಬಂದು ಹೆಬ್ಬಾರರ ಜೀವನವನ್ನು ಕುರಿತು ಚಿಂತಿಸುವುದೇ ಒಂದು ಆನಂದ. ಅವರ ಕೃತಿ ವೀಕ್ಷಣೆ ಅಲೌಕಿಕ ಅನುಭಾವವನ್ನುಂಟು ಮಾಡುತ್ತದೆ. ಹೊಸ ಹೊಸ ಭಾವನೆಗಳನ್ನು ಪ್ರಚೋದಿಸುತ್ತದೆ. ಕೃತಿ ಕಲ್ಪನೆಗೆ ಒಂದು ಪ್ರತಿಮೆ ನೀಡುತ್ತದೆ. ಜೀವನವನ್ನು ಮಧುರವಾಗಿಸುತ್ತದೆ. ನಮ್ಮ ಜಗತ್ತಿನಲ್ಲಿ ಉಂಟಾಗಿರುವ ಕೋಲಾಹಲವನ್ನು ನಮಗೆ ಪ್ರತಿಬಿಂಬದಂತೆ ನೀಡಿ ವಿಶ್ವ ಮಾನವನನ್ನಾಗಿಸುತ್ತದೆ.

ಅವರಿದ್ದ ಕಾಲದಲ್ಲಿ ನಾವು ಬದುಕಿದ್ದೆವು. ಅವರ ಕೃತಿಗಳನ್ನು ಅವರ ಮಾತಿನಲ್ಲೇ ಕೇಳಿ ಆನಂದ ಪಟ್ಟಿದ್ದೆವು ಎಂಬುದೇ ಕಾಲ ನಮಗಿತ್ತ ಉಡುಗೊರೆ.

ಆ ದಿವ್ಯ ಕಲಾ ಚೇತನಕ್ಕೆ ನಮ್ಮ ವಿನಮ್ರ ನಮನ. ಆ ದಿವ್ಯ ಮಾನವನಿಗೆ ನಮ್ಮ ಅನಂತಾನಂತ ಪ್ರಣಾಮ.

Shri C. L. N. Iyengar came to Bombay as as young Engineer in 1931. A Rank student, this young man had a keen and a religious bent of mind. Apart from having served in ACC, Shri Iyengar had served as a City Engineer for some years and thus Bombay's Town Planning in the 40's and 50's bears some of his stamp. He worked as he Hon. Secretary of National Kannada Education Society during 1970. He also was later its Vice-President.

He served as Treasurer, Hon. Secretary, Vice-President of the Mysore Association between 1940 and 1968. He also served as the Chairman of Building Extension Committee during the third expansion programme of the Association in the year 1967-1969. Shri Iyengar was keen student of Vishistadwaitha. In the years from 1978 to 1996, his great passion was to coin words for each alphabet of any given word in English, with a metaphysical connotation. He also published a book named ``What is in a name & Indian Philosophy in Cricket Terminology".

He is the last among the first generation Association members, who served it with utmost devotion. He continued to visit the Association till the last whenever he was in Bombay. In his departure we have lost one more giant of yesteryears.

# 'ಸತ್ಯ ಧ್ಯಾನ ಪೀಠ'ದ ಕುಲಪತಿಗಳಾದ ಶ್ರೀ ವಿದ್ಯಾನರಸಿಂಹಾಚಾರ್ಯ

● ರೇಖಾ

*ಶ್ರೀ ವಿದ್ಯಾನರಸಿಂಹಾಚಾರ್ಯರು 'ವಿದ್ಯಾ ದಧಾತಿ ವಿನಯಂ' ಎಂಬ ಉಕ್ತಿಗೆ ಉತ್ತಮ ಉದಾಹರಣೆ. 'ಸತ್ಯ ಧ್ಯಾನ ಪೀಠ'ದ ಕುಲಪತಿಗಳಾದ ಇವರದು ಸರಳ ಹಾಗೂ ಆಕರ್ಷಿತ ವ್ಯಕ್ತಿತ್ವ. ಕಾವ್ಯಮಯ ಮಾತುಗಳಿಂದ ಎಂತಹ ಕ್ಲಿಷ್ಟ ಸಂಗತಿಗಳನ್ನು ಸಾಮಾನ್ಯ ಸಂಗತಿಯಾಗಿ ಮನದಟ್ಟಾಗುವಂತೆ ವಿವರಿಸಬಲ್ಲರು*

**ಈ** ಜಗತ್ತಿನಲ್ಲಿ ಜ್ಞಾನದಷ್ಟು ಶುದ್ಧ ಮತ್ತು ಮಹೋನ್ನತವಾದದ್ದು ಯಾವುದೂ ಇಲ್ಲ. `ನಹಿ ಜ್ಞಾನೇನ ಸದೃಶಂ' ಎನ್ನುತ್ತದೆ ಭಗವದ್ಗೀತೆ. ಇಲ್ಲಿಯ ಜ್ಞಾನದ ಬಗ್ಗೆ ಹೇಳಿರುವ ಮಾತುಗಳು ಆಧ್ಯಾತ್ಮಿಕ ಅರಿವನ್ನು ಉದ್ದೇಶಿಸಿ ಹೇಳಿರುವುದಾಗಿದೆ. ಜ್ಞಾನವನ್ನು ಕೊಡುವ ಗುರುವಿಗೆ ``ಗುರು ಬ್ರಹ್ಮ, ಗುರು ವಿಷ್ಣು, ಗುರು ದೇವೋ ಮಹೇಶ್ವರಃ ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ" ಎಂಬ ಶ್ಲೋಕ ತ್ರಿಮೂರ್ತಿಗಳ ಸ್ಥಾನವನ್ನು ಕಲ್ಪಿಸಿ ಕೊಡುತ್ತದೆ. ಕಲಿತ ವಿದ್ಯೆ, ಉದ್ಯೋಗ, ಅಧಿಕಾರ, ಪ್ರತಿಷ್ಠೆಯಷ್ಟನ್ನೇ ಗುರಿಯಾಗಿಸಿಕೊಳ್ಳದೇ ಜ್ಞಾನದೊಂದಿಗೆ ಆತ್ಮೋನ್ನತಿಯನ್ನು ಗುರಿಯಾಗಿಸಿ ಕೊಂಡಾಗ ಆತ್ಮವಿಕಾಸಕ್ಕದು ಹಾದಿಯಾಗುತ್ತದೆ. `ಆತ್ಮ ಜ್ಞಾನ, ಆತ್ಮ ವಿಕಾಸ, ಈಯೆಲ್ಲ ಸಂಗತಿಗಳನ್ನು ದುರದೃಷ್ಟವಶಾತ್ ಆಧ್ಯಾತ್ಮದ ಹಣೆಪಟ್ಟಿಯಲ್ಲಿ ಸೇರಿಸಿ ಆತ್ಮೋನ್ನತಿಯತ್ತ ಹೆಚ್ಚು ಗಮನ ಹರಿಸದೇ ಹೋಗಿರುವುದರಿಂದ ವ್ಯಕ್ತಿತ್ವಕ್ಕೆ ಸಮಗ್ರತೆ ತಂದು ಕೊಡಲು ಸೋಲುತ್ತಿದ್ದೇವೆ.

ಪ್ರಖ್ಯಾತರನ್ನು ಅನುಕರಿಸುವ ಭರದಲ್ಲಿ ಆಧ್ಯಾತ್ಮವನ್ನು ನಾವು ಬದಿಗಿರಿಸಿದರೆ ಪಾಶ್ಚಾತ್ಯರು ಮನಶ್ಶಾಂತಿಯನ್ನು ಅರಿಸಿಕೊಂಡು ಭಾರತಕ್ಕೆ ಬರುತ್ತಿದ್ದಾರೆ. ಆಧ್ಯಾತ್ಮದ ತಳಹದಿ-ಹಿನ್ನೆಲೆಯೊಂದಿಗೆ ಮತ್ತಿತರ ಜ್ಞಾನಗಳ ಸಮನ್ವಯದಿಂದ ವ್ಯಕ್ತಿತ್ವಕ್ಕೆ ಸಮಗ್ರತೆ ತಂದುಕೊಡುವ ಕಾರ್ಯ ಮುಲುಂಡ್‌ನ `ಸತ್ಯಧ್ಯಾನ ಪೀಠ' ಮಾಡುತ್ತದೆ.

ಎಲ್ಲರೀತಿಯ ವೈರುಧ್ಯ ವೈಪರಿತ್ಯಗಳ ಬದುಕಿಗೆ ತಾಣವಾದ ಮುಂಬೈನಲ್ಲಿ `ಸತ್ಯಧ್ಯಾನ ಪೀಠ'ದಂತಹ ಸಂಸ್ಥೆಯೊಂದಿದೆ ಎಂದು ಇತ್ತೀಚಿಗಷ್ಟೇ ನನಗೆ ತಿಳಿದುಬಂದದ್ದು. ಕುತೂಹಲದಿಂದ ಅಲ್ಲಿಗೆ ಹೋದಾಗ ಬೇರೆಯದೇ ಲೋಕಕ್ಕೆ ಹೋದಂತಿತ್ತು. 'ಸತ್ಯಧ್ಯಾನ ಪೀಠ' ಮಧ್ವಮತದ ಸಿದ್ಧಾಂತದ ಮೇಲೆ ರೂಪುಗೊಂಡಿರುವ ಗುರುಕುಲ. ಕರ್ನಾಟಕದಿಂದಷ್ಟೇ ಅಲ್ಲ, ಆಂಧ್ರ, ಗಯಾ, ಪಾಟ್ನಾದಿಂದ ಬಂದಿರುವ ಶಿಷ್ಯರೂ ಇಲ್ಲಿದ್ದಾರೆ. ಪೂಜೆಗೆ ದೊಡ್ಡದನಿಯಲ್ಲಿ ಮಂತ್ರ ಹೇಳುವ, ಚುರುಕಾಗಿ ಓಡಾಡುತ್ತಾ ಗುರುಕುಲದ ಕೆಲಸಗಳನ್ನು ನಿಭಾಯಿಸುವ ಶಿಷ್ಯವೃಂದ ಶಿಷ್ಯರ ಗೌರವಾದರಗಳಿಗೆ ಪಾತ್ರರಾದ ಗುರು ಶ್ರೀ ವಿದ್ಯಾನರಸಿಂಹಾಚಾರ್ಯರು ನನ್ನ ಗಮನ ಸೆಳೆದರು. ಎಲ್ಲ ವಯಸ್ಸಿನ ಶಿಷ್ಯ ವೃಂದಕ್ಕೂ ಆಪ್ತೀಯರಾದ ಇವರನ್ನು `ನೇಸರು' ಪತ್ರಿಕೆಗಾಗಿ ಸಂದರ್ಶಿಸಿದಾಗ ಗೆಳತಿ ವಾಣಿಯೂ ನನ್ನೊಂದಿಗೆ ಉಪಸ್ಥಿತರಿದ್ದರು.



'ಸತ್ಯಧ್ಯಾನ ಪೀಠ'ದ ಕಟ್ಟಡ

**'ಸತ್ಯಧ್ಯಾನ ಪೀಠ'ದ ಸ್ಥಾಪನೆ ಮತ್ತು ಉದ್ದೇಶವೇನು?**

ಮೊದಲಿಗೆ 1936ರಲ್ಲಿ `ವಾಣೀ ವಿಹಾರ ವಿದ್ಯಾಲಯ' ಮಾಟುಂಗಾದಲ್ಲಿ ಪ್ರಾರಂಭ ಆಯ್ತು. ಉತ್ತರಾದಿ ಮಠದ ಸ್ವಾಮಿಗಳಾದ `ಸತ್ಯಧ್ಯಾನ ತೀರ್ಥ'ರ ಶಿಷ್ಯರಾದ ಶ್ರೀ ಗೋಪಾಲಾಚಾರ್ಯರು ಇದರ ಸಂಸ್ಥಾಪಕರು. ಇವರು ನಮ್ಮ ತಂದೆಯವರೂ ಹೌದು.

ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೆ ಸಿಕ್ಕ ಮುಂಬೈನ ಜನರಿಗೆ ಭಾರತೀಯ ಪ್ರಾಚೀನ ಸಂಸ್ಕೃತಿಯನ್ನು ಪರಿಚಯಿಸಿ ಮಾರ್ಗದರ್ಶನವು ನೀಡಬೇಕೆಂಬ ಉದ್ದೇಶದಿಂದ 1956ರಲ್ಲಿ `ಸತ್ಯಧ್ಯಾನ ಪೀಠ' ಸ್ಥಾಪನೆಯಾಯ್ತು.

**ಸಂಸ್ಥೆಯನ್ನು ಸ್ಥಾಪಿಸಲು ಅವರಿಗಿದ್ದ ಬೆಂಬಲ ನೆರವು ಯಾವುದು?**

ನನ್ನ ತಂದೆ ಶ್ರೀ ಗೋಪಾಲಾಚಾರ್ಯರು ಬಹಳ ಬಡತನದ ಹಿನ್ನೆಲೆಯಿಂದ ಬಂದವರು. ಬೆಳಿಗ್ಗೆ ಊಟಕ್ಕೇ ಇದ್ದರೆ ಸಂಜೆಗಿಲ್ಲ. ವಾರಾನ್ನ ಮಾಡುತ್ತಾ ಅವರು ವಿದ್ಯಾಭ್ಯಾಸ ಮಾಡಿದರು. ಇಲ್ಲಿಗೆ ಬಂದಾಗ ಅವರೊಂದಿಗಿದ್ದದ್ದು 7ರೂಪಾಯಿಗಳು ಹಾಗೂ 7 ಶಿಷ್ಯರು. ಹೊಸ ಊರಿನಲ್ಲಿ ನೆರವು ಕೊಡಲು ಯಾರೂ ಮುಂದಾಗಲಿಲ್ಲ. ಅವರ ಗುರುಗಳು ಇಲ್ಲಿಯ ಕಷ್ಟ ಅರಿತು ಸಹಾಯ ಮಾಡಲು ಬಂದಾಗ ತಂದೆಯವರು ಗುರುಗಳಿಂದ ಬೇಡಿದ್ದು ಅವರ ಅನುಗ್ರಹ ಮಾತ್ರ. V.T. Stationನಲ್ಲಿ ದುಡಿದಾದ್ರೂ ಸರಿ ಹಣ ಸಂಪಾದಿಸಿಕೊಂಡು ಸಂಸ್ಥೆ ನಡೆಸುವ ಛಲ - ಸ್ವಾಭಿಮಾನ ತಂದೆಯವರದು. ನಂತರ ಪರಿಚಯವಾದ R.V. ಮೂರ್ತಿ, ಹೆಚ್. ವಿ. ಕೃಷ್ಣ ಸ್ವಾಮಿರಾವ್, ಭೂ ವರಾಹ ಮೂರ್ತಿ ಇವರೆಲ್ಲರೂ ತಂದೆಯವರ ನೆರವಿಗೆ ನಿಂತರು.

**'ಗುರುಕುಲ'ದ ವೈಶಿಷ್ಟ್ಯಗಳೇನು?**

**ಗುರುಕುಲ** ಮುಖ್ಯವಾಗಿ ವೈಯಕ್ತಿಕ ಸ್ನೇಹಸಂಬಂಧಕ್ಕೆ ಹೆಚ್ಚು ಬೆಲೆ ಕೊಡುವಂತಹದ್ದು. ಪರಸ್ಪರ ಆಧ್ಯಾತ್ಮಿಕ ಬಾಂಧವ್ಯ ಗುರು ಶಿಷ್ಯರಲ್ಲಿ ಇರುತ್ತದೆ. ಇಲ್ಲಿ ಗುರುವಿಗೆ ಬಹಳ ದೊಡ್ಡ ಸ್ಥಾನ.



ಶಿಷ್ಯರೊಂದಿಗೆ ಶ್ರೀ ವಿದ್ಯಾನಂದ ಸಿಂಹಾಚಾರ್ಯರು

ಶಿಷ್ಯ ಗುರುವನ್ನು ಹಿರಿದಾದ ಅಂತಸ್ತಿನಲ್ಲಿ ಕಾಯುತ್ತಾನೆ.

ಗುರುಗಳೇ ಶಿಷ್ಯನಿಗೆ ದಿಕ್ಕು ದೆಸೆ. ಗುರುಕುಲ ಒಂದು ಮನೆ ಅಲ್ಲಿ ಶಿಷ್ಯರೆಲ್ಲಾ ಮಕ್ಕಳು. ಗುರು ಹಾಗೂ ಗುರುಪತ್ನಿ ತಂದೆತಾಯಿಗಳ ಸ್ಥಾನ ತುಂಬುತ್ತಾರೆ. ಒಬ್ಬರ ಕಷ್ಟ ನಷ್ಟಗಳು ಇನ್ನೊಬ್ಬರ ಸುಖದುಃಖಗಳು ಎಂಬಂತಾ ಪರಸ್ಪರ ಅನುಬಂಧ ಗುರು ಶಿಷ್ಯರದು.

ಗುರುಕುಲದಲ್ಲಿ ಗುರು ಕೇವಲ ಶಿಕ್ಷಣ ಮಾತ್ರ ಕೊಡುವುದಿಲ್ಲ. ಜೀವನದ ಮೌಲ್ಯ ಜೀವನ ದರ್ಶನ ಮಾಡಿಸುತ್ತಾರೆ. ಬದುಕನ್ನು ಎದುರಿಸುವ ಕ್ರಮ ಎತ್ತಿ ತೋರಿಸುತ್ತಾರೆ. ಈ ಪರಂಪರೆಯಲ್ಲಿ ಮೌಲ್ಯಗಳಿಗೆ ಬಹಳ ಬೆಲೆಯಿದೆ. ಪ್ರಮಾಣ ಪತ್ರ ಇರುವುದಿಲ್ಲ. ಜ್ಞಾನಕ್ಕೆ ಬೆಲೆ. ಮೌಲ್ಯದ ಜೊತೆಗೆ ವ್ಯಕ್ತಿತ್ವ ವಿಕಾಸಕ್ಕೆ ಯೋಗ್ಯವಾದ ವಾತಾವರಣ ಗುರು ನಿರ್ಮಿಸುತ್ತಾರೆ. ವ್ಯಕ್ತಿತ್ವ ವಿಕಾಸವಷ್ಟೇ ಅದು ಆತ್ಮ ವಿಕಾಸ.

ಶಿಷ್ಯನ ರುಚಿ ಅವನ ಮಿಡಿತ ಅರಿತು ಗುರು ಅವನೊಂದಿಗೆ ಸ್ಪಂದಿಸುತ್ತಾನೆ. ಶಿಷ್ಯನ ಮಟ್ಟಿಗೆ ಗುರು ಪ್ರೇಮದ ಮಹಾಪೂರ. ದ್ವೇಷ ಮಾತ್ಸರ್ಯಗಳಿಗೆ ಅವಕಾಶ ಇರದ ವಾತಾವರಣ. ತಪ್ಪಿಗೆ ಕ್ಷಮೆಯಿದೆ. ಗುರುವಿಗೂ ಗುರುಗಳ ಬಳಗದವರಿಗೂ ಶಿಷ್ಯನೊಂದಿಗೆ ತಾದಾತ್ಮ್ಯವಿರುತ್ತದೆ. ಪ್ರೇಮದ ಅತಿ ಘನಿಷ್ಠವಾದ ಸಂಬಂಧ ಗುರುವಿನ ದೃಷ್ಟಿಯಲ್ಲಿ ಶಿಷ್ಯ ತನ್ನ ಬಂಧು-ಬಾಂಧವರಿಗಿಂತಲೂ ಆತ್ಮೀಯ. ಒಟ್ಟಾರೆ ಗುರುವಿನ ಗುರಿ ಶಿಷ್ಯನ ಸರ್ವಾಂಗೀಣ ಉನ್ನತಿ.

**ನಿಮ್ಮ ಗ್ರಂಥಾಲಯ ಬಗ್ಗೆ ತಿಳಿಸಿಕೊಡ್ತೀರಾ?**

ತಂದೆಯವರಿಗೆ ಓದುವ ಹವ್ಯಾಸ. ಪುಸ್ತಕದ ಸಂಗ್ರಹವೆಂದರೆ ಅವರಿಗೆ ಅಪಾರ ಒಲವು. ಎಷ್ಟೆಲ್ಲಾ ದಾರಿದ್ರ್ಯದ ಮಧ್ಯದಲ್ಲಿ ಪುಸ್ತಕ ಸಂಗ್ರಹದ ಉತ್ಸಾಹಕ್ಕೆ ಕುಂದಿರಲಿಲ್ಲ. Western Philosophy, Psychology, Sociology, Ethics, English Literature, Encyclopaedia, Dictionaries, Hisory, Law, Medicine, Ayurveda, Homoeopathy, Communism, Buddhism, Jainism, Islam, Sikh, Christianity, Zoroastrian ... ಇತ್ಯಾದಿ ಒಂದು ಲಕ್ಷದ ಇಪ್ಪತ್ತು ಸಾವಿರ ಪುಸ್ತಕಗಳಿವೆ. ಇದಲ್ಲದೆ ಧರ್ಮ ಶಾಸ್ತ್ರ, ವ್ಯಾಕರಣ, ಮೀಮಾಂಸ, ಜ್ಯೋತಿಷ್ಯ, ತಂತ್ರ . . . ಇತ್ಯಾದಿ ಗ್ರಂಥಗಳು ನಮ್ಮಲ್ಲಿವೆ.

**ನಿಮ್ಮಲ್ಲಿನ ಶಿಕ್ಷಣ ಪದ್ಧತಿ ಹೇಗೆ?**

ಗುರುಕುಲದಲ್ಲಿ 7 ವರ್ಷದಿಂದ 25 ವರ್ಷದವರೆಗೆ 150 ಶಿಷ್ಯರಿದ್ದಾರೆ. ಕೆಲವು ಪಾಠಗಳನ್ನು ಒಟ್ಟಿಗೇ ಹೇಳಿ ಕೊಡ್ತೀವಿ. ನಮ್ಮ ಶಾಸ್ತ್ರದಿಂದ ಶುರುಮಾಡಿ ನಂತರ ಪ್ರಕರಣ ಗ್ರಂಥ ಹೇಳಿ ಕೊಡ್ತೀವಿ. ಮಧ್ವಮತದ ಸಿದ್ಧಾಂತ ಹೇಳಿ ಕೊಡುವಂತೆಯೇ Communism ಹಾಗೂ ಮತ್ತಿತರ ಮತಗಳ ಬಗ್ಗೆಯೂ ತಿಳಿಸಿ ಕೊಡ್ತೀವಿ. ನಮ್ಮ ಸಾಹಿತ್ಯದಂತೆಯೇ Shakespeare, Browning, Milton ಮುಂತಾದ ಆಂಗ್ಲ ಕವಿಗಳ ಬಗ್ಗೆಯೂ ತೌಲನಿಕ ಸಾಹಿತ್ಯ ಅಭ್ಯಾಸ ಮಾಡಿದೀವಿ. ಯಾವುದೇ ಒತ್ತಾಯ ಇರದೆ ಬೌದ್ಧಿಕವಾದ ಕುತೂಹಲ ಬೆಳೆಸುವ ಪ್ರಯತ್ನ ನಮ್ಮ ಗುರುಕುಲದ್ದು. ಕಿರಿಯ ತರಗತಿಗಳಿಗೆ ಇಲ್ಲಿನ ಹಿರಿಯ ಶಿಷ್ಯರು ಪಾಠ ಹೇಳ್ತಾರೆ. ನಮ್ಮಲ್ಲಿ ಪದವಿಗೆ ಮಹತ್ವ ಇಲ್ಲ. ಆದರೂ ಇಲ್ಲಿ ಕಲಿತ ಶಿಷ್ಯರು ವಿಶ್ವವಿದ್ಯಾಲಯದಲ್ಲಿ ಸಂಬೋಧಕರಾಗಿ ಕೆಲಸ ಮಾಡುತ್ತಿದ್ದಾರೆ. Computerನಲ್ಲಿ ಕೆಲಸ ಮಾಡೋದನ್ನು ಹೇಳಿ ಕೊಡ್ತೀವಿ.

ಮುಕ್ತವಾಗಿ ಎಲ್ಲ ವಿಷಯಗಳನ್ನು ತಿಳಿಸಿ ಕೊಡುವ ನಮ್ಮದು Comparative Study, Compartmental Study ಅಲ್ಲ. ಎಲ್ಲ ರೀತಿಯ ತತ್ವಗಳನ್ನು ಮುಕ್ತವಾಗಿ ನೋಡಿ ತಮಗೆ ಸೂಕ್ತವಾದ ನಿಲುವನ್ನು ಶಿಷ್ಯರು ಆರಿಸಿಕೊಳ್ಳುವಂತೆ ಮಾಡುವ ಪ್ರಯತ್ನ ನಮ್ಮದು. ಉತ್ತಮ ಗ್ರಂಥಾಲಯ ಹೊಂದಿರುವ ನಮ್ಮ ಸಂಸ್ಥೆಯಲ್ಲಿ ಸಂಶೋಧನೆಗೆ ಬೇಕಾದ ಎಲ್ಲ ಸೌಲಭ್ಯಗಳೂ ಇದೆ.

**ನೀವು ಕುಲಪತಿಗಳಾಗಿದ್ದು ಯಾವಾಗ?**

1984ರಲ್ಲಿ ತಂದೆಯವರು ಕಾಲವಾದ ನಂತರ ನಾನು ಕುಲಪತಿಯಾದೆ.

**ಗುರುಕುಲದ ಶಿಷ್ಯರಾಗಲು ಅರ್ಹತೆ ಹಾಗೂ ನಿಯಮಗಳೇನು?**

ಗುರುಕುಲ ವಾಸ ಸುಲಭದ್ದೇನಲ್ಲ. ವಿದ್ಯಾಭ್ಯಾಸದೊಂದಿಗೆ ಅವರ ಎಲ್ಲ ಕೆಲಸಗಳನ್ನು, ಗುರುಕುಲದ ಉಸ್ತುವಾರಿಯನ್ನು ಅವರೇ ನೋಡಿಕೊಳ್ಳಬೇಕಾಗುತ್ತದೆ. ತ್ಯಾಗ ಬುದ್ಧಿ ಇರಬೇಕು. ಹೊರಗಿನ ವ್ಯಾಮೋಹ ಇರಕೂಡದು. ಬಟ್ಟೆ ಆಹಾರಗಳಲ್ಲಿ ಶುಚಿತ್ವ ಕಾಪಾಡಿಕೊಳ್ಳಬೇಕು.

**ಗುರುಕುಲದ ಶಿಷ್ಯರ ಬಗ್ಗೆ ನಿಮ್ಮ ಅನಿಸಿಕೆಗಳೇನು?**

ಇಲ್ಲಿಯ ವಿದ್ಯಾರ್ಥಿಗಳಲ್ಲಿ ನಿಸ್ಪೃಹತೆ, ತತ್ವನಿಷ್ಠೆ ಕಂಡು ಬರುತ್ತದೆ. ಕರ್ನಾಟಕದಿಂದಷ್ಟೇ ಅಲ್ಲ ಬೇರೆ ರಾಜ್ಯಗಳಿಂದ ಬಂದಿರುವ ಶಿಷ್ಯರು ಕೂಡಾ ಗುರುಕುಲದಲ್ಲಿ ಹೆಚ್ಚಿನ ತೊಂದರೆ ಇರದಂತೆ ಹೊಂದಿಕೊಂಡು ಬಿಟ್ಟಿದ್ದಾರೆ. ಕೊನೆಯ ವರ್ಷದ ವಿದ್ಯಾಭ್ಯಾಸ ಮುಗಿಸುವ ಹೊತ್ತಿಗೆ ಅಧೈರ್ಯ, ಅಸಮಾಧಾನ ಇರದ ವ್ಯಕ್ತಿತ್ವ ಅವರದಾಗಿರುತ್ತದೆ.

**ನಿಮ್ಮ ಸಂಸ್ಥೆ ನಡೆಸಲು ನಿಮಗೆ ಆರ್ಥಿಕ ಸಹಾಯ ಎಲ್ಲಿಂದ ಸಿಗುತ್ತದೆ?**

ಸರ್ಕಾರದಿಂದ ಯಾವ ನೆರವೂ ಪಡೆದಿಲ್ಲ. ಅಭಿಮಾನಿಗಳು ಬಹಳ ಜನ ಇದ್ದಾರೆ. ಅವರಿಂದ ಸಮೃದ್ಧವಾಗಿ ಎಲ್ಲಾ ನಡೆದುಕೊಂಡು ಹೋಗುತ್ತಿದೆ. ಶಿಷ್ಯರು ಭಿಕ್ಷಾಟನೆ ನಡೆಸಿ ಅಕ್ಕಿ-ಬೇಳೆ ಸಂಗ್ರಹಿಸುತ್ತಾರೆ. ವಿದ್ಯಾರ್ಥಿಗಳೇ ಎಲ್ಲಾ ಕೆಲಸ ಮಾಡುವುದರಿಂದ ಯಾವುದೇ ರೀತಿಯಲ್ಲಿ ಹಣ ವ್ಯರ್ಥವಾಗುವುದಿಲ್ಲ.

**ನಿಮ್ಮ ಶ್ರೀಮತಿಯವರ ಸಹಕಾರ ನಿಮಗಿದೆಯೆ?**

ಖಂಡಿತವಾಗಿ. ಶಿಷ್ಯರೊಂದಿಗೆ ಸ್ನೇಹ, ದಾನ ಧರ್ಮದಲ್ಲಿ ಆಕೆಗೆ ಆಸಕ್ತಿಯಿದೆ. ಗುರುಕುಲದ ಮೇಲ್ವಿಚಾರಣೆ ನೋಡಿ ಕೊಳ್ಳುತ್ತಾರೆ. ಶ್ರದ್ಧೆಯಿಂದ ಇದೆಲ್ಲವನ್ನು ಆಕೆ ಮಾಡಿಕೊಂಡು ಹೋಗುತ್ತಿರುವುದು ನನ್ನ ಸುಯೋಗ.

**ನೀವೇನಾದ್ರೂ ಪುಸ್ತಕ ಬರೀತಿದ್ದೀರಾ?**

ಸಂಸ್ಕೃತದಲ್ಲಿ ವಿಶ್ವದ ಉತ್ಪತ್ತಿ ಶಾಸ್ತ್ರ (Cosmology); ಇಂಗ್ಲೀಷ್‌ನಲ್ಲಿ ಪ್ರಮಾಣ ಶಾಸ್ತ್ರ (Epistomology); ಕನ್ನಡ ಮತ್ತು ಸಂಸ್ಕೃತದಲ್ಲಿ ವೇದದ ವ್ಯಾಖ್ಯಾನ ಬರೀತಿದ್ದೀನಿ.

ಶ್ರೀ ವಿದ್ಯಾನರಸಿಂಹಾಚಾರ್ಯರೊಂದಿಗೆ ಮಾತನಾಡಿ ತಿಳಿಯುವ ಸಂಗತಿಗಳು ಇನ್ನೂ ಬಾಕಿ ಉಳಿದಿತ್ತು. ಸಮಯ ನಮಗಾಗಿ ನಿಲ್ಲದೆ ಮುಂದೆ ಓಡುತ್ತಿದ್ದರಿಂದ ಸಿಕ್ಕ ಚಿಕ್ಕ ಅವಕಾಶದಲ್ಲಿ ತೃಪ್ತಿ ಪಡಬೇಕಾಯ್ತು. 'ನೇಸರು' ಓದುಗರು ಅವರ 'ಗುರುಕುಲ', 'ಗ್ರಂಥಾಲಯ'ಕ್ಕೆ ಅವಶ್ಯ ಭೇಟಿ ಕೊಡಬೇಕು.

# ಚಿತ್ತದ ಏಕಾಗ್ರತೆ

- ವಿನೋಬಾ

ಮನುಷ್ಯನ ಏಕಾಗ್ರತೆ. ಪ್ರತಿಯೊಂದು ಕೆಲಸಕ್ಕೂ ಇದು ಅಗತ್ಯ. ವ್ಯಾವಹಾರಿಕ ವಿಷಯಗಳಿಗೂ ಇದು ಬೇಕೇ ಬೇಕು. ವ್ಯವಹಾರಕ್ಕೆ ಬೇಕಾದ ಗುಣ ಬೇರೆ. ಪರಮಾರ್ಥಕ್ಕೆ ಬೇರೆ ಗುಣ ಅಲ್ಲ. ವ್ಯವಹಾರವನ್ನು ಶುದ್ಧಗೊಳಿಸುವುದೆಂದರೇನೇ ಪರಮಾರ್ಥ. ವ್ಯವಹಾರ ಯಾವುದಿದ್ದರೂ ಅದರ ಸೋಲು ಗೆಲುವು ನಿಮ್ಮ ಏಕಾಗ್ರತೆಯನ್ನವಲಂಬಿಸಿದೆ. ವ್ಯಾಪಾರ, ವ್ಯವಹಾರ, ಶಾಸ್ತ್ರ ಶೋಧನೆ, ರಾಜಕೀಯ ಮುತ್ಸದ್ದಿತನ - ಯಾವುದೇ ಇದ್ದರೂ ಅದರಲ್ಲಿ ಯಶಸ್ಸು ಸಿಗಬೇಕಾದರೆ ಆಯಾಯ ಪುರುಷನ ಮನಸ್ಸಿನ ಏಕಾಗ್ರತೆಯೇ ಕಾರಣ. ನೆಪೋಲಿಯನ್ ಬಗ್ಗೆ ಒಂದು ಕತೆಯಿದೆ. ಯುದ್ಧದ ಏರ್ಪಾಟು ಮಾಡಿಕೊಟ್ಟ ತರುವಾಯ ಆತ ಸಮರರಂಗದಲ್ಲಿ ಗಣಿತದ ಸಿದ್ಧಾಂತಗಳನ್ನು ಬಿಡಿಸುತ್ತಿದ್ದನಂತೆ. ಡೇರೆಯ ಮೇಲೆ ಗುಂಡು ಹಾರಲಿ, ಸೈನಿಕರು ಸಾಯುತ್ತಿರಲಿ, ನೆಪೋಲಿಯನ್ನನ ಚಿತ್ತ ಮಾತ್ರ ಗಣಿತದಲ್ಲೇ. ಅವನ ಏಕಾಗ್ರತೆ ಬಹಳ ಗಾಢವಾದುದೆಂದು ನಾನನ್ನುವುದಿಲ್ಲ. ಅದಕ್ಕೂ ಹೆಚ್ಚಿನ ಏಕಾಗ್ರತೆಯ ದೃಷ್ಟಾಂತವನ್ನು ತೋರಿಸಬಹುದು. ಆದರೂ ಅವನ ಹತ್ತಿರ ಎಷ್ಟಿತ್ತು ಎಂಬುದನ್ನು ನೋಡಿ. ಖಲೀಫ ಉಮರನ ಬಗೆಗೂ ಇಂಥದೇ ಒಂದು ಕತೆಯುಂಟು. ಕಾಳಗ ನಡೆದಿದ್ದಾಗ ಪ್ರಾರ್ಥನೆಯ ಸಮಯವಾದಲ್ಲಿ (ಮುಸಲ್ಮಾನೀ ಧರ್ಮದಲ್ಲಿ ಐದು ಸಲ ಪ್ರಾರ್ಥನೆ ಹೇಳಿದೆ). ತತ್‌ಕ್ಷಣ ಮನಸ್ಸನ್ನು ಏಕಾಗ್ರಗೊಳಿಸಿ, ಮೊಣಕಾಲೂರಿ ರಣರಂಗದಲ್ಲೇ ಆತ ಪ್ರಾರ್ಥನೆಗಾರಂಭಿಸುತ್ತಿದ್ದ. ಆ ಏಕಾಗ್ರತೆಯಲ್ಲಿ ಯಾರನ್ನು ಯಾರು ಕೊಲ್ಲುತ್ತಿರುವರೆಂಬುದರ ಅರಿವೂ ಅವನಿಗುಳಿಯುತ್ತಿರಲಿಲ್ಲ. ಮೊದ ಮೊದಲಿನ ಮುಸಲ್ಮಾನರ ಈ ಪರಮೇಶ್ವರ ನಿಷ್ಠೆಯಿಂದ, ಈ ಏಕಾಗ್ರತೆಯಿಂದ, ಇಸ್ಲಾಮ್ ಧರ್ಮ ಪ್ರಸಾರವಾಯಿತು.

ಮೊನ್ನೆ ಒಂದು ಕತೆ ಕೇಳಿದೆ. ಒಬ್ಬ ಮುಸಲ್ಮಾನ ಸಾಧು ಇದ್ದ. ಅವನ ಶರೀರದಲ್ಲೊಂದು ಬಾಣ ಸೇರಿತು. ಅದರಿಂದ ತುಂಬಾ ನೋವಾಗುತ್ತಿತ್ತು, ಬಾಣವನ್ನು ಕೀಳಲು ಹೋದರೆ, ಕೈ ಹಚ್ಚುತ್ತಲೂ ನೋವು ಇನ್ನೂ ಹೆಚ್ಚುತ್ತಿತ್ತು, ಅದರಿಂದಾಗಿ ಅದನ್ನು ತೆಗೆಯುವುದೂ ಅಸಾಧ್ಯವಾಯಿತು. ಈಗಿನ ಕ್ಲೋರೋಫಾರಂನಂಥ ಅಮಲಿನ ಔಷಧವೂ ಆಗ ಇರಲಿಲ್ಲ. ಸರಿ, ದೊಡ್ಡ ಸಮಸ್ಯೆಯೇ. ಆ ಸಾಧುವನ್ನು ಬಲ್ಲ ಕೆಲವರು ಮುಂದೆ ಬಂದು ``ಬಾಣ ತೆಗೆಯುವುದ ಸದ್ಯ ಹಾಗಿರಲಿ. ಮೊದಲು ಆತ ಪ್ರಾರ್ಥನೆಗೆ ತೊಡಗಲಿ. ಅನಂತರ ಅದನ್ನು ತೆಗೆದರಾಯಿತು" ಎಂದರು. ಸಾಯಂಕಾಲದ ಪ್ರಾರ್ಥನೆಯ ಸಮಯವಾಯಿತು. ಸಾಧು ಪ್ರಾರ್ಥನೆಗೆ ತೊಡಗಿದ ಒಂದು ಕ್ಷಣದಲ್ಲಿಯೇ ಆತ ಚಿತ್ತವನ್ನೇಕಾಗ್ರಗೊಳಿಸಿ ಪ್ರಾರ್ಥನೆಯಲ್ಲಿ ತಲ್ಲೀನನಾದ. ಆಗ ಅವನ ಶರೀರದಿಂದ ಬಾಣವನ್ನು ಕಿತ್ತರೂ ಅದರ ಅರಿವು ಅವನಿಗಿರಲಿಲ್ಲ. ಇದು ಎಂಥ ಏಕಾಗ್ರತೆ!

ಸಾರಾಂಶ - ವ್ಯವಹಾರವಿರಲಿ, ಪರಮಾರ್ಥವಿರಲಿ, ಚಿತ್ತದ ಏಕಾಗ್ರತೆಯಿಲ್ಲದೆ ಅದರಲ್ಲಿ ಯಶಸ್ಸು ಸಿಕ್ಕುವುದು ಕಠಿಣ. ಚಿತ್ತ ಏಕಾಗ್ರವಾದರೆ ಎಂದಿಗೂ ಸಾಮರ್ಥ್ಯ ಕಡಿಮೆಯಾಗಲಾರದು. ನಿಮಗೆ ಅರವತ್ತು ವರ್ಷ ವಯಸ್ಸಾಗಿದ್ದರೂ ಕೂಡ ನಿಮ್ಮಲ್ಲಿ ಯೌವನದ ಉತ್ಸಾಹ, ಶಕ್ತಿ ಕಾಣಿಸೀತು. ವಯಸ್ಸಾದ ಹಾಗೆಲ್ಲ ಮನುಷ್ಯನ ಮನಸ್ಸು ಗಟ್ಟಿಯಾಗುತ್ತ ಹೋಗಬೇಕು. ಹಣ್ಣನ್ನು ನೋಡಿ. ಅದು ಕಸುಕಾಗಿರುತ್ತದೆ, ಪಕ್ವವಾಗುತ್ತದೆ, ಕೊಳೆಯುತ್ತದೆ, ನಾಶಹೊಂದುತ್ತದೆ. ಆದರೂ ಅದರೊಳಗಿನ ಬೀಜ ಮಾತ್ರ ಗಟ್ಟಿಯಾಗಿರುತ್ತದೆ. ಹೊರಗಿನ ಶರೀರ ಒಣಗೀತು, ಬಿದ್ದೀತು. ಆದರೆ ಅದೇ ಕಾಯಿಯ ಸಾರ ಸರ್ವಸ್ವವಲ್ಲ. ಅದರ ಆತ್ಮವೆಂದರೆ ಬೀಜ. ಶರೀರದ ವಿಷಯವೂ ಹೀಗೇ. ಶರೀರ ವೃದ್ಧವಾದರೂ ಸ್ಮರಣಶಕ್ತಿ ಹೆಚ್ಚುತ್ತಿರಬೇಕು. ಬುದ್ಧಿ ತೇಜಸ್ವಿಯಾಗಿರಬೇಕು. ಆದರೆ ಹಾಗಾಗದು. ಮನುಷ್ಯ ಹೇಳುತ್ತಾನೆ - `ಈಚೆಗೂ ಏನೂ ನೆನಪಾಗುವುದಿಲ್ಲ'. ಏಕೆ? `ವಯಸ್ಸಾಯಿತು'. ನಿನ್ನ ಜ್ಞಾನ, ವಿದ್ಯೆ, ಸ್ಮರಣೆ, ನಿನ್ನ ಬೀಜ. ವೃದ್ಧವಾದಂತೆಲ್ಲ ಶರೀರ ಸಡಿಲು ಬೀಳುವ ಹಾಗೆ ಒಳಗಿನ ಆತ್ಮ ಬಲಶಾಲಿಯಾಗಬೇಕು. ಅದಕ್ಕಾಗಿ ಏಕಾಗ್ರತೆ ಬೇಕು.

ಏಕಾಗ್ರತೆ ಸಾಧಿಸುವುದು ಹೇಗೆ?

ಏಕಾಗ್ರತೆ ಬೇಕೆ? ಸರಿಯೆ. ಅದನ್ನು ಸಾಧಿಸುವುದು ಹೇಗೆ? ಅದಕ್ಕೆ ಮಾಡಬೇಕಾದುದೇನು? ಭಗವಂತ ಹೇಳುತ್ತಾನೆ. ಆತ್ಮದಲ್ಲಿ ಮನಸ್ಸು ನಿಲ್ಲಿಸು - ಸರಿ. ಆದರದನ್ನು ಹೇಗೆ ಸಾಧಿಸುವುದು? ಮನಸ್ಸನ್ನು ನಿಯತಗೊಳಿಸುವುದು ಬಹಳ ಮಹತ್ವದ್ದು. ವಿಚಾರ ಚಕ್ರಗಳನ್ನು ಬಲವಾಗಿ ನಿಲ್ಲಿಸದೆ ಏಕಾಗ್ರತೆ ಎಲ್ಲಿಯದು? ಹೊರಗಿನ ಚಕ್ರಗಳನ್ನು ಹೇಗಾದರೂ ನಿಲ್ಲಿಸಬಹುದು ಒಳಗಿನ ಚಕ್ರ ಮಾತ್ರ ತಿರುಗುತ್ತಲೇ ಇರುತ್ತದೆ. ಚಿತ್ತದ ಏಕಾಗ್ರತೆಗೆ ಬಾಹ್ಯ ಸಾಧನಗಳನ್ನು ಮಾಡಿದಂತೆಲ್ಲ ಈ ಒಳಗಿನ ಚಕ್ರ ಹೆಚ್ಚು ಹೆಚ್ಚು ವೇಗದಿಂದ ತಿರುಗಲಾರಂಭಿಸುತ್ತದೆ. ನೀವು ನೆಟ್ಟಗೆ ಕುಳಿತುಕೊಳ್ಳಿ, ಕಣ್ಣು ಸ್ಥಿರವಾಗಿರಿಸಿ ಆಸನ ಹಾಕಿ. ಇವುಗಳಿಂದ ಮನಸ್ಸನ್ನು ಏಕಾಗ್ರಗೊಳಿಸಲಾಗುವುದಿಲ್ಲ. ಮನಸ್ಸಿನೊಳಗಿನ ಚಕ್ರವನ್ನು ನಿಲ್ಲಿಸಲು ಸಾಧಿಸಬೇಕು. ಅದು ಮುಖ್ಯ ವಿಚಾರ.

``ನ ಕಿಂಚಿದಪಿ ಚಿಂತಯೇತ್ - ಬೇರೇನೂ ಯೋಚಿಸಬೇಡ".

ಹೊರಗಿನ ಅಪರಂಪಾರ ಸಂಸಾರ ಮನಸ್ಸಿನಲ್ಲಿ ತುಂಬಿರುತ್ತದೆ. ಅದನ್ನು ನಿಲ್ಲಿಸದ ಹೊರತು ಏಕಾಗ್ರತೆ ಅಸಾಧ್ಯ. ನಮ್ಮ ಆತ್ಮದ ಅಪಾರ ಜ್ಞಾನ ಶಕ್ತಿಯನ್ನು ಹೊರಗಿನ ಕ್ಷುದ್ರವಸ್ತುಗಳಿಗಾಗಿ ನಾವು ಹಾಳು ಮಾಡುತ್ತೇವೆ. ಅದು ಸಲ್ಲದು. ಯಾರನ್ನೂ ಲೂಟಿ ಮಾಡದೆ ಸ್ವಂತ ಪ್ರಯತ್ನದಿಂದ ಶ್ರೀಮಂತನಾದ ಮನುಷ್ಯ ಹೇಗೆ ಅತಿವ್ಯಯ ಮಾಡಲಾರನೋ ಹಾಗೇ ನಾವು ನಮ್ಮ ಆತ್ಮದ ಜ್ಞಾನಶಕ್ತಿಯನ್ನು ಕ್ಷುದ್ರವಸ್ತುಗಳ ಚಿಂತನೆಯಲ್ಲಿ ಹಾಳುಮಾಡಕೂಡದು. ನಮ್ಮ ಅಮೂಲ್ಯ ನಿಧಿ ಈ ಜ್ಞಾನಶಕ್ತಿ, ಅಂಥದನ್ನು ಸ್ಥೂಲ

---

ಉಪ್ಪಿನ ಸತ್ಯಾಗ್ರಹದ ಕಾಲಕ್ಕೆ ಬಂಧಿತರಾದ ವಿನೋಬಾ ನೂರಾರು ಸತ್ಯಾಗ್ರಹಿಗಳ ಜೊತೆಯಲ್ಲಿ ಧೂಲಿಯಾ ಸೆರೆಮನೆಯಲ್ಲಿದ್ದರು. ಅಧ್ಯಾತ್ಮ ಸಾಧನೆ, ಬ್ರಹ್ಮ ವಿದ್ಯೆಯ ಅಧ್ಯಯನಕ್ಕೆ ಸೆರೆಮನೆ ಅಡ್ಡಿಯಾಗಲಿಲ್ಲ. ಸೆರೆಮನೆಯಲ್ಲಿ ಗೀತೆಯ ಮೇಲೆ ಮಾಡಿದ ಪ್ರವಚನಗಳೇ ಅವರ ಸುಪ್ರಸಿದ್ಧ 'ಗೀತಾ ಪ್ರವಚನ'. ಭಾರತದ ಎಲ್ಲಾ ಭಾಷೆಗಳಲ್ಲಿ ಮತ್ತು ಹಲವು ವಿದೇಶೀ ಭಾಷೆಗಳಲ್ಲೂ ಅದರ ಭಾಷಾಂತರಗಳು ಪ್ರಕಟವಾಗಿವೆ. ಗೀತೆಯ ಅತ್ಯಂತ ಸರಳವಾದ, ಸಾಮಾನ್ಯರ ಬಾಳಿಗೂ ಅನ್ವಯವಾಗುವಂಥ ವ್ಯಾಖ್ಯಾನ ಇದು.

ಲೋಕಮಾನ್ಯ ತಿಲಕರು ಗೀತೆಯನ್ನು 'ಕರ್ಮಯೋಗ' ಎಂದರು. ವಿವೇಕಾನಂದರು 'ರಾಜಯೋಗ'ದ ವ್ಯಾಖ್ಯಾನ ಮಾಡಿದರು. ಅರವಿಂದರು 'ಜ್ಞಾನಯೋಗ'ದ ಸಿದ್ಧಿ ಪಡೆದರು. ಗಾಂಧೀಜಿಗೆ ಅದು 'ಅನಾಸಕ್ತಿ ಯೋಗ'ವಾಯಿತು. ವಿನೋಬಾಗೆ ಗೀತೆ 'ಸಾಮ್ಯ ಯೋಗ'. ಆಧುನಿಕ ವಿಶ್ವಕ್ಕೆ ಅನ್ವಯವಾಗುವ ಸರ್ವಸಮಾನತೆಯ ಸ್ವಾತಂತ್ರ್ಯ ಸಿದ್ಧಿಗೆ ಗೀತೆ ಹೇಗೆ ಮಾರ್ಗದರ್ಶಿ ಎಂಬುದನ್ನು ಗೀತಾ ಪ್ರವಚನದಲ್ಲಿ ವಿನೋಬಾ ವಿವರಿಸಿದ್ದಾರೆ. ಈ ಲೇಖನವನ್ನು ವಿನೋಬಾ ಅವರ 'ಗೀತಾ ಪ್ರವಚನ'ದಿಂದ ಆಯ್ದು ಕೊಳ್ಳಲಾಗಿದೆ.

ವಿಷಯಗಳಲ್ಲಿ ನಾವು ಹಾಳು ಮಾಡುತ್ತೇವೆ. ಈ ಪಲ್ಯ ಚೆನ್ನಾಗಿಲ್ಲ. ಇದಕ್ಕೆ ಉಪ್ಪು ಸಾಲದು. ಎಷ್ಟು ಗುಂಜೆಯಯ್ಯಾ ಕಡಮೆಯಾದುದ್ದು? ಅರ್ಧ ಹರಳು ಉಪ್ಪು ಕಡಿಮೆಯಾದರೆ ಆ ಮಹಾವಿಚಾರಕ್ಕಾಗಿ ನಮ್ಮ ಧ್ಯಾನ ಹಾಳು. ಶಾಲೆಯ ನಾಲ್ಕು ಗೋಡೆಗಳೊಳಗೆ ಮಕ್ಕಳಿಗೆ ಪಾಠ ಹೇಳುತ್ತಾರೆ. ಗಿಡದ ಕೆಳಗೆ ಕೂಡಿಸಿದರೆ ಗುಬ್ಬಿ ಕಾಗೆಗಳನ್ನು ಕಂಡು ಅವರ ಮನಸ್ಸು ಏಕಾಗ್ರವಾಗಲಾರದಂತೆ. ಚಿಕ್ಕ ಮಕ್ಕಳು ಅವರು, ಗುಬ್ಬಿ ಕಾಣಿಸದಿದ್ದರೆ ಸರಿ, ಆಯಿತು ಅವರ ಏಕಾಗ್ರತೆ. ನಾವೋ ದೊಡ್ಡ ದಡ್ಡರು. ನಮಗೆ ಕೊಂಬು ಬೆಳೆದಿವೆ. ಏಳೇಳು ಗೋಡೆಗಳೊಳಗಡೆ ನಮ್ಮನ್ನಿಟ್ಟರೂ ಏಕಾಗ್ರತೆ ಬರಲಿಕ್ಕಿಲ್ಲ. ಏಕೆಂದರೆ ಲೋಕದಲ್ಲಿನ ಕೀಳ ಕ್ಷುಲ್ಲಕ ವಿಷಯಗಳನ್ನು ಚರ್ಚಿಸುವವರು ನಾವು. ಪರಮಾತ್ಮನನ್ನು ಕಾಣಬಲ್ಲ ಧ್ಯಾನವನ್ನು ಪಲ್ಯದ ರುಚಿಯ ಚರ್ಚೆಗಳಿಗಾಗಿ ಹಾಳು ಮಾಡುವವರು. ಅದರಲ್ಲೇ ಕೃತಕೃತ್ಯರಾಗುವವರು!

ಇಂಥ ಈ ಭಯಾನಕ ಸಂಸಾರ ಹಗಲಿರುಳೂ ನಮ್ಮ ಸುತ್ತ ಹೊರಗೂ ಒಳಗೂ ತಿರುಗುತ್ತಿದೆ. ಪ್ರಾರ್ಥನೆ ಭಜನೆಗಳಲ್ಲೂ ಸಹ ನಮ್ಮ ಉದ್ದೇಶ ಹೊರಗಿನದೇ. ಪರಮಾತ್ಮನೊಂದಿಗೆ ತನ್ಮಯವಾಗಿ ಒಂದು ಕ್ಷಣವಾದರೂ ಸಂಸಾರವನ್ನು ಮರೆಯೋಣ ಎಂಬ ಭಾವನೆ ಶೂನ್ಯ. ಪ್ರಾರ್ಥನೆಯೂ ಒಂದು ಪ್ರದರ್ಶನ ಎನ್ನುವಂತಾಗಿದೆ ನಮ್ಮ ಮನಸ್ಸಿನ ಸ್ಥಿತಿ. ಇಂಥ'ಲ್ಲಿ ಆಸನ ಹಾಕಿದರೇನು, ಕಣ್ಣು ಮುಚ್ಚಿಕೊಂಡರೇನು? ಎಲ್ಲವೂ ವ್ಯರ್ಥ. ನಮ್ಮ ನಮ್ಮ ಮನಸ್ಸಿನ ಓಟ ಸದಾ ಹೊರಗೇ ಹರಿಯುತ್ತಿದ್ದರೆ ತಮ್ಮ ಸಾಮರ್ಥ್ಯವೆಲ್ಲವೂ ನಷ್ಟವಾಗುತ್ತದೆ. ಯಾವ ಬಗೆಯ ವ್ಯವಸ್ಥೆಯೂ ನಿಯಂತ್ರಣ ಶಕ್ತಿಯೂ ಉಳಿಯುವುದಿಲ್ಲ. ಈ ವಿಷಯ ಈಗ ನಮ್ಮ ದೇಶದಲ್ಲಿ ಪದೇ ಪದೇ ಅನುಭವವಾಗುತ್ತಿದೆ.

ವಾಸ್ತವವಾಗಿ ಭರತವರ್ಷ ಪರಮಾರ್ಥದ ಭೂಮಿ. ಇಲ್ಲಿನ ಜನ ಈಗಲೂ ಮೇಲ್ಮಟ್ಟದಲ್ಲಿದ್ದಾರು ಎಂದು ತಿಳಿಯುತ್ತಾರೆ. ಇಂಥ ದೇಶದಲ್ಲಿ ನಮ್ಮ ನಿಮ್ಮ ಸ್ಥಿತಿ ಹೇಗಿದೆ! ಕೀಳ ಸಣ್ಣ ಪುಟ್ಟ ವಿಷಯಗಳಲ್ಲಿ ನಾವು ತೋರಿಸುವ ಆಸಕ್ತಿಯನ್ನು ನೋಡಿದರೆ ವಿಷಾದವಾಗುತ್ತದೆ. ನಮ್ಮ ಚಿತ್ತ ಕ್ಷುದ್ರ ವಿಷಯಗಳಲ್ಲಿಯೇ ತೊಡಗಿಕೊಂಡಿವೆ.

ಕೇಳಲು ಕಥೆ ಪುರಾಣ ಸವಿನಿದ್ದೆ
ಮಲಗಿದರೆ ಮನವು ಚಿಂತೆಯ ಮುದ್ದೆ
ಗಹನ ಕರ್ಮಗತಿ ಏಕಳುತ್ತಿದ್ದೆ?*

ಕಥೆ, ಪುರಾಣ ಕೇಳಲು ಹೋದರೆ ನಿದ್ದೆ ಬಂದು ಬಿಡುತ್ತದೆ. ನಿದ್ದೆ ಮಾಡಬೇಕೆಂದು ಮಲಗಿದರೆ ಚಿಂತೆ, ವಿಚಾರಚಕ್ರ ಪ್ರಾರಂಭವಾಗುತ್ತದೆ. ಶೂನ್ಯಾಗ್ರತೆ ಒಂದು ಕಡೆ. ಅನೇಕಾಗ್ರತೆ ಇನ್ನೊಂದು ಕಡೆ. ಏಕಾಗ್ರತೆ ಎಲ್ಲಿಯೂ ಇಲ್ಲ. ಇಷ್ಟು ಮಟ್ಟಿಗೆ ಮನುಷ್ಯ ಇಂದ್ರಿಯಗಳ ಗುಲಾಮನಾಗಿದ್ದಾನೆ. ಒಮ್ಮೆ ಒಬ್ಬ `ಕಣ್ಣು ಅರ್ಧೋನ್ಮೀಲಿತವಾಗಿರಬೇಕೆಂದು ಏಕೆ ಹೇಳಿದ್ದಾರೆ?' ಎಂದು ನನ್ನನ್ನು ಕೇಳಿದ. ಅದಕ್ಕೆ ನಾನು `ಸುಲಭವಾಗಿಯೇ ಹೇಳುತ್ತೇನೆ. ಪೂರ್ತಿಯಾಗಿ ಕಣ್ಣು ಮುಚ್ಚಿದರೆ ನಿದ್ರೆ ಬರುತ್ತದೆ. ಪೂರ್ತಿ ತೆರೆದಿಟ್ಟರೆ ನಾಲ್ಕು ಕಡೆಗೂ ದೃಷ್ಟಿ ಹೋಗುವದರಿಂದ ಏಕಾಗ್ರತೆಯುಂಟಾಗುವುದಿಲ್ಲ. ಮುಚ್ಚಿದರೆ ನಿದ್ರೆ, ಅದು ತಮೋಗುಣ. ತೆರೆದಿಟ್ಟರೆ ಎಲ್ಲ ಕಡೆಗೂ ದೃಷ್ಟಿ ಹರಿಯುತ್ತದೆ - ಅದು ರಜೋಗುಣ. ಅದಕ್ಕಾಗಿ ಮಧ್ಯದ ಸ್ಥಿತಿಯನ್ನು ಹೇಳಿದೆ' ಎಂದೆ. ಅರ್ಥವಿಷ್ಟೆ. ಮನಸ್ಸಿನ ನಿಲುವನ್ನು ಬದಲಾಯಿಸದೆ ಏಕಾಗ್ರತೆ ಬರಲಾರದು. ಅದಕ್ಕಾಗಿ ಮನದ ನಿಲುವು ಶುದ್ಧವಾಗಿರಬೇಕು. ಬರೀ ಆಸನ ಹಾಕಿದರೆ ಅದು ಆಗದು. ವ್ಯವಹಾರವೆಲ್ಲವೂ ಶುದ್ಧವಾಗಿರಬೇಕಾದುದು ಅಗತ್ಯ. ವ್ಯವಹಾರ ಶುದ್ಧವಾಗಿರಬೇಕಾದರೆ ಅದರ ಉದ್ದೇಶ ಬದಲಾಗಬೇಕು. ವೈಯಕ್ತಿಕ ಲಾಭ, ವಾಸನಾತೃಪ್ತಿ. ಇಂಥ ಬಾಹ್ಯ ವಿಷಯಗಳಿಗಾಗಿ ವ್ಯವಹಾರ ಮಾಡಬಾರದು.

ದಿನವೆಲ್ಲ ನಾವು ವ್ಯವಹಾರ ಮಾಡುತ್ತೇವೆ. ಇದೆಲ್ಲ ಆಟಾಟೋಪದ ಉದ್ದೇಶವೇನು?

ಇನಿತೇಕೆ ಸಕಲ ಅಟ್ಟಹಾಸ? ಇನಿದಾಸಲೆನ್ನ
ಕಡೆಯ ನಿಮಿಷ ।

ಎಲ್ಲ ಅಟ್ಟಹಾಸ ಎಲ್ಲ ಆರ್ಭಟ, ನಮ್ಮ ಕೊನೆಯ ಗಳಿಗೆ ಮಧುರವಾಗಲೆಂದಲ್ಲವೇ? ಬದುಕಿನುದ್ದಕ್ಕೂ ಕಹಿ ವಿಷವನ್ನುಣ್ಣಬೇಕು. ಏಕೆ . . .? ಆ ಕೊನೆಯ ಗಳಿಗೆ, ಆ ಸಾವು ಪವಿತ್ರವಾಗಲಿ ಎಂದು. ನಿತ್ಯದ ಕೊನೆಯ ಕ್ಷಣ ಬರುವುದು ಸಂಜೆಯಲ್ಲಿ. ನಿತ್ಯ ಕರ್ಮಗಳೆಲ್ಲಾ ಪವಿತ್ರ ಭಾವನೆಯಿಂದ ನಡೆಸಿದ್ದರೆ ರಾತ್ರಿಯ ಪ್ರಾರ್ಥನೆ ಮಧುರವಾದೀತು. ಆ ಕೊನೆಯ ಕ್ಷಣ ಮಧುರವಾದರೆ ಅಂದಿನ ಕರ್ಮಗಳೆಲ್ಲ ಸಫಲವಾದಂತೆ. ಆಗ ನನ್ನ ಮನಸ್ಸಿನ ಏಕಾಗ್ರತೆ ಸಾಧ್ಯ.

ಏಕಾಗ್ರತೆಗೆ ಇಂಥ ಜೀವನಶುದ್ಧಿ ಅಗತ್ಯ. ಬಾಹ್ಯ ವಸ್ತುಗಳ ಯೋಚನೆ ನಿಲ್ಲಬೇಕು. ಮಾನವನ ಆಯುಸ್ಸು ಹೆಚ್ಚೇನೂ ಇಲ್ಲ. ಆದರೂ ಈ ಅಲ್ಪ ಆಯುಸ್ಸಿನಲ್ಲೂ ಪರಮೇಶ್ವರ - ಸುಖವನ್ನನುಭವಿಸುವ ಸಾಮರ್ಥ್ಯವುಂಟು. ಇಬ್ಬರು ಮನುಷ್ಯರು ಒಂದೇ ರೂಪದವರು. ಇಬ್ಬರಿಗೂ ಎರಡು ಕಣ್ಣು, ಅವುಗಳ ನಡುವೆ ಒಂದು ಮೂಗು, ಅದಕ್ಕೆ ಎರಡು ಹೊಳ್ಳೆಗಳು. ಎಲ್ಲವೂ ಒಂದೇ ತರದ್ದಾಗಿದ್ದರೂ ಒಬ್ಬ ದೇವತ್ವಕ್ಕೆ ಏರಲು ಅರ್ಹ. ಇನ್ನೊಬ್ಬ ಪಶುಸಮಾನ. ಹೀಗೇಕಾಗಬೇಕು? ಒಬ್ಬನೇ ಒಬ್ಬ ದೇವರ ಮಕ್ಕಳು ಎಲ್ಲರೂ2. ಹಾಗಿದ್ದರೂ ಈ ಅಂತರವೇಕೆ? ಈ ಇಬ್ಬರೂ ಮನುಷ್ಯರ ಜಾತಿ ಒಂದೇ ಇದ್ದೀತೆಂದು ಅನಿಸುವುದಿಲ್ಲ. ನರನಿಂದ ನಾರಾಯಣ ಒಬ್ಬ; ನರನಿಂದ ವಾನರ ಒಬ್ಬ!

ಮನುಷ್ಯ ಎಂಥ ಉಚ್ಚಸ್ಥಿಗೇರಬಲ್ಲ ಎಂಬುದರ ದೃಷ್ಟಾಂತವಾಗಿ ಹಿಂದೆ ಅನೇಕ ಮಹಾಪುರುಷರು ಬಾಳಿದರು. ಈಗಲೂ ಅಂಥವರೆನೇಕರು ನಮ್ಮಲ್ಲಿ ಬದುಕಿದ್ದಾರೆ. ಇದು ಅನುಭವದ ಮಾತು. ಈ ನರದೇಹದ ಶಕ್ತಿಯೇನು ಎಂಬುದನ್ನು ತೋರಿಸುವ ಶರಣರು ಆಗಿಹೋದರು. ಈಗಲೂ ಇದ್ದಾರೆ. ಈ ದೇಹ ಧರಿಸಿಕೊಂಡೇ ಮನುಷ್ಯ ಇಂಥ ಅದ್ಭುತ ಕೃತಿಗಳನ್ನು ಮಾಡಬಲ್ಲನಾದರೆ ನಾನೇಕೆ ಮಾಡಲಾರೆ? ನನ್ನ ಕಲ್ಪನೆಗೆ ನಾನೇಕೆ ತಡೆ ಹಾಕಬೇಕು? ಯಾವ ನರದೇಹದಲ್ಲಿದ್ದುಕೊಂಡೇ ಇತರರು ನರವೀರರಾದರೋ, ಆ ನರದೇಹದಲ್ಲೇ ನಾನೂ ಇದ್ದೇನೆ. ಆದರೂ ನಾನೇಕೆ ಹೀಗಿರುವುದು? ನನ್ನಲ್ಲಿ ಏನೋ ತಪ್ಪಿರಬೇಕು. ನನ್ನ ಈ ಚಿತ್ತ ಸರ್ವದಾ ಹೊರಕ್ಕೆ ಧಾವಿಸುತ್ತಿದೆ. ಇತರರ ಗುಣ ದೋಷಗಳನ್ನು ನೋಡುವುದರಲ್ಲೇ ನನ್ನ ಶಕ್ತಿ ಹಾಳಾಗುತ್ತಿದೆ. ಬೇರೆಯವರ ದೋಷಗಳನ್ನು ನಾನೇಕೆ ನೋಡಬೇಕು?

ಎಣಿಸಲೇ ಪರರ ಗುಣದೋಷ । ಎನಗೇನು
ಕೊರೆ ಲೋಪದೋಷ?*


ನನ್ನದು ಕಡಮೆ ತಪ್ಪು ಇವೆಯೇ? ಯಾವಾಗಲೂ ಇತರರ ಸಣ್ಣ ಪುಟ್ಟ ವಿಷಯಗಳನ್ನೇ ನೋಡುತ್ತಿದ್ದರೆ ಚಿತ್ತದ ಏಕಾಗ್ರತೆಯನ್ನು ನಾ ಸಾಧಿಸ ಬಲ್ಲನೆ? ಹೀಗೆ ಮಾಡಿದರೆ ನನಗೆ ಎರಡೇ ಸ್ಥಿತಿ ಪ್ರಾಪ್ತವಾಗುತ್ತವೆ. ಶೂನ್ಯಾವಸ್ಥೆ ಎಂದರೆ ನಿದ್ರೆ - ಅಥವಾ ಅನೇಕಾಗ್ರತೆ. ತಮೋಗುಣ, ರಜೋಗುಣಗಳಲ್ಲೇ ನನ್ನ ತೊಳಲಾಟವಾದೀತು.

ಹೀಗೆ ಕೂತಿರು, ಹೀಗೆ ಕಣ್ಣೆಡು, ಹೀಗೆ ಆಸನ ಹಾಕು - ಇತ್ಯಾದಿಯಾಗಿ ಪರಮಾತ್ಮ ಸೂಚನೆ ಕೊಟ್ಟಿಲ್ಲವೆಂದಲ್ಲ, ಆದರೆ ಚಿತ್ತದ ಏಕಾಗ್ರತೆ ಇದಕ್ಕಿಂತ ಹಿರಿದು, ಅದನ್ನು ತಿಳಿದರೆ ಮಾತ್ರವೇ ಇವುಗಳ ಉಪಯೋಗ, ಚಿತ್ತದ ಏಕಾಗ್ರತೆ ಅವಶ್ಯವೆಂಬುದು ಒಮ್ಮೆ ಮನವರಿಕೆಯಾದರೆ ಮನುಷ್ಯ ಸಾಧನೆಗಳನ್ನು ತಾನೇ ಹುಡುಕಿಕೊಂಡಾನು.

**ದ. ರಾ. ಬೇಂದ್ರೆ (1896 - 1991)**

ದ. ರಾ. ಬೇಂದ್ರೆ ಎಂದೇ ಪರಿಚಿತರಾದ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಸಹಜ ಪ್ರತಿಭೆಯ ಕವಿ. ಸುಮಾರು ಆರು ದಶಕಗಳಿಗೂ ಮೀರಿದ ತಮ್ಮ ಸಾಹಿತ್ಯಿಕ ಬದುಕಿನಲ್ಲಿ ಕಾವ್ಯ, ಹರಟೆ, ನಾಟಕ, ಕತೆ, ವಿಮರ್ಶೆ, ಅನುವಾದ, ವಿಚಾರ ಸಾಹಿತ್ಯ, ಸಂಸ್ಕೃತಿ ಶಾಸ್ತ್ರ ಹೀಗೆ ಅನೇಕ ಸಾಹಿತ್ಯ ಪ್ರಕಾರಗಳಲ್ಲಿ ಗುಣಮಿಯ, ಸತ್ವಶಾಲಿಯಾದ ಕೃತಿಗಳನ್ನು ರಚಿಸಿದರು. `ವೈವಿಧ್ಯತೆ' ಬೇಂದ್ರೆ ಬದುಕಿನ `ಅನನ್ಯತೆ' ಅವರ ಕಾವ್ಯದ ವಸ್ತು, ಅದರ ನಿರ್ವಹಣೆ, ಅಭಿವ್ಯಕ್ತಿ ಎಲ್ಲದರಲ್ಲೂ ವೈವಿಧ್ಯತೆ, ನಾವೀನ್ಯತೆ ತಂದರು. ಬೇಂದ್ರೆ ಕಾವ್ಯಕ್ಕೆ ಅಮರಂಥ ಶಕ್ತಿಯಿದೆ. ಶೋಧಿದಲ್ಲೂ, ಆಳ, ಆಳದೊಳಗೆ ಕರೆದೊಯ್ಯುವ ಅವರ ಕಾವ್ಯ ಅಪೂರ್ವವಾದ ಹೊಸದೊಂದು ಅನುಭವ ಲೋಕ ನಿರ್ಮಾಣ ಮಾಡುತ್ತದೆ.

ಕವಿ ಕುವೆಂಪುರವರು ಅನುಭಾವಿಕ ದರ್ಶನವನ್ನು ಕಂಡು ಕೊಳ್ಳುವುದು ಪ್ರಕೃತಿಯ ಮೂಲಕವಾದರೆ ಬೇಂದ್ರೆಯವರು `ಮನುಷ್ಯ' ಪ್ರಕೃತಿಯ ಮೂಲಕ ಕಂಡು ಕೊಳ್ಳುತ್ತಾರೆ. ಬೇಂದ್ರೆಯವರಿಗೆ ಕೀಟ್ಸ್ ಕವಿ ಅಚ್ಚುಮೆಚ್ಚು. ಖಲೀಲ್ ಜಿಬ್ರಾನ್, ರವೀಂದ್ರನಾಥ್ ಠಾಕೂರ್, ಅರವಿಂದರು, ಶ್ರೀಮಾತೆ, J.K., A.E., ಮುಂತಾದವರ ಪ್ರಭಾವಕ್ಕೆ ಒಳಗಾಗಿರುವುದನ್ನು ಸ್ವತಃ ಬೇಂದ್ರೆಯವರೇ ಹೇಸರಿಸಿದ್ದಾರೆ. ಬೇಂದ್ರೆಯವರು ಸ್ನೇಹಪೂರ್ವ ಬದುಕಿನಲ್ಲಿ ಸ್ನೇಹ, ಮೈತ್ರಿಗಳಿಗೆ, ಗೆಳೆತನಕ್ಕೆ ಬಹುಮುಖ್ಯ ಸ್ಥಾನ ನೀಡಿದ್ದರು.



ಬೇಂದ್ರೆಯವರಿಗೆ ಸಿಕ್ಕಿದ್ದ ಕೆಲವು ಮುಖ್ಯ (ಪದವಿ)ಪ್ರಶಸ್ತಿ ಬಹುಮಾನಗಳು.

1959ರಲ್ಲಿ `ಅರಳು ಮರಳು' ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ.

1965ರಲ್ಲಿ `ಸಂವಾದ' (ಮರಾಠಿ) ಗ್ರಂಥಕ್ಕೆ `ಕೇಳ್ಕರ್' ಪ್ರಶಸ್ತಿ.

1966ರಲ್ಲಿ ಮೈಸೂರು ವಿಶ್ವ ವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ.

ಮೈಸೂರು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.

ಹೈದರಾಬಾದ್ ಹಿಂದಿ ಪ್ರಚಾರ ಸಭೆಯಿಂದ `ಸಾಹಿತ್ಯ ಆಚಾರ್ಯ' ಪ್ರಶಸ್ತಿ.

1968ರಲ್ಲಿ `ಪದ್ಮಶ್ರೀ' ಪ್ರಶಸ್ತಿ.

ಕರ್ನಾಟಕ ವಿಶ್ವ ವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ.

1974ರಲ್ಲಿ `ನಾಕು ತಂತಿ' ಕವನ ಸಂಗ್ರಹಕ್ಕೆ `ಜ್ಞಾನಪೀಠ' ಪ್ರಶಸ್ತಿ.

1976ರಲ್ಲಿ ಕಾಶೀ ವಿದ್ಯಾಪೀಠದಿಂದ ಗೌರವ ಡಾಕ್ಟರೇಟ್.

## 'ಜ್ಞಾನಪೀಠ ಪ್ರಶಸ್ತಿ' ವಿಜೇತ ಕನ್ನಡಿಗರು 2

# ವರಕವಿ ದ.ರಾ. ಬೇಂದ್ರೆಯವರ 'ನಾಕು ತಂತಿ'

— ಡಾ. ಜೇವಿ ಕುಲಕರ್ಣಿ

**ಬೇಂದ್ರೆಯವರಿಗೆ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ ಕವನ ಸಂಗ್ರಹ 1964 ರಲ್ಲಿ ಪ್ರಕಟಗೊಂಡ 'ನಾಕು ತಂತಿ' ತಮ್ಮ ಕಾಲೇಜಿನ ದಿನಗಳಿಂದಲೇ ಬೇಂದ್ರೆಯವರ ನಿಕಟವರ್ತಿಗಳಾದ ಡಾ 'ಜೇವಿ' ಕುಲಕರ್ಣಿ 'ಕರ್ನಾಟಕ ಮಲ್ಲ' ದಿನಪತ್ರಿಕೆಗೆ ಬರೆದು ಕೊಟ್ಟ 'ವರಕವಿ ಬೇಂದ್ರೆ 'ಸ್ಮರಣೆ' ಮಾಲಿಕೆಯನ್ನು ಆಧರಿಸಿ ಈ ಲೇಖನವನ್ನು ಸಿದ್ಧಪಡಿಸಲಾಗಿದೆ. 44 ಕವನಗಳಿರುವ 'ನಾಕು ತಂತಿ'ಕವನ ಸಂಗ್ರಹದಲ್ಲಿ ವಿಮರ್ಶಕರಿಗೆ ಸವಾಲೆಸೆಯುವ ಕವಿತೆಗಳಾದ 'ಪರಾಶರ ರೂಪ' 'ಹೆರಿಗೆ' 'ಡೊ' 'ನೋ' 'ಯುಗಾದಿ' ಕವನಗಳ ಬಗ್ಗೆ ಸುದೀರ್ಘವಾಗಿ 'ಕರ್ನಾಟಕ ಮಲ್ಲ' ದಲ್ಲಿ ಲೇಖಕರು ವಿಮರ್ಶೆ ಮಾಡಿದ್ದಾರೆ. ಕವನ ಸಂಗ್ರಹದ ಶೀರ್ಷಿಕೆಯ ಕವನ 'ನಾಕು ತಂತಿ'ಯ ಬಗ್ಗೆ 'ನೇಸರು' ಓದುಗರಿಗಾಗಿ ಪ್ರಕಟಿಸುತ್ತಿದ್ದೇವೆ.**

ಧಾರವಾಡಕ್ಕೆ ಹೋಗುವುದು, ಹೋದಾಗ ಬೇಂದ್ರೆಯವರನ್ನು ಕಾಣುವುದು ಇದೊಂದು ನನ್ನ ಜೀವನದ ಪರಿಪಾಠವಾಗಿತ್ತು. ಆದರೂ ವಿಶೇಷ ಸಂದರ್ಭದಲ್ಲಿ ಧಾರವಾಡಕ್ಕೆ ಹೋದಾಗ ಅವರನ್ನು ಕಾಣಬೇಕಾದ ಪ್ರಸಂಗ ಬಂತು. ಬೇಂದ್ರೆಯವರಿಗೆ 'ಜ್ಞಾನಪೀಠ ಪ್ರಶಸ್ತಿ' ದೊರೆತಾಗ ಅವರ ಕಾವ್ಯ ಸಂಗ್ರಹ `ನಾಕು ತಂತಿ`ಯನ್ನು ಹಿಂದೀ ಭಾಷೆಗೆ ಅನುವಾದಿಸಲು ಉಭಯ ಭಾಷಾ ಪಂಡಿತರಾದ ಡಾ ವಾಸು ಪುತ್ರನ್ ಅವರಿಗೆ ಜ್ಞಾನಪೀಠ ಸಮಿತಿಯಿಂದ ಪತ್ರವನ್ನು ತೆಗೆದುಕೊಂಡು ಡಾ ಪುತ್ರನ್ ನನ್ನ ಮನೆಗೆ ಬಂದರು.

`ಜೇವಿ, ನೀವು ಸಕ್ರಿಯವಾಗಿ ಸಹಾಯ ಮಾಡಲು ಸಿದ್ಧರಿದ್ದರೆ ಮಾತ್ರ ನಾನು ಈ ಜವಾಬ್ದಾರಿಯ ಕೆಲಸ ಒಪ್ಪಿಕೊಳ್ಳುವೆ. ಇಲ್ಲದಿದ್ದರೆ ಇದು ನನ್ನಿಂದ ಸಾಧ್ಯವಿಲ್ಲ` ಎಂದರು.

ನಾನು ಬೇಂದ್ರೆಯವರ ಎಲ್ಲ ಪದ್ಯಗಳನ್ನು ಓದಿ ಅವರೊಂದಿಗೆ ಚರ್ಚಿಸಬೇಕು ಎಂಬುದೇ ಅವರ ಇಚ್ಛೆಯಾಗಿತ್ತು. ನಾವು ಒಂದೆರಡು ಸಲ ಕುಳಿತು `ನಾಕು ತಂತಿ` ಸಂಗ್ರಹದ ಕವಿತೆಗಳನ್ನು ಓದಿದೆವು. ನಾನೆಂದೆ, `ಇದರಲ್ಲಿಂತಹ ಅನೇಕ ಕವಿತೆಗಳು ನನಗೂ ಅರ್ಥವಾಗಿಲ್ಲ, ಒಂದು ಕೆಲಸ ಮಾಡೋಣ. ನಾನು ಬೇಂದ್ರೆಯವರಿಗೆ ಪತ್ರ ಬರೆಯುವೆ. ನಾವಿಬ್ಬರೂ ೩-೪ ದಿನ ಧಾರವಾಡಕ್ಕೆ ಹೋಗಿ ಬರೋಣ. ಬೇಂದ್ರೆಯವರ ಬಾಯಿಂದಲೇ ಅವರ ಕಾವ್ಯದ ಬಗ್ಗೆ ಕೇಳೋಣ. ಡಾ. ಪುತ್ರನ್ ಅವರಿಗೆ ನನ್ನ ಸಲಹೆ ಸರಿಯಾಗಿ ತೋರಿತು. ಆಗಸ್ಟ್ ೧೯೭೪ರ ಮೊದಲನೆಯ ವಾರದಲ್ಲಿ ನಾವಿಬ್ಬರೂ ಧಾರವಾಡಕ್ಕೆ ಹೊರಟೆವು.

ಮೂರು ದಿನದ ನಮ್ಮ ವಾಸ್ತವ್ಯ ಬಹಳ ಫಲಪ್ರದವಾಗಿತ್ತು. ಬೇಂದ್ರೆಯವರು ತಮ್ಮ ಕವಿತೆಗಳನ್ನು ಓದಿ ತೋರಿಸಿದರು. ಸಂದರ್ಭ ವಿವರಿಸಿದರು. ಮೊದಲಿನ ಎರಡು ದಿನ ನಾವು ಚರ್ಚೆ ಮಾಡುವಾಗ ನನ್ನ ವಿದ್ಯಾ ಗುರುಗಳಾಗಿದ್ದ ಹಾಗೂ ಬೇಂದ್ರೆಯವರ ಪ್ರಥಮ ಶಿಷ್ಯರಾದ ಶ್ರೀ ಪ್ರಹ್ಲಾದ ನರೇಗಲ್ ಬಂದಿದ್ದರು. ಅವರು ನೋಟ್ಸ್ ಬರೆದುಕೊಂಡು ನಮಗೆ ಕೆಲವು ಪದ್ಯಗಳ ಸಾರಾಂಶ, ಟಿಪ್ಪಣಿ ಬರೆದು ಕೊಟ್ಟರು. ಮುಂಬೈಗೆ ಮರಳಿ ಬಂದ ಮೇಲೆ ನಾವು ಬೇಂದ್ರೆಯವರ ಪದ್ಯ ಸಂಗ್ರಹ ಹಿಂದಿಯಲ್ಲಿ ಅನುವಾದಿಸಿದೆವು.

`ನಾನೃಷಿ ಕುರುತೇ ಕಾವ್ಯ` ಎಂಬ ಉಕ್ತಿ ಇದೆ. ಕಾವ್ಯವು ಬೇಂದ್ರೆಯವರ ಜೀವನದಲ್ಲಿ ಹಾಸು ಹೊಕ್ಕಾಗಿರುವ ಒಂದು ಯೋಗವಾಗಿತ್ತು. ಮೈಯಲ್ಲಿ ದೇವರು ಬಂದಂತೆ, ಕಾವ್ಯಸ್ಫೂರ್ತಿ ಬೇಂದ್ರೆಯವರನ್ನು `ಯಕ್ಷ` ಲೋಕಕ್ಕೆ ಕರೆದೊಯ್ಯುತ್ತಿತ್ತು. ಮೊದಲು `ನಾದ` ಬರುತ್ತಿತ್ತು, ಹೊಂದಿಕೊಂಡು `ಶಬ್ದ` ಬರುತ್ತಿತ್ತು, ಅದರ ಹಿಂದೆ `ಅರ್ಥ` ಧಾವಿಸುತ್ತಿತ್ತು. ಬೇಂದ್ರೆಯವರ ಕಾವ್ಯ ಅರ್ಥ ಹಚ್ಚಿಕೊಳ್ಳುತ್ತ ಕುಳಿತರೆ ತಿಳಿಯುವುದಿಲ್ಲ. ಅದು ಹೊಳೆಯುವ ಕಾವ್ಯ ಶಬ್ದಗಳಲ್ಲಿ ಮಂತ್ರ ಶಕ್ತಿ ಅಡಗಿರುವ ಕಾವ್ಯ. ಅದರ ವಾಚನದಿಂದ ಒಂದು ಪ್ರಭಾವ ಮನಸ್ಸಿನ ಮೇಲೆ ಆಗುತ್ತದೆ. `ನಾಕುತಂತಿ` ಕವನಕ್ಕೆ ಟಿಪ್ಪಣಿ ಬರೆಯುತ್ತಾ ಡಾ. ವಾಮನ ಬೇಂದ್ರೆ ಹೇಳುತ್ತಾರೆ`ಅಂಬಿಕಾತನಯದತ್ತರು ಮಿಡಿಯುವ ವೀಣೆಗೆ ನಾನು, ನೀನು, ಆನು, ತಾನು ಎಂಬ ನಾಕೇ ನಾನು ತಂತಿ ಎಂದು ಅವರೇ ಹೇಳಿದ್ದಾರೆ. ನಾನು ತಂದೆ, ನೀನು ತಾಯಿ, ಆನು ಇವರಿಬ್ಬರ

ಆಧಾರವಾಗಿ ಬರುವ ನಗು. ಮತ್ತು ಈ ಕುಟುಂಬ ಸಂಸ್ಥೆಗೆ ಸ್ವಸ್ತಿ ಶುಭಂ ಎನ್ನುವ ಪರಮಾತ್ಮ ಶಕ್ತಿ ತಾನು ಎಂಬುದು ಕವಿಯ ಭಾವ. ತಂದೆ, ತಾಯಿ, ಮಗು ಬಿಟ್ಟರೆ ಜಗತ್ತಿನಲ್ಲಿ ಬೇರೆ ಏನೂ ಇಲ್ಲ. ಇವರ ಕಲಹವೇ ಇತಿಹಾಸ. ಇವರಲ್ಲಿ ಶಾಂತಿ ಪ್ರತಿಷ್ಠಾಪಿತಗೊಳ್ಳುವುದೇ ದೇವ ಜನ್ಮ, ನವಯುಗ' ಈ ಸೂತ್ರವನ್ನು ಅನುಸರಿಸಿ `ನಾಕು ತಂತಿ` ಯೊಳಗಿನ ಅನೇಕ ಕವನಗಳು ರೂಪುಗೊಂಡಿವೆ.

ಅವು ಈದಿನ
ನಾವು ನೀವಿಗೆ
ಅನು ತಾನಾದ
ತನನನಾ,
ನಾನು ನೀನಿನ
ಈ ನೀನಾನಿಗೆ
ಬೇರೆ ಏನೋ
ಜಾಣೆನಾ

ಕವನದ ಮೊದಲ ಭಾಗ ನಾದನಿಷ್ಠವಾಗಿ. ಎರಡನೆಯ ಭಾಗದಲ್ಲಿ ಇದೇ ಚಿತ್ರರೂಪಿಯಾಗಿದೆ, ಪ್ರತಿಮೆಗಳ ಸಾಲಾಗಿದೆ. ಮೂರನೆಯ ಭಾಗದಲ್ಲಿ ವಾಗರ್ಥದಲ್ಲಿ ದಾಂಪತ್ಯದ ಬಗ್ಗೆ ರೂಪಕವಿದೆ. ಮುನ್ನುಡಿಯಲ್ಲಿ ಬೇಂದ್ರೆ ಹೇಳುತ್ತಾರೆ. `ಭೋಗ ಸಾಧನೆಯ ಕವನ ಭಂಡಾರವೂ ಇದೆ. ಯೋಗ ಸಾದನೆಯ ಕವನ ಮಾರ್ಗವಿದೆ. ಸಾಮಾನ್ಯತೆಯ ಅಭ್ಯಾನ, ಅಹಂಕಾರಗಳಿಗೆ ನಾವು ಪಟ್ಟುಗಟ್ಟಿ ಅವನ್ನು ಶಿಲಾ ಶಾಪಕ್ಕೆ ಗುರಿಪಡಿಸಬಾರದು. ರಾಮ ಪಾದಸ್ಪರ್ಶ ಅದಕ್ಕೂ ಬೇಕು. ಆ ದಿವ್ಯ ದರ್ಶನದಲ್ಲಿ ವ್ಯಾಧ' ವಾಲ್ಮೀಕಿಯಾಗುತ್ತಾನೆ. ಇಂಥ ಹುತ್ತದ ಸುತ್ತ `ಅನು` `ತಾನು` `ನಾನು` `ನೀನಿ` ನಾಕು ತಂತಿ ಚೌದಂತಿಯ ವೀಣೆ ಮಿಡಿಯುತ್ತದೆ. ಬೇಂದ್ರೆಯವರ ಪದ್ಯ ಅರ್ಥವಾಗುವುದಿಲ್ಲ ಎಂಬ ಸೊಲ್ಲು ಮೊದಲಿನಿಂದಲೂ ಇದೆ. ಅವರೇ ಹೇಳುತ್ತಾರೆ ಕ್ಲಿಷ್ಟತೆ, ದುರೂಹತೆ, ಅವರವರ ಸಂಸಾರ ಬಂಧನಗಳು, ಸಮ್ಯಕ್ ಶಿಕ್ಷಣದಿಂದಲೇ ಹಳೆಯ ಬಂಧ ಹರಿಯಬೇಕು. ಹೊಸಸಂಬಂಧ ತೆರೆಯಬೇಕು` ಎಂದು.

ಬೇಂದ್ರೆಯವರು ತಾವು ಕವಿತೆ ಬರೆದೆವು ಅನ್ನುವುದೇ ಇಲ್ಲ. ಅದನ್ನು ಒಳಗೆ ಕುಳಿತು ಕವಿ ಬರೆಯುತ್ತಾನೆ. ಬೇಂದ್ರೆ ಮಾಸ್ತರ ಬರೆದುಕೊಳ್ಳುವವ ಲಿಪಿಕಾರ (Scribe) ಮಾತ್ರ ಎನ್ನುತ್ತಾರೆ. ತಮ್ಮ ಜೊತೆಗೆ ಪ್ರೊಫೆಸರ್ ಬೇಂದ್ರೆ ಇದ್ದಾನೆ. ಅವ ಪಂಪಗ ಅರ್ಥ ಹಚ್ಚತಾನ, ತನ್ನ ಹತ್ತಿರದ ಕವಿ ಅಂಬಿಕಾತನಯ ದತ್ತನ ಕವಿತೆಗೂ ಅರ್ಥ ಹಚ್ಚತಾನ` ಎನ್ನುತ್ತಾರೆ. ಒಳಗೆ ಇನ್ನೊಬ್ಬ ಗುರು ಇದ್ದಾನೆ. ಅವನೇ ಬರೆಯಲು ಆಜ್ಞಾಪಿಸುತ್ತಾನೆ. ಮತ್ತೆ ಈ ಕಾವ್ಯ ಕೃತಿಯಲ್ಲಿ ನಾಲ್ವರು ತೊಡಗಿದ್ದಾರೆ. ಅರ್ಥ ಆಗಲೇಬೇಕೆಂಬ **ಹಟಬೇಡ** ಅನ್ನುತ್ತಾರೆ. ಓದುಗನ ಸಂಸ್ಕಾರಕ್ಕೆ ಅನುಗುಣವಾಗಿ ಅರ್ಥದ ತೆರೆ ತೆರೆಯುತ್ತಲೇ ಹೋಗುತ್ತದೆ. `ಸಪ್ತಕಲಾ` ಪದ್ಯದಲ್ಲಿ ಬೇಂದ್ರೆಯವರೇ ಹೇಳುತ್ತಾರೆ. ಕಲ್ಲಿನಲ್ಲಿ ಮೂರ್ತಿ ಇದ್ದೇ ಇರುತ್ತದೆ. ಅದು ಕಲಾವಿದನಿಗೆ ಮಾತ್ರ ಕಾಣುತ್ತದೆ ಅವನ ಟಂಕ (ಸಾಧನ) ಆತಂಕವನ್ನು ಸರಿಸುತ್ತದೆ. ಒಳಗಿನ ಮೂರ್ತಿಗೆ ಆವರಣದ ಬಂಧನವಿರುತ್ತದೆ. ಅದರಿಂದ ಮುಕ್ತಿ ಪಡೆದಾಗ ಮೂರ್ತಿ ಗೋಚರವಾಗುತ್ತದೆ. ಹಾಗೆ ಕವನವೂ ಇರುತ್ತದೆ. ಅದನ್ನು ಒರತೆಗೆಯುವವ ಕವಿ ಅವರೇ 'ತೇಲಾಡುವಾಗ' ಪದ್ಯದಲ್ಲಿ ಹೇಳಿದಂತೆ.

ತೇಲಾಡುವಾಗ ಮನಸು
ಮೇಲಾಡತಾನ ಕನಸು
ಹಾಡುವಾಗ ಇತ್ತ
ತೇಲಾಡ ತಾವ ಚಿತ್ತ

ಕವನವು ಜಾಗ್ರತಿ, ಸ್ವಪ್ನ, ಸುಷುಪ್ತಿ ಹಾಗೂ ತುರೀಯ ಅವಸ್ಥೆಯಲ್ಲಿ ಹಾಯ್ದು ಬರುವ ಪ್ರಕ್ರಿಯೆ. ಕಾವ್ಯ ದೇವತೆ ಬಂದು, ಸೆರಗನ್ನು ಬೀಸಿ ಹೋಗುತ್ತಾಳೆ. ಮಗು ಅದನ್ನು ಹಿಡಿದು ಎಚ್ಚರಾದಾಗ ಕೆಲ ನೂಲು ಸಾಲು ಪಡೆಯುತ್ತದೆ. ಎಂಬ ಚಿತ್ರಣ ಬಹಳ ಸೊಗಸಾಗಿದೆ.

ಹಾಸಾದ ಮಿಂಚಿನಿಂದ
ಬೀಸಿದ್ದ ಸೆರಗಿನಿಂದ
ಸೆಳೆದಂತೆ ಎರಡು ನೂಲು
ಉಳಿದಾವ ನಾಕು ಸಾಲು

ಯಾವ ದಿಕ್ಕಿನಿಂದ ಹೋದರೂ 'ನಾಕು' ಬೇಂದ್ರೆಯವರ ಕಾವ್ಯದಲ್ಲಿ ಬಂದೇ ಬಿಡುತ್ತದೆ. ಈ ನಾಕು ಅದರ 'ನಾಕ'ವಾಗಿದೆ.

ಸಾಮಾನ್ಯ ಕಾವ್ಯವನ್ನು ಅರ್ಥೈಸುವಂತೆ ನಾವು ದರ್ಶನ ಕಾವ್ಯವನ್ನು ಅರ್ಥೈಸುವುದು ಸಾಧ್ಯವಿಲ್ಲ. ಅದಕ್ಕೆ ಬೇಂದ್ರೆಯವರು ಎರಡು ಉದಾಹರಣೆ ಕೊಡುತ್ತಾರೆ. `ವ್ಯಾಧ ವಾಲ್ಮೀಕಿಯಾಗುತ್ತಾನೆ. ಕಲ್ಲು ಬಾಲಿಕೆಯಾಗುತ್ತಾಳೆ ! ಆದರೆ ಇವುಗಳಲ್ಲಿ ದಿವ್ಯ ದರ್ಶನವಿದೆ. ದೈವೀ ಸ್ಪರ್ಶವಿದೆ. ಒಂದೆಡೆ ರಾಮನಾಮದ ಮಹಿಮೆ ಇದೆ. ಇನ್ನೊಂದರಲ್ಲಿ ರಾಮ ಪಾದ ಸ್ಪರ್ಶವಿದೆ. ನಾಲ್ಕು ಮಗ್ಗಲು ಕೂಡಿದಾಗಲೇ ಸಾಮರಸ್ಯ ದೊರೆಯುತ್ತದೆ. `ಮನುಷ್ಯನ ಆತ್ಮನ ನಾಲ್ಕು ಮಗ್ಗಲುಗಳಲ್ಲಿ ಎರಡು (ನಾನು, ನೀನು) ಲೋಕಾಭಿಮುಖವಾಗಿದ್ದರೆ. ಇನ್ನೆರಡು (ಆನು ತಾನು) ದಿವ್ಯಕ್ಕೆ ಅಭಿಮುಖವಾಗಿವೆ. ಅಲ್ಲದೆ ಜೀವಕ್ಕೆ ಆಧಾರವಾಗಿ ಪೋಷಕವಾಗಿವೆ. ಈ ನಾಲ್ಕು ಮಗ್ಗಲುಗಳ ಸಾಮರಸ್ಯ ನಾಕು ತಂತಿಯ ಪ್ರತೀಕದ ರಹಸ್ಯವಾಗಿದೆ. ಎಂದು ಕೀರ್ತಿನಾಥರು ಹೇಳುತ್ತಾರೆ. (ಬಾರ ಸಾಧನಕೇರಿಗೆ 213) ನಾನು ಹಾಗು ನೀನಿಗೆ ಆಧಾರವಾಗಿ ಬರುವ ಮಗು ಆತ್ಮ ಸ್ವರೂಪಿ ಬ್ರಹ್ಮನ ಸಂಕೇತವಾಗಿ ಮಾನವ ಜಾತಿಯ ಭವಿಷ್ಯವಾಗಿ ಬರುತ್ತದೆ.

ಬೆನ್ನ ನಾನಿಕೆ
ಜನನ ಜಾನಿಕೆ
ಮನನವೇ ಸಹಿ
ತಸ್ಸನಾ

ನಾನು ಅಹಂ, ನೀನು **ವಿಶ್ವ, ಆನು ಆತ್ಮ, ತಾನು** ಪರಾತ್ಪರ ಶಕ್ತಿ ಎಂಬ ಅರ್ಥ ಕೂಡ ಇಲ್ಲ ಹುದುಗಿದೆ ಇದೇ ವಿಚಾರ ಎರಡನೆಯ ಚರಣದಲ್ಲಿ ಚಿತ್ರರೂಪವಾಗಿ ಮೂಡಿದೆ.

ಗೋವಿನ ಕೊಡುಗೆಯ
ಹಡಗದ ಹುಡುಗಿ
ಬೆಡಗಿಲೆ ಬಂದಳು
ನಡುನಡುಗಿ

ಮೊದಲನೆಯ ಚರಣದೊಂದಿಗೆ ಹೋಲಿಸಿ ನೋಡಬಹುದು. `ಅವು ಈ ದಿನ` ಇಲ್ಲಿ `ಗೋವಿನ ಕೊಡುಗೆ` ಆಗಿದೆ. `ಅನು ತಾನದ` ಇಲ್ಲಿ `ಬೆಡಗಿಲೆ ಬಂದಳು` ಆಗಿದೆ. `ತನನನಾ ಇಲ್ಲಿ `ನಡುನಡುಗಿ` ಆಗಿದೆ. ನಾನು ನೀನಿನ ದಾಂಪತ್ಯದಿಂದ ಆತ್ಮ ಸ್ವರೂಪಿ ಪುತ್ರ `ತಾನು` ಉದ್ಭವಿಸುತ್ತಾನೆ. ಬೆಡಗಿಲೆ ಬಂದು ಹುಡುಗಿ, ಸಲಿಗೆಯ ಸುಲಿಗೆಯ ಮಾಡಿ, ಜೇನಿನ ಮಳೆ ಸುರಿಯುತ್ತಾಳೆ. ಬಸುರಿನ ಮೊಳಕೆಯಾಗಿ ಬಂದ ಮಗುವಿಗೆ, ಉದ್ಭವನಿಗೆ ಮೊಲೆಯುಡಿಸುತ್ತಾಳೆ.

ಮೂರನೆಯ ಭಾಗದಲ್ಲಿ ಪ್ರಶ್ನೋತ್ತರವಿದೆ.

ಚಿಕ್ಕೀ ಮಳಿ ತಕ್ಕೀ ಹಾಕಿತ್ತು
ಸ್ವಾತಿ ಮುತ್ತಿನೊಳಗ
ಸತ್ತೀಯೋ ಮಗನ,
ಅಂತ ಕೂಗಿದರು
ಸಾವೀ ಮಗಳು, ಭಾವೀ ಮಗಳು ಕೂಡಿ

ಚಿಕ್ಕಿ ಮಳೆಯ ಒಂದು ಬಿಂದು ಸ್ವಾತಿಯ ನಕ್ಷತ್ರದಲ್ಲಿ ಶಿಂಪಿನಲ್ಲಿ ಬಿದ್ದಾಗ ಅದೇ ಮುತ್ತಾಗುತ್ತದೆ. ಇಲ್ಲಿ `ಸತ್` `ಚಿತ್` `ಆನಂದ`ದ ವಿಚಾರ ಗುಪ್ತವಾಗಿ ಹರಿದಿದೆ. `ಸಾವೀ` ಅಂದರೆ ಸಾವಯಿತ್ರಿ, `ಭಾವಿ` ಅಂದ್ರೆ `ಭಾವಯಿತ್ರಿ` ಇದು ಕವಿತೆಯ ಜನನವನ್ನು ಸೂಚಿಸುತ್ತದೆ.

ಈ ಜಗ, ಅಪ್ಪ ಅಮ್ಮನ ಮಗ
ಅಮ್ಮನೊಳಗೆ ಅಪ್ಪನ ಮೊಗ
ಅಪ್ಪನ ಕತ್ತಿಗೆ ಅಮ್ಮನ ನೊಗ
ನಾ ಅವರ ಕಂದ
ಶ್ರೀ ಗುರುದತ್ತ ಅಂದ

ಶಬ್ದ ಶಬ್ದದಲ್ಲೂ ಅರ್ಥದ ಪದರುಗಳು ಇವೆ ಅಂದಹೇಳಿದ ಎಂಬುದು ಒಂದು ಅರ್ಥವಾದರೆ `ಅಂಬಿಕಾತನಯದತ್ತ` ಇಂದ ಕಿರು ರೂಪ `ಅಂದ` ವಂಗು ಯಾವಾಗಲೂ ಬೇಂದ್ರೆಯವರಿಗೆ ಅರ್ಧನಾರೀಶ್ವರನಂತೆ ಕಂಡಿದೆ. ಅಮ್ಮನಲ್ಲಿ ಅಪ್ಪನ ಮುಖವಿದ್ದರೆ, ಅಪ್ಪನ ಕುತ್ತಿಗೆಗೆ ತಾಯಿ ನೊಗವಿರುತ್ತದೆ ಎಂಬ ಭಾವವಿದೆ.

ನಾಲ್ಕನೆಯ ಭಾಗದಲ್ಲಿ ಸ್ಪಷ್ಟವಾಗಿ ನಾಲ್ಕು ತಂತಿಯ ಉಲ್ಲೇಖ ಬರುತ್ತದೆ. `ನಾನು` `ನೀನು` `ಆನು` `ತಾನು` ನಾಕ ನಾಕು ತಂತಿ ಎನ್ನುತ್ತಾರೆ. ಎಲ್ಲವೂ ಓಂಕಾರದಲ್ಲಿ ಲೀನವಾಗುತ್ತದೆ. ಇಲ್ಲಿ ವಾಗರ್ಥದ

(ಪುಟ 16ಕ್ಕೆ)

# ಪತ್ರ

ಮೂಲ ಮರಾಠಿ: ಉಷಾ ರಾವ್
ಕನ್ನಡಕ್ಕೆ: ಎಸ್. ಜೆ. ನವಿಲೇಕರ್

``ಅರೆ...., ಸುಟ್ಟ ವಾಸನೆ ಎಲ್ಲಿಂದ ಬರುತ್ತಿದೆ? ಅಯ್ಯೋ ರಾಮಾ! ಎಂಥಾ ಬೇಜವಾಬ್ದಾರಿ ಹುಡುಗಿಯಪ್ಪ ಇದು!" ಮಾಯಿ ತನ್ನಷ್ಟಕ್ಕೆ ತಾನೇ ಸಿಟ್ಟಿನಿಂದ ಗೊಣಗುಟ್ಟಿ ಕರ್ಕಶ ಧ್ವನಿಯಲ್ಲಿ ಕೂಗು ಹಾಕಿದಳು.

``ಸುಕೇಶೀ, ಏ ಸುಕೇಶೀ$_{sss}$. ``ಕಿವಿ ಕೆಪ್ಪಾಗಿದೆಯೋ ಏನೋ" ಮಾಯಿ ಮತ್ತೊಮ್ಮೆ ಗೊಣಗಿ ಕೊಂಡಳು.

ಅಂಗಳದಲ್ಲಿ ಬಟ್ಟೆ ಹರವುತ್ತಿದ್ದ ಸುಕೇಶಿಯ ಕಿವಿಗೆ ಮಾಯಿಯ ಅರ್ಭಟ ಬಿದ್ದೊಡನೆ ಅವಳು ಒಂದು ಕ್ಷಣ ವಿಗ್ರಹದಂತೆ ಸ್ತಬ್ಧಳಾಗಿ ಬಿಟ್ಟಳು. ಮರುಕ್ಷಣದಲ್ಲೇ ಚಿಗರೆಯಂತೆ ಓಡುತ್ತಾ ಮನೆಯೊಳಗೆ ಹೊಕ್ಕಳು.

``ಏನಾಯಿತೇ ಮಾಯೀ?" ಹೆದರುತ್ತಾ ಸುಕೇಶಿ ಮೆಲ್ಲನೆ ಕೇಳಿದಳು. ಅವಳ ಪ್ರಶ್ನೆಯನ್ನು ಮುಗಿಸಲೂ ಬಿಡದೆ ಮತ್ತೊಮ್ಮೆ ಮಾಯಿ ಅವಳ ಮೇಲೆ ಹರಿಹಾಯ್ದಳು.

``ಏನಾಯಿತು ಅಂತ ಕೇಳುವುದು ಬೇರೆ ಮತ್ತೆ! ಸುಟ್ಟ ವಾಸನೆ ಬರುತ್ತೋ ಇಲ್ಲವೋ? ಅಥವಾ ಮೂಗೂ ಬಿದ್ದು ಹೋಗಿದೆಯೋ. ಪಲ್ಯ ಮಾಡಲಿಕ್ಕೆ ಒಲೆ ಮೇಲಿಟ್ಟು ಹೊರಟಳು ತಿರುಗಲಿಕ್ಕೆ. ಸೀದು ಕರಕಲಾಗಿ ಹೋಗಿರಬೇಕು. ಅಷ್ಟೆಲ್ಲಾ ಕೆಲಸ ಏನಿರುತ್ತೆ ಹೊರಗೆ? ಶುದ್ಧ ಬೇಜವಾಬ್ದಾರಿ ತಂದು".

``ಮಾಯಿ, ಒಗೆದಿದ್ದ ಬಟ್ಟೆ ಒಣ ಹಾಕುತ್ತಿದ್ದೆ ಕಣೇ" ಉತ್ತರಿಸುತ್ತಲೇ ಸುಕೇಶಿ ಅಡಿಗೆ ಮನೆಯತ್ತ ಧಾವಿಸಿದಳು. ಬೇಯಲು ಇಟ್ಟಿದ್ದ ಪಲ್ಯದ ಪಾತ್ರೆಯ ಮುಚ್ಚಳ ಸರಿಸಿ, ಮತ್ತಷ್ಟು ನೀರು ಹೊಯ್ದು, ಉರಿ ಕಡಿಮೆ ಮಾಡಿದಳು. ಮಸಾಲೆ ಪುಡಿ ಡಬ್ಬಿಯನ್ನು ಹುಡುಕ ತೊಡಗಿದಳು.

ಅಂತೂ ಎಲ್ಲ ಸುಸೂತ್ರವಾಯಿತು ಎಂದು ಖಾತ್ರಿಯಾದ ಮೇಲೆ ಸುಕೇಶಿ ಪುನಹ ಅಂಗಳಕ್ಕೆ ಬಂದು ಯಾಂತ್ರಿಕವಾಗಿ ಕೆಲಸ ಮುಂದುವರಿಸಿದಳು. ಕಳೆದ ಎಂಟು ದಿನಗಳಿಂದ ತನ್ನ ಪ್ರತಿಯೊಂದು ಚಲನವಲನಗಳನ್ನು ಯಾರೋ ಗಮನಿಸುತ್ತಿದ್ದಾರೆ ಎಂಬ ಅಂಶ ಈಗ ಅವಳಿಗೆ ಸಾಕಷ್ಟು ಖಚಿತವಾಗತೊಡಗಿತ್ತು. ಒಮ್ಮೆಯಂತೂ ಪಕ್ಕದ ಕಟ್ಟಡದ ಮಹಡಿಯ ಕಿಟಕಿಯಿಂದ ತರುಣನೊಬ್ಬ ತನ್ನತ್ತಲೇ ನೋಡುತ್ತಿರುವುದನ್ನು ಆಕೆ ಗಮನಿಸಿದ್ದಳು. ಇವಳು ಅವನತ್ತ ನೋಡಿದೊಡನೆಯೇ ಆತ ಸಟಕ್ಕನೆ ಬದಿಗೆ ಸರಿದು ಮರೆಯಾಗಿದ್ದ. ಈಗಲೂ ಅವಳಿಗೆ ಅದೇ ಕಣ್ಣುಗಳು ತನ್ನತ್ತ ದೃಷ್ಟಿಯಿಟ್ಟಿರುವ ಭಾಸವಾಗುತ್ತಿತ್ತು. ಕೈಗಳು ಯಾಂತ್ರಿಕವಾಗಿ ಕೆಲಸ ಮಾಡುತ್ತಿದ್ದರೂ ಚಂಚಲ ಮನಸ್ಸು ಎತ್ತೆತ್ತಲೋ ಓಡುತ್ತಿತ್ತು. ಅಷ್ಟರಲ್ಲೇ ಹದಿಹರೆಯದ ಹುಡುಗನೊಬ್ಬ ಸೈಕಲ್‌ನಿಂದ ಬಂದು, ಗಕ್ಕನೆ ಅವಳೆದುರು ನಿಲ್ಲಿಸಿ, ಅವಳ ಕೈಯಲ್ಲಿ ಒಂದು ಲಕೋಟೆ ಇಟ್ಟು ``ನಿಮಗೆ ಕೊಡಲಿಕ್ಕೆ ಹೇಳಿದ್ದಾರೆ" ಎಂದಷ್ಟೇ ಹೇಳಿ, ಸೈಕಲ್ ಏರಿ ಹೋಗಿ ಬಿಟ್ಟ. ಸುಕೇಶಿ ಕೈಯಲ್ಲಿ ಲಕೋಟೆ ಹಿಡಿದು ಸಂಭ್ರಾಂತಿಯಿಂದ ನಿಂತೇ ಇದ್ದಳು.

``ಅಯ್ಯೋ ದೇವರೇ! ಕಾಗದ . . . ನನಗೆ! ಟಪ್ಪಾಲಿನಿಂದ ಯಾಕೆ ಕಳಿಸಲಿಲ್ಲ?ಛೆ. ಒಂದೂ ತಿಳಿಯುತ್ತಿಲ್ಲ". ಮನಸ್ಸಿನಲ್ಲಿ ಗೊಂದಲವಾಗುತ್ತಿತ್ತು, ಭೀತಿ, ಆಶ್ಚರ್ಯ, ಕುತೂಹಲ ಇತ್ಯಾದಿ ಸಮ್ಮಿಶ್ರ ಭಾವನೆಗಳಿಂದ ಮನಸ್ಸು ಹುಚ್ಚಾಗುತ್ತಿದ್ದರೂ ಕೈಯಲ್ಲಿದ್ದ ಲಕೋಟೆಯನ್ನು ಯಾರಿಗೂ ತಿಳಿಯದಂತೆ ಕುಪ್ಪಸದಲ್ಲಿ ಬಚ್ಚಿಟ್ಟು ಕೊಳ್ಳಲು ಮರೆಯಲಿಲ್ಲ!

ಅಂಗಳದಿಂದ ಮನೆಯತ್ತ ಹೋಗುವಾಗ ಮತ್ತೆಯ ಮಾಯಿಯ ಕೂಗಾಟ ಕಿವಿಗೆ ಅಪ್ಪಳಿಸಿತು. ಅದಕ್ಕೆ ಲಕ್ಷ್ಯ ಕೊಡದೆ ಸುಕೇಶಿ, ಅಪ್ಪನ ಊಟಕ್ಕೆ ತಯಾರು ಮಾಡುವುದರಲ್ಲಿ ನಿರತಳಾದಳು.

ಊಟ ಬಡಿಸುತ್ತಿದ್ದಾಗಲೂ ಸುಕೇಶಿಯ ಮನಸ್ಸು ಬಚ್ಚಿಟ್ಟುಕೊಂಡಿದ್ದ ಲಕೋಟೆಯಲ್ಲಿಯೇ ನೆಟ್ಟಿತ್ತು. ಅಪ್ಪನ ತಟ್ಟೆ ಖಾಲಿಯಾಗಿದ್ದರೂ ಬಡಿಸುವುದು ಬಿಟ್ಟು ಎತ್ತಲೋ ನೋಡುತ್ತಾ ವಿಚಾರದಲ್ಲಿ ಮಗ್ನಳಾಗಿದ್ದ ಸುಕೇಶಿಯನ್ನು ನೋಡಿ ಮಾಯಿ ಮತ್ತೆ ಪ್ರಾರಂಭಿಸಿದಳು.

``ಎಂಥಾ ಹುಡುಗಿ ಇದು ಅಂತೀನಿ! ಅಲ್ಲಾ, ಇವರ ತಟ್ಟೆ ಖಾಲಿಯಾಗಿದ್ದು ಗೊತ್ತೋ ಇಲ್ಲವೋ. ಯಾವ ಕಡೆಗೆ ಇದೆ ಲಕ್ಷ್ಯ. ಅನ್ನ ಹಾಕುವುದು ಬಿಟ್ಟು ಏನು ಮಾಡುತ್ತಿದ್ದೀ. ಇನ್ನೂ ಮಕ್ಕಳ ಊಟ ಆಗಬೇಕು. ಮುಗಿಸು ಬೇಗ".

``ಬಂದೆ ಕಣೆ ಪುಟ್ಟೀ, ಅಳಬೇಡ!" ಕಿರಿಕಿರಿ ಮಾಡುತ್ತಿದ್ದ ತನ್ನ ಐದನೇ ಕೂಸನ್ನು ಉದ್ದೇಶಿಸಿ ಕರೆಯುತ್ತಾ ಮಾಯಿ ಪಕ್ಕದ ಕೋಣೆಗೆ ಹೋದಳು.

``ಅಲ್ಲ . . . ಈಗ ಅವಳ ವಯಸ್ಸೇ ಹಾಗಿದೆ. ಕನಸು ಕಾಣೋ ದಿನಗಳು. ಹದಿನೇಳು ತುಂಬಿ ಹದಿನೆಂಟು ಯಾವಾಗಲೋ ಶುರುವಾಗಿದೆ. ಇನ್ನೊಂದು ನಾಲ್ಕಾರು ತಿಂಗಳಲ್ಲಿ ವರ ಹುಡುಕಲಿಕ್ಕೆ ಪ್ರಾರಂಭ ಮಾಡಬೇಕು". ಅಪ್ಪ ಮೆಲ್ಲಗಿನ ದನಿಯಲ್ಲಿ ಹೇಳಿದರು. ಆದರೇನು, ಕೂಸಿನ ಕಿರಿಕಿರಿ ರೋದನದ ಸದ್ದಿನಲ್ಲೂ, ಮಾಯಿಗೆ ಎಲ್ಲಾ ಕೇಳಿಯೇ ಬಿಟ್ಟಿತ್ತು. ಅಳುತ್ತಿರುವ ಮಗುವಿನ ಬೆನ್ನಿಗೆ ಎರಡು ಏರಿಸಿ ಮಾಯಿ ಕೂಗಿದಳು.

``ಬೇರೆ ಉದ್ಯೋಗ ಏನು ಹೇಳಿ ನಿಮಗೆ? ಬರೀ ಜೀತದ ದುಡಿಮೆ ಮಾಡಿ ಸವತಿ ಮಗಳ ಪೀಡೆ ಸಹಿಸಲಿಕ್ಕೆ ಅಂತೇನು. ನೀವು ನನ್ನನ್ನು ಕಟ್ಟಿ ಕೊಂಡದ್ದು? ಅವಳದ್ದೊಂದು ರಾಜರಾಣಿ ಸಂಸಾರ ಹೂಡಿಸಿ ಹೊಟ್ಟೆಗೆ ಹಾಲು ಹೊಯ್ದು ಕೊಂಡು ಬಿಡಿ".

ಅಪ್ಪ ತಕ್ಷಣ ಹೇಳಿದರು. ``ಹೇಳಿದೆ ಅಂದ ಮಾತ್ರಕ್ಕೆ ತಕ್ಷಣ ಆಗಿ ಬಿಡುತ್ತೇನು? ಇನ್ನೂ ಒಂದು ಒಂದೂವರೆ ವರ್ಷವಾದರೂ ಬೇಕು ಎಲ್ಲಾ ಕೂಡಿ ಬರಲಿಕ್ಕೆ. ಅಷ್ಟು ಹೊತ್ತಿಗೆ ಮಕ್ಕಳೂ ಸ್ವಲ್ಪ ದೊಡ್ಡವರಾಗಿರುತ್ತಾರಲ್ಲಾ . . ."

ಇಷ್ಟೆಲ್ಲಾ ಕೇಳುತ್ತಾ ಕೂರಲು ಮಾಯಿಗೆ ತಾಳ್ಮೆಯಾದರೂ ಎಲ್ಲಿ? ಆಕೆ ಕೈಗೂಸನ್ನು ಮಲಗಿಸಿಕೊಂಡು ಹಾಲೂಡಿಸುವುದರಲ್ಲಿ ಮಗ್ನಳಾಗಿದ್ದಳು.

ಸುಕೇಶಿ ಅಪ್ಪನ ಉಂಡ ತಟ್ಟೆಯನ್ನು ತೆಗೆದು ಮೋರಿಯಲ್ಲಿಟ್ಟಳು. ತಮ್ಮಂದಿರ ಶಾಲೆಯ ವೇಳೆಯಾದದ್ದು ಗಮನಕ್ಕೆ ಬಂದು ಅವರ ಪುಸ್ತಕ, ಪೆನ್ಸಿಲ್, ಬೂಟು ವ್ಯವಸ್ಥೆ ಮಾಡಿಟ್ಟಳು. ಏನಾದರೂ ಕುಪ್ಪಸದಲ್ಲಿ ಅಡಗಿ ಕುಳಿತ ಪತ್ರ ಅವಳಿಗೆ ಶಾಂತಿಯಲ್ಲಿರಲು ಬಿಡದೆ ಕಿರುಕುಳ ಕೊಡುತ್ತಿತ್ತು. ಯಾವಾಗ ಎಲ್ಲ ಕೆಲಸ ಮುಗಿಸಿ, ಪತ್ರ ಓದಿಯೇನೋ ಎಂಬ ವಿವಂಚನೆಯಲ್ಲಿ ಅವಳು ಬೇಗ ಬೇಗ ಮುಗಿಸತೊಡಗಿದಳು.

ಅಂತೂ ಎಲ್ಲಾ ಮುಗಿದು, ಪಾತ್ರೆ ತೊಳೆದಿಡುವ ಹೊತ್ತಿಗೆ ಮಧ್ಯಾಹ್ನ ಎರಡೂವರೆ ಹೊಡೆದಿತ್ತು. ಯಾವತ್ತಿನಂತೆ ಮಾಯಿ ಮಧ್ಯಾಹ್ನದ ನಿದ್ದೆಗೆಂದು ಹೋಗಿದ್ದರಿಂದ ಸುಕೇಶಿಗೆ ಈಗ ಸ್ವಲ್ಪ ವಿಶ್ರಾಂತಿ, ನೆಮ್ಮದಿ ಸಿಕ್ಕಿತು. ತನ್ನ ಕೋಣೆಗೆ ಧಾವಿಸಿ ಅವಸರದಿಂದ ಲಕೋಟೆ ಹೊರಗೆಳೆದು, ಅದರಿಂದ ಕಾಗದ ತೆಗೆದು ಓದತೊಡಗಿದಳು.

`ಪ್ರಿಯ ಸುಕೇಶಿ, ನಿನ್ನ ಹೆಸರು ನನಗೆ ತಿಳಿದದ್ದು ಹೇಗೆ ಎಂದು ನಿನಗೆ ಆಶ್ಚರ್ಯವಾಗಿರಬೇಕಲ್ಲವೇ? ಅಂದ ಹಾಗೆ, ಮರೆತೆ, ನಿನಗೆ `ಪ್ರಿಯ' ಎಂದು ಸಂಭೋದಿಸುವ ಅಧಿಕಾರವೂ ನನಗಿಲ್ಲ ಅನ್ನು. ಏನಾದರೂ ಏನು ಮಾಡಲಿ? ನಿನ್ನನ್ನು ನೋಡಿದ್ದೇ ತಡ, ಪ್ರೇಮದಲ್ಲಿ ಬಿದ್ದು ಬಿಟ್ಟೆ. ಅದಕ್ಕೆ ಮುಖ್ಯ ಕಾರಣ ಅಂದರೆ, ನಿನ್ನ ಹೆಸರಿಗೆ ತಕ್ಕ ಹಾಗಿರುವ, ನೀಳ ಕೇಶರಾಶಿ. ನಿನ್ನನ್ನು ಭೇಟಿಯಾಗಲಿಕ್ಕೆ ಬಹಳ ಪ್ರಯತ್ನ ಮಾಡಿದೆ. ಆದರೆ ಯಾಕೋ ಏನೋ ಕೈಗೂಡಲಿಲ್ಲ. ಹಾಗಾಗಿಯೆ ನಿನಗೊಂದು ಪತ್ರ ಬರೆದು ನನ್ನ ಮನಸ್ಸು ತೆರೆದಿಡುವ ನಿರ್ಧಾರ ಮಾಡಿದೆ.

ಇನ್ನೂ ಬಹಳ ಮಾತನಾಡಬೇಕಾಗಿದೆ. ಒಂದು ವಿನಂತಿ. ಸಮುದ್ರ ತೀರದ ದೊಡ್ಡ ಮರದ ಕೆಳಗೆ

ಇಂದು ಸಂಜೆ ಐದಕ್ಕೆ ಭೇಟಿಯಾಗುತ್ತೀಯಾ? ನಿನ್ನನ್ನು ಪ್ರತ್ಯಕ್ಷ ಭೇಟಿಯಾಗಿ ನನ್ನ ಮನ ಹಗುರ ಮಾಡಿಕೊಳ್ಳಬೇಕಾಗಿದೆ. ಬರುತ್ತೀಯಲ್ಲಾ! ಬಂದರೆ ನನ್ನಂಥ ಭಾಗ್ಯವಂತ ಮತ್ತೆ ಯಾರೂ ಇಲ್ಲ.

ನನ್ನ ಅಪೇಕ್ಷೆಯನ್ನು ಈಡೇರಿಸುತ್ತೀ ಎಂದು ನಂಬುವ

ನಿನ್ನ (ಹೀಗೆ ಹೇಳಬಹುದಲ್ಲವೇ!)

ಅರುಣ

ಸುಕೇಶಿ ತನ್ನ ಪತ್ರವನ್ನು ಒಂದೆರಡಲ್ಲ, ಅನೇಕ ಬಾರಿ ಓದಿಕೊಂಡಳು. ಕಣ್ಣು ನೋಯುವವರೆಗೂ ಓದಿ ಪತ್ರ ಸಂಪೂರ್ಣ ಬಾಯಿಪಾಠವಾಗಿ ಹೋಯಿತು.

ಭಯವೇನೋ ಆಗುತ್ತಿತ್ತು. ಅದರೊಂದಿಗೇ ಅವನನ್ನು ಭೇಟಿಯಾಗುವ ಉತ್ಸುಕತೆಯೂ ಅಷ್ಟೇ ಇತ್ತು. ``ಹೋಗಲಿ ಬಿಡು. ಯಾರೋ ಏನೋ. ಹೋಗುವುದು ಬೇಡ" ಮನಸ್ಸು ಒಮ್ಮೆ ಹೇಳುತ್ತಿತ್ತು. ಮರುಕ್ಷಣವೇ ``ಹೋಗಿ ಬರಲಿಕ್ಕೆ ಏನು ಅಡ್ಡಿ? ಅವನು ಯಾತಕ್ಕೆ ಕರೆದಿದ್ದಾನೆ ಎಂಬುದಾದರೂ ತಿಳಿಯುತ್ತದೆ. ಬರಿಯ ಭೇಟಿಯಾದ ಮಾತ್ರಕ್ಕೆ ಯಾವುದೇ ಪಾಪ ಮಾಡಿದಂತಾಗಲಿಲ್ಲವಲ್ಲ" ಎಂದು ಸಮರ್ಥಾಯಿಸಿಯೂ ಮತ್ತೊಂದು ಕಡೆಯಿಂದ ಬರುತ್ತಿತ್ತು. ಅದರೊಂದಿಗೇ ``ಬೇಡಪ್ಪಾ, ಬರೀ ಒಂದು ಕಾಗದ ಬರೆದು ಬಾ ಎಂದು ಕರೆದ ತಕ್ಷಣ ಹೋಗಿ ಬಿಟ್ಟರೆ ನನಗೇನು ಬೆಲೆ ಉಳಿಯಿತು?" ಮತ್ತೊಂದು ಪ್ರಶ್ನೆ ಎದುರಾಯಿತು. ಅದಕ್ಕೂ ಉತ್ತರ ತಯಾರಿತ್ತು. ``ಛೀ, ಮನುಷ್ಯರಿಗೆ ಇಷ್ಟೆಲ್ಲಾ ಹೆದರಿಕೆ ಇರಬಾರದಪ್ಪಾ. ಅವನ ಪತ್ರದ ಧಾಟಿ ನೋಡಿದರೆ ಅವರೇನು ಅಸಭ್ಯವಾಗಿ ವರ್ತಿಸುವ ವ್ಯಕ್ತಿ ಎಂದು ಅನ್ನಿಸುವುದಿಲ್ಲ. ಸ್ವಲ್ಪವಾದರೂ ಧೈರ್ಯ ಬೇಡವೇ?"

ಅಂತೂ ಕೊನೆಗೊಮ್ಮೆ ನಿರ್ಧಾರಕ್ಕೆ ಬಂದು, ತನ್ನಷ್ಟಕ್ಕೇ ತಾನೇ ಹೇಳಿ ಕೊಂಡಳು. ``ಏನಾದರೂ ಆಗಲಿ, ಅವನನ್ನು, ಅಂದರೆ ಅರುಣನನ್ನು ಭೇಟಿಯಾಗುವುದೇ ಸರಿ". ಆತನ ಹೆಸರಿನ ಉದ್ಗಾರದಿಂದ ಕಚಗುಳಿಯಿಟ್ಟಂತಾಗಿ ಆಕೆ ತನ್ನಲ್ಲೇ ನಕ್ಕಳು.

ಆ ರಾತ್ರಿ ಸುಕೇಶಿ ಕೇವಲ ಹೊರಳಾಡುತ್ತಿದ್ದಳೇ ಹೊರತು ಕಿಂಚಿತ್ತೂ ನಿದ್ರೆ ಮಾಡಲಿಲ್ಲ. ಬೆಳಿಗ್ಗೆ ಏಳುವಾಗ ಮನಸ್ಸಿಗೆ ದುಗುಡ ಆವರಿಸಿತ್ತು. ಅವನೊಂದಿಗೆ ತಾನು ಮುಖ ಕೊಟ್ಟು ಮಾತನಾಡಿಯೇನು ಎಂಬ ಬಗ್ಗೆಯೇ ಆಕೆಗೆ ಶಂಕೆಯಾಗತೊಡಗಿತು. ಸಂಜೆ ಐದಕ್ಕೆ ಹೊರ ಬೀಳುವಾಗ ಮಾಯಿಗೆ ಯಾವ ನೆಪ ಹೇಳಬೇಕು ಎಂಬ ಬಗ್ಗೆಯೂ ತಲೆಯಲ್ಲಿ ಯೋಚನೆ ನಡೆಯುತ್ತಿತ್ತು. ಇಂಥಾ ಗೊಂದಲದಲ್ಲಿಯೇ ಆಕೆ ದೈನಂದಿನ ಕೆಲಸಗಳನ್ನು ಮಾಡುತ್ತಿದ್ದಳು. ಮನಸ್ಸು ಒಂದೇ ವಿಷಯದತ್ತ ಮರಳಿ ಮರಳಿ ಬರುತ್ತಿತ್ತು. - ಅದೇ ಪತ್ರ.

ಗಡಿಯಾರದ ಮುಳ್ಳು ಮುಂದೆ ಮುಂದೆ ಸರಿದಂತೆ ಅವಳ ಹೃದಯದ ಢಡಗುಟ್ಟುವಿಕೆಯೂ ಹೆಚ್ಚಾಯಿತು. ಇಂಥಾ ಡೋಲಾಯಮಾನ ಸ್ಥಿತಿಯಲ್ಲಿಯೇ ಮಾಯಿಯ ಕಣ್ಣು ತಪ್ಪಿಸಿ ಸಮುದ್ರ ತೀರದ ದೊಡ್ಡ ಮರದ ಕೆಳಗೆ ಹೇಗೆ ಬಂದಳು ಎಂಬುದು ಅವಳಿಗೂ ತಿಳಿಯಲಿಲ್ಲ.

ಅವನೂ ಅಲ್ಲಿಯೇ ನಿಂತು ಕಾಯುತ್ತಿದ್ದ. ಆರಡಿ ಎತ್ತರದ ದೊಡ್ಡ ಮೀಸೆ, ಸುದೃಢ ಶರೀರದ ಆಜಾನುಬಾಹು. ತಾಂಬಾಕಿನ ಬಣ್ಣದ ಪ್ಯಾಂಟು, ಅಚ್ಚ ಬಿಳಿಯ ಶರಟು. ಗುಂಗುರು ಕೂದಲನ್ನು ಹಿಂದಕ್ಕೆ ಬೈತಲೆ ತೆಗೆಯದೆ ಬಾಚಿದ್ದರಿಂದ ಹಣೆ ಇನ್ನಷ್ಟು ಅಗಲವಾಗಿ ಕಾಣುತ್ತಿತ್ತು. ಕಾಲಲ್ಲಿ ಕೊಲ್ಹಾಪುರಿ ಚಪ್ಪಲ್ ಮೆಟ್ಟಿದ್ದ. ಒಂದೇ ನೋಟದಲ್ಲಿಯೇ ಸುಕೇಶಿಗೆ ಈ ವಿವರಗಳೆಲ್ಲಾ ಸ್ಪಷ್ಟವಾದವು.

``ನಾನು ಅರುಣ" ಎರಡೇ ಶಬ್ದ. ಅದನ್ನು ಕೇಳಿ ಸುಕೇಶಿಯ ಅಂಗ ಅಂಗವೂ ರೋಮಾಂಚಿತವಾಯಿತು. ಏನು ಹೇಳಬೇಕು ಎಂದೇ ತೋಚದಾಯಿತು. ಅವಳ ಮನಸ್ಥಿತಿ ಅರಿತೋ ಏನೋ ಅರುಣನೇ ಮುಂದುವರಿಸಿದ ``ನೀನು ಬಂದಿದ್ದು ನೋಡಿ ತುಂಬಾ ಸಂತೋಷವಾಯಿತು. ತುಂಬಾ Thanks."

``ಅಂ, ಹಾಂ."

``ಇಲ್ಲೇ ಮರಳಿನ ಮೇಲೆ ಕೂರೋಣವೇನು?" ಅರುಣ ಕೇಳಿದ.

``ಹಾಂ, ಹಾಂ" ಬಾಯಿಂದ ಶಬ್ದವೇ ಬರಲೊಲ್ಲದು. ಅರುಣ ಏನನ್ನೋ ಹೇಳ ತೊಡಗಿದ. ಅವಳಿಗೆ ಕೇಳುತ್ತಿತ್ತು, ತಿಳಿಯುತ್ತಿತ್ತು. ಆದರೆ ಅದರ ಅರ್ಥ ಮೆದುಳಿನವರೆಗೆ ತಲುಪುತ್ತಿರಲಿಲ್ಲ. ಅವಳು ಸ್ವಪ್ನ ಲೋಕದಲ್ಲಿ ವಿಹರಿಸುತ್ತಿದ್ದಳು. ಅಲ್ಲಿಂದ ತಿರುಗಿ ಮನೆಗೆ ಬಂದಾಗಲೂ ಅವಳು ಅದೇ ಗುಂಗಿನಲ್ಲಿದ್ದಳು.

ಇಂದು ಸಂಜೆ ಅನ್ನಕ್ಕೆ ಎಸರಿಡುವ ಕೆಲಸ ತನ್ನ ಪಾಲಿಗೆ ಬಂದದ್ದಕ್ಕೆ ರೇಗಿದ ಮಾಯಿ ಸುಕೇಶಿಗೆ ಒಂದೇ ಸಮನೆ ಬೈಯ್ಯತೊಡಗಿದ್ದಳು. ಅಪ್ಪ ಮಧ್ಯೆ ಮಧ್ಯೆ ಸುಕೇಶಿಯ ಪಕ್ಷ ವಹಿಸಿ ಸಮಾಧಾನಿಸುವ ಪ್ರಯತ್ನ ಮಾಡಿದರೂ, ಅದೆಲ್ಲಾ ನಿಷ್ಫಲವಾಗುತ್ತಿತ್ತು. ಅಷ್ಟರಲ್ಲಿ ಮನೆಗೆ ಹೊಕ್ಕ ಸುಕೇಶಿಯನ್ನು ಕಂಡು ಅಪ್ಪ ಆನಂದದಿಂದ ಉದ್ಗರಿಸಿದರು ``ನೋಡಿದೆಯೇನು, ಸುಕೇಶಿ ಬಂದೇ ಬಿಟ್ಟಳು. ನಾನು ಹೇಳಲಿಲ್ಲವೇ?" ಮಾಯಿ ಸಂತಪ್ತ ಧ್ವನಿಯಲ್ಲಿ ಅಪ್ಪನ ಮಾತನ್ನು ಅರ್ಧಕ್ಕೆ ಕತ್ತರಿಸಿ ಕೂಗಿದಳು.

``ಮತ್ತೆ, ಆರತಿ ಎತ್ತುವುದು ಬೇಡವೇನು ನಿಮ್ಮ ಮಗಳಿಗೆ? ಮನೆ ಕಡೆ ಧ್ಯಾನವದ್ದು ಸುಟ್ಟಿದ್ದೂ ಯಾರಿಗೂ ಇಲ್ಲ!" ಏನನ್ನೋ ಗೊಣಗುತ್ತಾ, ಸಣ್ಣ ಮಗನನ್ನು ವಿಚಾರಿಸಿಕೊಳ್ಳಲು ಕೋಣೆಯೊಳಗೆ ಹೋದಳು.

ಸುಕೇಶಿಯ ಆನಂದ ಚಂದ್ರನಿಗೆ ಮೋಡ ಅಡ್ಡ ಬಂದಂತಾಯಿತು. ಆದರೆ ಮರುಕ್ಷಣವೇ ಆ ಭೇಟಿಯ ನೆನಪಿನಿಂದ ಮತ್ತೆ ಮನಸ್ಸು ಮುದಗೊಂಡಿತು. ಮನೆಗೆಲಸ ಎಲ್ಲವನ್ನೂ ಯಾವತ್ತಿನಂತೆ ಮುಗಿಸಿದರೂ ಅವಳ ನಡವಳಿಕೆಯಲ್ಲಿ ಮಾಯಿಗೆ ಏನೋ ವೈಚಿತ್ರ್ಯ ಕಂಡಿತು. ರಾತ್ರಿ ಊಟ ಮಾಡುವಾಗ ಕೂಡ ಆಕೆ ಸುಕೇಶಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಳು. ಕೊನೆಗೆ ಕೇಳಿದಳು.

``ಏನೇ, ಇವತ್ತು ಯಾಕೆ ಇಷ್ಟು ಹೊತ್ತಾಯಿತು?"

``ಅಂ, ಹೌದು, ಇಲ್ಲ," ಸುಕೇಶಿ ತೊದಲಿದಳು.

``ಲಕ್ಷ್ಯ ಯಾವ ಕಡೆಗಿದೆ? ನಾನು ಕೇಳಿದ್ದು ತಿಳಿಯಿತೇನು?" ಅದೇ ಹೊತ್ತಿಗೆ ಸರಿಯಾಗಿ ಮಾಯಿಯ ಕೈಗೂಸು ಹಠಾತ್ತನೆ ಅಳತೊಡಗಿದ್ದರಿಂದ ಮಾಯಿ ಅತ್ತ ಓಡಿದಳು. ಸುಕೇಶಿ ತನ್ನ ಅದೃಷ್ಟ ಎಂದು ಕೊಂಡಳು.

ಅಂದಿನಿಂದ ಸುಕೇಶಿ, ಅರುಣರ ಭೇಟಿ ವಾರಕ್ಕೊಮ್ಮೆ, ನಾಲ್ಕು ದಿನಕ್ಕೊಮ್ಮೆ ಆಗ ತೊಡಗಿತು. ಎರಡು ವಾರದ ಹಿಂದಿನ ಮಾತು. ಅಂದು ಮಾಯಿಯ ಕಿರಿಕಿರಿಯಿಂದ ಸುಕೇಶಿಗೆ ಸಂಜೆ ಅರುಣನ ಭೇಟಿಯ ಸಮಯ ಮೀರಿ ಹೋಗಿತ್ತು. ನಿಯಮಿತ ಜಾಗದಲ್ಲಿ ಅವನನ್ನು ಕಂಡೊಡನೆ ಅವಳು ಆನಂದಾತಿರೇಕದಿಂದ ಅವನತ್ತ ಓಡಿ ಬಂದಳು. ``ಹೊತ್ತಾಯಿತೇನು? ಅಪ್ಪನ ಗೆಳೆಯರು ಅನಿರೀಕ್ಷಿತವಾಗಿ ಬಂದಿದ್ದರಿಂದ . . .". ಅವಳು ವಾಕ್ಯವನ್ನು ಮುಗಿಸುವ ಮುನ್ನವೇ ಅರುಣ ಹೇಳಿ ``ನಡಿ, ಹಿಂದುಗಡೆ ಹೋಟೆಲಿಗೆ ಹೋಗಿ ಮಾತನಾಡೋಣ". ಹೋಟೆಲಿಗೆ ಹೋಗಲು ಅವಳು ಹಿಂದೆ ಮುಂದೆ ನೋಡುತ್ತಿದ್ದುದನ್ನು ನೋಡಿ, ಅವನು ಆಗ್ರಹ ಮಾಡಿ ಕರೆದೊಯ್ದ. ಅವಳೊಂದಿಗೆ ಫ್ಯಾಮಿಲಿ ರೂಮಿನಲ್ಲಿ ಕುಳಿತ ಮೇಲೆ ಕೇಳಿದ ``ಏನು ತಗೊಳ್ಳುತ್ತೀ? ಕಾಫಿ, ಐಸ್‌ಕ್ರೀಮ್?" ಸುಕೇಶಿ ಅವನತ್ತ ತಲೆಯೆತ್ತಿ ನೋಡಿದಾಗ, ಅವನ ಕಣ್ಣುಗಳು ಅವಳನ್ನೇ ಆನಂದಮಿಶ್ರಿತ ಕೌತುಕದಿಂದ ದಿಟ್ಟಿಸುತ್ತಿದ್ದವು.

ಅರುಣನ ಸ್ಫುರದ್ರೂಪಿ ವ್ಯಕ್ತಿತ್ವದಿಂದ ಅವಳ ಹರ್ಷ ಎಲ್ಲೆ ಮೀರಿತ್ತು. ಅವನ ಎಣ್ಣೆಗೆಂಪು ಬಣ್ಣ, ಚೂಪು ಮೂಗು, ಹಸಿರು ಕಣ್ಣುಗಳು, ಅವನದೇ ವಿಶಿಷ್ಟವಾದ ಮುಗುಳು ನಗು - ಇದಿಷ್ಟೇ ಸಾಕು. ಮತ್ತೇನೂ ಬೇಡ. ಸುಕೇಶಿಗೆ ಅವನ ಹತ್ತಿರವೇ ಸದಾಕಾಲ ಇದ್ದು ಬಿಡುವ ಅಪೇಕ್ಷೆಯಾಯಿತು. ಏನಾಗುತ್ತದೆ ಎಂದು ತಿಳಿಯುವ ಮೊದಲೇ ಅರುಣ ಅವಳ ಕೈಯನ್ನು ತನ್ನ ಕೈಯಲ್ಲಿ ಹಿಡಿದು ``ಸುಕೇಶಿ" ಎಂದು ಮೆಲುದನಿಯಲ್ಲಿ ಕರೆದ. ಆ ದನಿಯ ಆತ್ಮೀಯತೆ ಅವಳ ಹೃದಯವನ್ನು ತಟ್ಟಿತು.

``ಸುಕೇಶಿ, ನಿಜ ಹೇಳಬೇಕು ಅಂದರೆ, ನನಗೆ ನಿನ್ನ ಆಕರ್ಷಣೆ ಶುರುವಾದದ್ದೇ ನಿನ್ನ ಈ ನೀಳ ಕೇಶರಾಶಿಯಿಂದ. ಹಾಗೂ ನಿನ್ನ ಈ ನಿರಭ್ರ ಕಣ್ಣುಗಳಿಂದ. ಈಗ ಇಷ್ಟೆಲ್ಲಾ ಪರಿಚಯವಾದ ಮೇಲೆ, ನಿನ್ನ ಮುಗ್ಧ ಸ್ವಭಾವದಿಂದ. ನಿನ್ನಂಥಾ ಸರಳ ಹುಡುಗಿಯನ್ನು ನಾನು ನೋಡಿದ್ದು ಇದೇ ಮೊದಲು".

ಸುಕೇಶಿ ಮೋಹಕವಾಗಿ ನಕ್ಕಳು. ಅವಳ ಲಜ್ಜಾಮಿಶ್ರಿತ ನಗುವಿನ ಮೋಡಿಯಲ್ಲಿ ಸಿಕ್ಕಿದ ಅರುಣ ಹೇಳಿದ,

``ಸುಕೇಶಿ, ನಿನ್ನೊಂದಿಗೆ ಮಧುಚಂದ್ರದ ಅವಕಾಶ ನನಗೆ ಸಿಗಬಹುದೇನು? ನಿನ್ನ ಮುಖ ಚಂದ್ರ ನನ್ನ ಮನೆಯಲ್ಲಿ ಸದಾ ಬೆಳಗುವಂಥಾ ಭಾಗ್ಯ ನನ್ನ ಪಾಲಿಗೆ ಇದೆಯೇ?"

ಅರುಣನ ಭಾವೋತ್ಕಟ ಪ್ರಶ್ನೆಗೆ ನಾಚಿದ ಸುಕೇಶಿ ``ಛೀ" ಎಂದಷ್ಟೇ ಉದ್ಗಾರ ತೆಗೆದಳು.

ಇದರ ನಂತರವೂ, ಸುಮಾರು ಒಂದು ವಾರ ಸುಕೇಶಿ ಅರುಣನನ್ನು ಆಗಾಗ ಭೇಟಿಯಾಗುತ್ತಿದ್ದಳು. ಆಗೊಮ್ಮೆ ಅರುಣ ಕೇಳಿದ, ``ಸುಕೇಶಿ, ನೀನು ನನ್ನ ಹೃದಯವನ್ನೇ ವಶ ಪಡಿಸಿಕೊಂಡು ಹೃದಯ ಸ್ವಾಮಿನಿಯಾಗಿದ್ದೀ. ಹಾಗೇ ನನ್ನ ಮನೆಯನ್ನೂ ವಶ ಪಡಿಸಿಕೊಂಡು ಗೃಹ ಸ್ವಾಮಿನಿಯೂ ಆಗಲಾರೆಯಾ" ನನಗೆ ಆ ಭಾಗ್ಯವಿದೆಯೇ?"

ಸುಕೇಶಿ ಮತ್ತೆ ``ಛೀ" ಎಂದಷ್ಟೇ ಹೇಳಿ ಮನೆಯತ್ತ ಓಡಿದಳು. ಓಡಿ ಹೋಗುವ ಮುನ್ನ ಎಂದಿನಂತೆ ಮುಂದಿನ ಭೇಟಿಯ ದಿನವನ್ನು ಗೊತ್ತು ಮಾಡಿಕೊಳ್ಳಲು ಮರೆಯಲಿಲ್ಲ.

ಆ ದಿನ ವಿಶೇಷ ಆಸ್ಥೆಯಿಂದ, ತನ್ನ ಮೆಚ್ಚಿನ ಸೀರೆಯುಟ್ಟು, ಬೇಗ ಬೇಗ ಭೇಟಿಯ ಜಾಗಕ್ಕೆ ಬಂದಳು. ಅರುಣ ಕಾಣಲಿಲ್ಲ. ಈಗ ಬಂದಾನು, ಬಂದಾನು ಎಂದು ಬಹಳ ವೇಳೆ ಕಾದ ಮೇಲೆ, ಹಿಂದೊಮ್ಮೆ ನೋಡಿದ್ದ ಅದೇ ಹುಡುಗ ಸೈಕಲ್ ಮೇಲೆ ಬಂದು ಆಕೆಯ ಕೈಯಲ್ಲೊಂದು ಲಕೋಟೆ ಇಟ್ಟು ಹೇಳಿದ ``ಇದನ್ನು ನಿಮಗೆ ಕೊಡಲು ಹೇಳಿದ್ದಾರೆ".

``ಪ್ರತ್ಯಕ್ಷ ಭೇಟಿಗೇ ಬಂದಿರುವಾಗ ಇದು ಯಾವ ಹೊಸ ಪದ್ಧತಿ" ಎಂದು ಕೊಳ್ಳುತ್ತಾ ಸುಕೇಶಿ ಲಕೋಟೆ ಒಡೆದು ಪತ್ರವನ್ನು ಓದ ತೊಡಗಿದಳು.

ಕುಮಾರಿ ಸುಕೇಶಿ ಇವರಿಗೆ, ಅರುಣ ದೇಸಾಯಿಯ ನಮಸ್ಕಾರಗಳು. ನೀವು ನನಗೆ ಕೊಟ್ಟ ಸಹಕಾರಕ್ಕೆ ನಾನು ನಿಮಗೆ ಋಣಿಯಾಗಿದ್ದೇನೆ. ಈ ರೀತಿ ನಿಮ್ಮೊಂದಿಗೆ ನಡೆದುಕೊಂಡದ್ದರ ಬಗ್ಗೆ ನಾನು ನಿಮ್ಮಿಂದ ಕ್ಷಮೆ ಯಾಚಿಸುತ್ತಿದ್ದೇನೆ.

ನಾನೊಬ್ಬ ಮನಶ್ಶಾಸ್ತ್ರದ ವಿದ್ಯಾರ್ಥಿ. ಪ್ರಥಮ ಬಾರಿಗೆ ಪ್ರೇಮದಲ್ಲಿ ಸಿಲುಕಿದ ಹುಡುಗಿಯ ಭಾವನೆಗಳ ಕುರಿತು ನಾನೀಗ ಪ್ರಬಂಧ ಬರೆಯುತ್ತಿದ್ದೇನೆ. ಪುಸ್ತಕಗಳನ್ನು ಓದಿ ಪ್ರಬಂಧ ಬರೆಯಬಹುದಾಗಿತ್ತಾದರೂ, ಪ್ರತ್ಯಕ್ಷ ಪ್ರಯೋಗ ಮಾಡಿ ಬರೆದರೆ ಪ್ರಬಂಧ ಹೆಚ್ಚು ಪರಿಣಾಮಕಾರಿಯಾದೀತು ಎಂದು ನನ್ನ ಅನಿಸಿಕೆಯಾಗಿದ್ದರಿಂದ ನಾನು ಈ ಪ್ರಯೋಗವನ್ನು ನಿಮ್ಮ ಮೇಲೆ ಮಾಡಬೇಕಾಗಿ ಬಂದಿತು. ಇಲ್ಲಿಯವರೆಗೂ ನಾನು . . .

ಮುಂದೆ ಬರೆದದ್ದನ್ನು ಸುಕೇಶಿಗೆ ಓದಲಾಗಲಿಲ್ಲ. ಅವಳ ಕಣ್ಣಿನಲ್ಲಿ ನೀರು ತುಂಬಿತು. ಕೈ ಕಾಲುಗಳು ಅದುರ ತೊಡಗಿದವು. ಅವಳ ಕನಸು ಚೂರು ಚೂರಾಗಿತ್ತು. ಮಾಯಿಗೆ ತಿಳಿದರೇನು ಗತಿ? ಕೂತರೆ ನಿಂತರೆ ತಪ್ಪು ಹುಡುಕುವ ಮಾಯಿಯ ಸ್ವಭಾವ ಅವಳಿಗೆ ಚೆನ್ನಾಗಿ ತಿಳಿದಿತ್ತು. ಅಪ್ಪ ತನ್ನ ಪಕ್ಷ ಹಿಡಿಯುತ್ತಾರೇನೋ ಸರಿ, ಆದರೆ ಈ ವಿಷಯ ತಿಳಿದ ಮೇಲೆಯೂ ಅಪ್ಪ ನನ್ನನ್ನು ಬೆಂಬಲಿಸಿಯಾರೇ?

ವಿಚಾರಗಳ ಮಹಾಪೂರದಿಂದ ಸುಕೇಶಿಯ ಮನಸ್ಸು ಅಲ್ಲೋಲಕಲ್ಲೋಲವಾಗಿತ್ತು. ಅವಳ ಕಣ್ಣು ಕತ್ತಲಿಟ್ಟು ಬರತೊಡಗಿತು. ಸಂತಾಪ, ಸಿಟ್ಟು, ತಿರಸ್ಕಾರ, ನಿರಾಶೆ ಇತ್ಯಾದಿ ಭಾವನೆಗಳಿಂದ ಅವಳು ಹುಚ್ಚಾದಳು. ಮನಸ್ಸನ್ನು ಹತಾಶೆ ತುಂಬ ತೊಡಗಿತು. ಅರುಣ ಈ ರೀತಿ ಕೈಕೊಡಬಹುದು ಎಂಬ ಬಗ್ಗೆ ಅವಳಿಗೆ ಇನ್ನೂ ಸಂಪೂರ್ಣ ವಿಶ್ವಾಸ ಬರುತ್ತಿರಲಿಲ್ಲ. ಲಕೋಟೆ ಕೊಟ್ಟು ಹುಡುಗ ಯಾವಾಗಲೋ ಹೊರಟು ಹೋಗಿದ್ದ. ಯಾರನ್ನೂ ಕೇಳುವುದರಲ್ಲಿ ಅರ್ಥವಿರಲಿಲ್ಲ. ಸುಕೇಶಿಯ ವಿಚಾರ ಶಕ್ತಿ ಉಡುಗಿ ಹೋಗಿತ್ತು. ಇಷ್ಟೆಲ್ಲಾ ಭೇಟಿಯಾಗಿದ್ದರೂ ಅವನ ವಿಷಯವಾಗಿ ಹೆಚ್ಚು ತಿಳಿದು ಕೊಳ್ಳುವ ಪ್ರಯತ್ನವನ್ನೇ ಅವಳು ಮಾಡಿರಲಿಲ್ಲ. ಆಕೆ ತನ್ನನ್ನೇ ತಾನು ಹಳಿದು ಕೊಳ್ಳತೊಡಗಿದ್ದಳು.

ಕೋಪ, ಹತಾಶೆಯಿಂದ ಕಹಿಯಾಗಿದ್ದ ಮನಸ್ಸಿನಿಂದ ಆಕೆ ತನ್ನಷ್ಟಕ್ಕೇ ತಾನೆ ಹೇಳಿ ಕೊಂಡಳು - ``ನಾನು ಮೋಸ ಹೋದೆ".

ಸಂಜೆಯ ನೆರಳು ಉದ್ದವಾಗುತ್ತಾ ನಡೆದಿತ್ತು. ಸುತ್ತಮುತ್ತಲೂ ಕತ್ತಲಾಗುತ್ತಿತ್ತು. ನಿಧಾನವಾಗಿ ಸುಕೇಶಿ ಭಾರವಾದ ಹೆಜ್ಜೆ ಹಾಕುತ್ತಾ ಮನೆಯತ್ತ ಸಾಗಿದಳು. ●

## ಸುತ್ತ ಮುತ್ತ.....

ಮಾರ್ಚ್ 10ರಂದು ವಾಶಿಯ ನವ ಮುಂಬಯಿ ಕನ್ನಡ ಸಂಘದ ನೂತನ ಸಭಾಗೃಹದ ಉದ್ಘಾಟನೆಯನ್ನು ಮಹಾರಾಷ್ಟ್ರ ಸರ್ಕಾರದ ಮಾಜಿ ಆರೋಗ್ಯ ಮಂತ್ರಿ ಡಾ| ಲಲಿತಾ ರಾವ್ ನೆರವೇರಿಸಿದರು. ಶ್ರೀ ಪುರಂದರದಾಸರ ಆರಾಧನಾ ಮಹೋತ್ಸವದ ಆಚರಣೆ, ಹಾಡುಗಾರಿಕೆ ಸ್ಪರ್ಧೆ, ಮಾಧ್ವ ಮಂಡಳಿ ಸಂತಾಕ್ರೂಝ್ ಮಹಿಳಾ ವಿಭಾಗದವರಿಂದ ಸಂಗೀತ ನಾಟಕ, ಸಂಘದ ಮಹಿಳಾ ಮಂಡಳಿಯ ಸದಸ್ಯರಿಂದ ಭಜನೆ ಮುಂತಾದ ಕಾರ್ಯಕ್ರಮಗಳು ಅಂದು ನಡೆಯಿತು.

ಮಾರ್ಚ್ 17ರಂದು ಜಗಜ್ಯೋತಿ ಕನ್ನಡ ವೃಂದದ ದಶಮಾನೋತ್ಸವದ ಸಮಾರೋಪ ಸಮಾರಂಭ ಡಾ| ವಿಶ್ವೇಶ್ವರಯ್ಯ ಸಭಾಗೃಹದಲ್ಲಿ ನಡೆಯಿತು. `ಅಕ್ಷಯ' ಮಾಸಿಕದ ಸಂಪಾದಕರಾದ ಶ್ರೀ ಎಮ್. ಬಿ. ಕುಕ್ಯಾನ್ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಡಾ| ಕೆ. ರತ್ನಾಕರ ಶೆಟ್ಟಿಯವರು ಗೌರವ ಅತಿಥಿಗಳಾಗಿ ಆಗಮಿಸಿದ್ದರು.

ಮಾರ್ಚ್ 19ರಂದು ಕಲಾ ಜಗತ್ತು ಅಭಿಮಾನಿ ಬಳಗ, ಡೊಂಬಿವಲಿಯವರ ಎರಡನೇ ವಾರ್ಷಿಕೋತ್ಸವ ಡೊಂಬಿವಲಿಯ ಭರತ ನಾಟ್ಯ ಮಂದಿರದಲ್ಲಿ ನಡೆಯಿತು. ಡೊಂಬಿವಲಿಯ ಸಮಾಜ ಸೇವಕ ಶ್ರೀ ಸದಾಶಿವ ಚೌಟ ಮತ್ತು ಕಲಾ ಜಗತ್ತು ನಾಟಕ ಬಳಗದ ಹಿರಿಯ ಕಲಾವಿದರಾದ ಲಕ್ಷ್ಮಣ್ ಕಾಂಚನ್, ಸುರೇಶ್ ಎಂ., ರಮೇಶ್ ಕರ್ಕೇರ ಅವರನ್ನು ಸನ್ಮಾನಿಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಭಾಸ್ಕರ ಶೆಟ್ಟಿ ವಹಿಸಿದ್ದರು.

ಮಾರ್ಚ್ 20ರಂದು ಕರ್ನಾಟಕ ಸಂಘದ ಆಶ್ರಯದಲ್ಲಿ ಯುಗಾದಿ ಸ್ನೇಹ ಸಮ್ಮೇಳನ ನಡೆಯಿತು. ಮಹಿಳಾ ವಿಭಾಗ ಆಯೋಜಿಸಿದ ಈ ಸಮ್ಮೇಳನದ ಅಂಗವಾಗಿ ಮಹಿಳೆಯರಿಗಾಗಿ ಲಘು ಸಂಗೀತ ಮತ್ತಿತರ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಅದೇ ದಿನ ನಡೆದ ಶ್ರೀ ಸದಾನಂದ ಸುವರ್ಣ ದತ್ತಿ ಉಪನ್ಯಾಸವನ್ನು ಬೆಂಗಳೂರಿನ ಡಾ| ದಿವಸ್ಪತಿ ಹೆಗಡೆ ನಡೆಸಿಕೊಟ್ಟರು. (ವಿಷಯ: ನಾಟಕ ಸಾಹಿತ್ಯ ಮತ್ತು ರಂಗ ಕೃತಿಯಾಗಿ). ಶ್ರೀಮತಿ ಮೀರಾ ಶಿರಾಲಿ ಅನುವಾದಿಸಿದ ಶ್ರೀ ವ್ಯಾಸರಾಯ ಬಲ್ಲಾಳರ `ವಾತ್ಸಲ್ಯ ಪಥ'ದ ಮರಾಠಿ ಆವೃತ್ತಿಯನ್ನು ಬಿಡುಗಡೆ ಮಾಡಲಾಯಿತು. ಬಿ. ಎಸ್. ಕೆ. ಬಿ. ಅಸೋಸಿಯೇಷನ್ನಿನ ಮಹಿಳಾ ಸದಸ್ಯರಿಂದ ಅದ್ಧೂರಿಯ `ರಂಗ ಸಂಭ್ರಮ' ಕಾರ್ಯಕ್ರಮ ನಡೆಯಿತು.

ಮಾರ್ಚ್ 24ರಂದು ಕರ್ನಾಟಕ ಮಿತ್ರ ಮಂಡಳಿ, ಭಾಂಡುಪ್ ಇವರ ಆಶ್ರಯದಲ್ಲಿ ಶ್ರೇಷ್ಠ ಶಿಕ್ಷಕಿ ಮೇಯರ್ ಪ್ರಶಸ್ತಿ ವಿಜೇತೆ ಶ್ರೀಮತಿ ಲೀಲಾ ಆರ್. ಉಚ್ಚಿಲ್ ಅವರನ್ನು ಸನ್ಮಾನಿಸಲಾಯಿತು.

ಮಾರ್ಚ್ 30ರಂದು ಶ್ರೀ ಕಲಾ ನಿಲಯ ಇವರ ಆಶ್ರಯದಲ್ಲಿ ವಿಶ್ವೇಶ್ವರಯ್ಯ ಸಭಾಗೃಹದಲ್ಲಿ `ಹುಚ್ಚಿದ್ದಾರು' ನಾಟಕ ಪ್ರದರ್ಶಿಸಲಾಯಿತು. ನಾಟಕವನ್ನು ಬರೆದು ನಿರ್ದೇಶಿಸಿದವರು ಬಾಲಕೃಷ್ಣ ನಿಡ್ವಣ್ಣಾಯ.

ಮಾರ್ಚ್ 31ರಂದು ಕರ್ನಾಟಕ ಸಂಘ, ಡೊಂಬಿವಲಿಯಲ್ಲಿ ವಾಚನಾಲಯದ ವಾರ್ಷಿಕೋತ್ಸವ ನಡೆಯಿತು. ವರಕವಿ ಬೇಂದ್ರೆ ಜನ್ಮಶತಾಬ್ದಿ ಸ್ಮಾರಕ ಸಾಹಿತ್ಯ ಸ್ಪರ್ಧೆಯ ಬಹುಮಾನ ವಿತರಣೆ, ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ವಿಶೇಷ ಗೌರವ ಪಡೆದ ಶ್ರೀ ಬಿ. ಎ. ಸನದಿ ಅವರಿಗೆ ಸನ್ಮಾನ - ಕಾರ್ಯಕ್ರಮದಲ್ಲಿ ಸಮಾವೇಶಗೊಂಡಿತ್ತು. ಸಮಾರಂಭಕ್ಕೆ `ಕರ್ನಾಟಕ ಮಲ್ಲ'ದ ಸಂಪಾದಕರಾದ ಶ್ರೀ ಚಂದ್ರಶೇಖರ ಪಾಲೆತ್ತಾಡಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕರ್ನಾಟಕ ಸಂಘ, ಡೊಂಬಿವಲಿಯ ಅಧ್ಯಕ್ಷರಾದ ಶ್ರೀ ವಸಂತ ಕಲಕೋಟಿ ಅಧ್ಯಕ್ಷತೆ ವಹಿಸಿದ್ದರು.

Regn. No. 040015/86
Regn. No. MH/By/NE121/95

# ಸಂಮೋಹಿನಿ ಚಿಕಿತ್ಸೆ - 2

- ಡಾ| ಉಷಾರಾವ್

**ಒಂದು ಉದಾಹರಣೆ:**

**ಹಾಸಿಗೆಯಲ್ಲಿ ಮೂತ್ರಿಸುವುದು**

ಕಮಲೇಶ್ 14 ವರ್ಷದ ಹುಡುಗ. ಅವನ ತಾಯಿಯೊಂದಿಗೆ ಕ್ಲಿನಿಕ್‌ಗೆ ಬಂದ. ಅವನು ವಿಪರೀತವಾಗಿ ಹಾಸಿಗೆಯನ್ನು ಒದ್ದೆ ಮಾಡುವುದಾಗಿ ಅವನ ತಾಯಿ ದೂರು ಹೇಳಿದರು.

ಕಮಲೇಶ್‌ನ ಪರಿಸ್ಥಿತಿಯ ಐತಿಹಾಸಿಕ ಹಿನ್ನೆಲೆ ಕೆಳಕಂಡಂತಿತ್ತು:

ಹುಟ್ಟಿದಂದಿನಿಂದಲೇ ಅವನು ಬಹಳ ಆರೋಗ್ಯವಂತನಾಗಿದ್ದ. ಒಂದೂವರೆ ವರ್ಷ ತುಂಬುತ್ತಿದ್ದಂತೆಯೇ ಹಾಸಿಗೆಯಲ್ಲಿ ಮೂತ್ರಿಸುವುದನ್ನು ಕ್ರಮೇಣ ಕಡಿಮೆ ಮಾಡುತ್ತಾ ಎರಡು ವರ್ಷಗಳಾಗುವ ಹೊತ್ತಿಗೆ ಪೂರ್ತಿ ನಿಲ್ಲಿಸಿದ ಕಮಲೇಶ್ ಬಹಳ ಶುಚಿಯಾಗಿದ್ದ ಹುಡುಗ. ತಾಯಿ ಬಹಳ ಸಂತೋಷದಿಂದಿದ್ದರು. ಎಲ್ಲಿಗಾದರೂ ಪ್ರಯಾಣ ಮಾಡುವಾಗ ಅಥವಾ ಸಂಬಂಧಿಗಳ ಮನೆಯಲ್ಲಿ ತಂಗುವಾಗ ಅವರಿಗೆ ಯಾವುದೇ ಸಮಸ್ಯೆ ಇರಲಿಲ್ಲ.

ಆದರೆ ಇದ್ದಕ್ಕಿದ್ದಂತೆ ಒಂದು ರಾತ್ರಿ ಕಮಲೇಶ್ ಹಾಸಿಗೆ ಒದ್ದೆ ಮಾಡಲಾರಂಭಿಸಿದ. ಆಗ ಅವನಿಗೆ ಆರೂವರೆ ವರ್ಷ. ಮೊದಲನೆಯ ದಿನ, ಕಮಲೇಶ್ ಮಲಗುವುದಕ್ಕೆ ಮುನ್ನ ಟಾಯ್ಲೆಟ್‌ಗೆ ಹೋಗಿಲ್ಲದಿರಬಹುದು ಎಂದು ಅವನ ತಾಯಿ ಭಾವಿಸಿದರು. ಆದರೆ ಎರಡನೆಯ ದಿನ, ಮೂರನೇ ದಿನವೂ ಅವನು ಹಾಸಿಗೆ ಒದ್ದೆ ಮಾಡುವುದು ಮುಂದುವರಿಯಿತು. ಅದು ಹಾಗೇ ವರ್ಷಗಳವರೆಗೆ ಮುಂದುವರಿದಾಗ ಚಿಂತಿತರಾದ ಅವನ ತಾಯಿ ತಮ್ಮ ಕುಲದೈವಕ್ಕೆ ಯಾತ್ರೆ ಹೋಗಿ ಅವನಿಗೆ ಪ್ರಸಾದ ಕೊಟ್ಟರು. ಯಾವುದೇ ಕೆಟ್ಟ ದೃಷ್ಟಿ ಅಥವಾ ದುಷ್ಟ ಶಕ್ತಿ ಕಾರಣವಿರಬಹುದು ಕಮಲೇಶ್‌ನ ತೋಳಿಗೆ ಕರಿ ದಾರವನ್ನು ಕಟ್ಟಿದರು. ಯಾವುದೂ ಪ್ರಯೋಜನವಾಗಲಿಲ್ಲ.

ಕಮಲೇಶ್ ಕ್ಲಿನಿಕ್‌ಗೆ ಬಂದಾಗ ಅವನ ಕತ್ತಿನಲ್ಲಿ ಹಾಗೂ ಎಡ ತೋಳಿನಲ್ಲಿ ಒಟ್ಟು ಆರು ಕರಿ ದಾರಗಳಿದ್ದವು. ಅವನ ತಾಯಿ ಜತೆಗೇ ಅಲೋಪತಿಕ್ ವೈದ್ಯವನ್ನು ಮಾಡಿಸಿದ್ದರು. ಆದರೆ ಇವು ಯಾವುದರಿಂದಲೂ ಕಮಲೇಶ್‌ಗೆ ಗುಣವಾಗಿರಲಿಲ್ಲ.

ಕಮಲೇಶ್‌ನನ್ನು ಮೊದಲು ಒಂದು ಹಗುರವಾದ ಸುಷುಪ್ತಾವಸ್ಥೆಯಲ್ಲಿಡಲಾಯಿತು. ಅನಂತರ ನಿಧಾನವಾಗಿ ದೀರ್ಘ ಸಂಮೋಹನಾವಸ್ಥೆಗೆ ಒಳಪಡಿಸಲಾಯಿತು.

ಅವನಿಗೆ ಐದು ವರ್ಷ ತುಂಬಿದ ನಂತರ ಒಂದು ದಿನ ಕಮಲೇಶ್ ತನ್ನ ಮನೆಯ ಬಾಲ್ಕನಿಯಲ್ಲಿ ನಿಂತಿದ್ದ. ಅವನ ಚಿಕ್ಕಪ್ಪ ಅವನನ್ನು ಹಿಡಿದು ಕೊಂಡು ತಮಾಷೆಯಾಗಿ ``ನಿನ್ನನ್ನು ಕೆಳಕ್ಕೆ ತಳ್ಳಿ ಬಿಡುತ್ತೇನೆ'' ಎಂದರು. ಕಮಲೇಶ್ ಭಯದಿಂದ ಜೋರಾಗಿ ಚೀರಿದ. ಅಂದಿನ ರಾತ್ರಿಯಿಂದಲೇ ಅವನು ಹಾಸಿಗೆಯಲ್ಲಿ ಮೂತ್ರ ಮಾಡಲಾರಂಭಿಸಿದ.

ಈ ವಿಷಯಗಳು ತಿಳಿದ ನಂತರ ಅವನಿಗೆ ಒಂದು ಸರಳ ಸೂಚನೆಯನ್ನು ನೀಡಲಾಯಿತು.

``ನನಗೆ ಮೂತ್ರ ಮಾಡಬೇಕೆನಿಸಿದಾಗಲೆಲ್ಲ, ನಾನು ಅದರ ಬಗೆಗೆ ಜಾಗೃತನಾಗುತ್ತೇನೆ. ಆ ಬಗೆಗೆ ನನಗೆ ತಿಳಿವು ಮೂಡಿದ ತಕ್ಷಣ, ನಾನು ಎಚ್ಚರಗೊಳ್ಳುತ್ತೇನೆ. ಟಾಯ್ಲೆಟ್‌ಗೆ ಹೋಗಿ ಮೂತ್ರಿಸಿ ಬರುತ್ತೇನೆ.''

ಕಮಲೇಶ್ ವಿಶ್ರಾಂತ ಸ್ಥಿತಿಯಲ್ಲಿ ಕುಳಿತು ಕೊಂಡು ತಾವೇ ಈ ಸೂಚನೆಯನ್ನು ದಿನಕ್ಕೆ ಏಳು-ಎಂಟು ಸಲ ಹೇಳಿಕೊಳ್ಳುತ್ತಾನೆ.

ಕಮಲೇಶ್ ಪ್ರಾಮಾಣಿಕ, ಹಾಸಿಗೆ ಒದ್ದೆ ಮಾಡಿ ಕೊಳ್ಳುವ ಸಮಸ್ಯೆಯಿಂದ ಪಾರಾಗಬೇಕೆಂದು ಇಚ್ಛಿಸಿದ. ಆದುದರಿಂದ ಸಲಹೆಯ ಪ್ರಕಾರ ಅವನು ನಡೆದು ಕೊಂಡ. ಕ್ರಮೇಣ ಅವನು ಹಾಸಿಗೆ ಒದ್ದೆ ಮಾಡುವುದು ಕಡಿಮೆಯಾಗುತ್ತಾ ಬಂತು. ಕಳೆದ ಐದು ತಿಂಗಳಲ್ಲಿ ಅವನು ಒಂದು ಸಾರಿಯೂ ಹಾಸಿಗೆಯಲ್ಲಿ ಮೂತ್ರಿಸಿಲ್ಲ.

**ಕವನ**

## ನನ್ನೆದುರಲ್ಲೇ

ಮಿಲಿಟರಿ ವ್ಯಾನೊಂದು ಸರಿದು ಹೋದದ್ದು
ಪುಟ್ಟ ಮಗು ಅದರತ್ತ ಕೈಯಾಡಿಸಿದ್ದು
ಬಾಗಿಲ ಪಕ್ಕ ಕುಳಿತ ಯೋಧನೊಬ್ಬ
ಅವನ್ನು ಸ್ವೀಕರಿಸಿದ್ದು
ಒಂದೇ ಕ್ಷಣಕ್ಕೆ ನಡೆದು ಹೋಯಿತು !
ಆ ಕ್ಷಣ
ದೇವರಿಗೆ ಪ್ರಾರ್ಥನೆಯಾಗಿ ಸಂದು ಹೋಯಿತು!

***

## ಗುಲಾಬಿಯ ಜತೆಗೆ

ಕವಿ ಸಮ್ಮೇಳನದಿಂದ ಎದ್ದಬಿದ್ದು ಬರುತ್ತಿದ್ದೇನೆ
ಧಾರಾವಿಯ ಕಪ್ಪು ಬೆಳಕಿನ ದಾರಿ ಒಡೆದು
ಎದ್ದು ಬಂದ ಪುಟ್ಟ ಮಗು
ಗುಲಾಬಿಯನ್ನು ಕೈ ಮಾಡಿ ಕರೆಯಿತು
ನನ್ನ ಕವಿತೆ ಗುಲಾಬಿಯ ಜತೆ
ಮಗುವಿನ ಕಣ್ಣಲ್ಲಿ
ಇಂಗಿ ಹೋಯಿತು !
ಅವಳ ಮಡಿಲಲ್ಲಿ ಮುಲುಗೇಳುತ್ತಿದ್ದ ಮಗು
ಪಕ್ಕನೆ
ಅವಳ ಮುಖ ಪರಚಿ ಬಿಟ್ಟಿತು !
ಆ ಗಾಯವನ್ನ ಮಾಗದಂತೆ
ಜೋಪಾನ ಇಟ್ಟು
ತಾಯಿ
ಇಂದಿಗೂ ಸುಖದಿಂದ ನರಳುತ್ತಿದ್ದಾಳೆ !

— ಬಶೀರ್

(ಪುಟ 12ರಿಂದ)

**ವರಕವಿ ದ.ರಾ. ಬೇಂದ್ರೆಯವರ 'ನಾಕು ತಂತಿ'** ದಾಂಪತ್ಯದ ವರ್ಣನೆಯಿದೆ. ಯಾವ ರೀತಿ ಗಣೇಶನು ಶಿವ ಪಾರ್ವತಿಯ ಪುತ್ರನಾಗಿದ್ದಾನೋ ಅದೇರೀತಿ ಓಂಕಾರ ಸ್ವರೂಪಿ ವಕ್ರದಂತ ಚಿಂತನ ದೃಷ್ಟಿಯುಳ್ಳ ಗಣಪತಿ ಶಬ್ದಾರ್ಥದ ದಾಂಪತ್ಯದ ಫಲವಾಗಿದ್ದಾನೆ. ಯಾವ ರೀತಿ ಗಣೇಶನು ಶಿವ ಪಾರ್ವತಿಯ ಪುತ್ರನಾಗಿದ್ದನೋ ಅದೇ ರೀತಿ ಓಂಕಾರ ಸ್ವರೂಪಿ ವಕ್ರದಂತ ಚಿಂತನ ದೃಷ್ಟಿಯುಳ್ಳ ಗಣಪತಿ ಶಬ್ದಾರ್ಥದ ದಾಂಪತ್ಯದ ಫಲನಾಗಿದ್ದಾನೆ. ಇಲ್ಲಿ ಕವಿ ಹೇಳುತ್ತಾನೆ. ನಾನು, ನೀನು, ಆನು, ತಾನು ಈ ನಾಲ್ಕು ತಂತಿಗಳು ಪರಮ ಪುರುಷನ ಕಾವ್ಯವಾಣಿಯ ನಾಲ್ಕು ತಂತಿಗಳಾಗಿವೆ ಎಂದು.

ವರಕವಿ ಬೇಂದ್ರೆಯವರ `ನಾಕು ತಂತಿ` ಸಂಗ್ರಹದ ಕವನಗಳನ್ನು ಅವರ ಬಾಯಿಂದ ಕೇಳುವ ಹಾಗೂ ಚರ್ಚಿಸುವ ಮೂರು ದಿನಗಳು ನಮ್ಮ ಧಾರವಾಡದ ವಾಸ್ತವ್ಯ ಬಹಳೇ ಅವಿಸ್ಮರಣೀಯ. ಬೇಂದ್ರೆಯವರಂತೆ ತಮ್ಮ ಕವಿತೆಗಳನ್ನು ಅರ್ಥಪೂರ್ಣವಾಗಿ, ಪ್ರಭಾವಶಾಲಿಯಾಗಿ, ಮರ್ಮ ಭೇದಕವಾಗಿ ಹಾಡಿ ತೋರಿಸಿದ ಕನ್ನಡ ಕವಿಗಳನ್ನು ನಾನು ನೋಡಿಲ್ಲ, ಕೇಳಿಲ್ಲ. ಅವರ ಮುದ್ರಿತ ಕವಿತೆ ಓದಿದಾಗ ಇದ್ದ ವಿಚಾರ ಅವರ ಧ್ವನಿ ಮುದ್ರಿತ ಕವಿತೆ ಕೇಳಿದಾಗ ಹೊಳೆಯುತ್ತದೆ. ಬೇಂದ್ರೆಯವರ ಕವಿತೆ ಎಷ್ಟು ತಿಳಿಯಿತು ಎನ್ನುವುದಕ್ಕಿಂತ ಅದು ಎಷ್ಟು ಹೊಳೆಯಿತು ಎಂದು ಕೇಳುವುದೇ ಹೆಚ್ಚು ಒಳ್ಳೆಯದೆನಿಸುತ್ತದೆ. ಅದನ್ನು ಗಟ್ಟಿಯಾಗಿ ನಾವು ಓದಿದಾಗ ಅದರ ನಾದಲೀಲೆ ನಮ್ಮನ್ನು ಮುಗ್ಧರನ್ನಾಗಿ ಮಾಡುತ್ತದೆ. ಕಾವ್ಯವೆಂಬ ಹಕ್ಕಿ ಗರಿಗೆದರಿ ಆಗಸದಲ್ಲಿ ಹಾರಾಡ ತೊಡಗುತ್ತದೆ.

ಜಿಬ್ರಾನ ಹೆಂಡತಿ ಬಾರ್ಬರಾ, ಯಂಗ್ ಕೂಡಾ ಒಬ್ಬ ಅನುಭಾವಿ. ಆಕೆ ಆತನ ಬದುಕಿನಲ್ಲಿ ಕಡೆಯ ಏಳು ವರ್ಷಗಳು ಬಾಳಿದಳು. ಯಂಗ್‌ಳನ್ನು ಒಮ್ಮೆ ಜಿಬ್ರಾನ್ ಏಳೇ ಏಳು ಶಬ್ದಗಳೊಳಗೆ ಇಡೀ ಭಾಷಾ ಕೋಶವನ್ನೇ ಅಡಕಗೊಳಿಸಿ ಸಾರ ಸಂಗ್ರಹಗೊಳಿಸಿದರೆ ನೀನು ಉಳಿಸಿಕೊಳ್ಳುವ ಏಳೇ ಏಳು ಶಬ್ದಗಳು ಯಾವುವು? ಎಂಬ ಪ್ರಶ್ನೆ ಹಾಕಿದರೆ, ಆಕೆ ಅವು `ದೇವ, ಜೀವನ, ಒಲವು, ಚೆಲವು, ನೆಲ` ಎಂದು ಹೇಳಿದಳಂತೆ. ಆಗ ಜಿಬ್ರಾನ್ ನಗುತ್ತ ಈ ಎಲ್ಲಕ್ಕೂ ಮೂಲ `ನಾನು` `ನೀನು` ಅಲ್ಲವೆ? `ನಾನು - ನೀನು ಕೂಡಿ ಇಲ್ಲದಿದ್ದರೆ ಈ ಯಾವ ಪದಗಳಿಗೂ ಅರ್ಥವಿಲ್ಲ ಎಂದನಂತೆ. ಬೇಂದ್ರೆಯವರಿಗೆ ಜಿಬ್ರಾನ್‌ನ ವಿಚಾರ ಧಾರೆ ಸಾಕಷ್ಟು ಪರಿಣಾಮ ಬೀರಿತು. ಕೀಟ್ಸ್ ಕವಿಯ ನಾಲ್ಕೊಗ ದರ್ಶನವಾದ (Sensuous beauty, imaginative beauty, intellectual beauty and ideal beauty) ಚತುರ್ಮುಖ ದರ್ಶನ ಹಾಗೂ ಜಿಬ್ರಾನ್ಸ್ `ನಾನು` `ನೀನು` ಪರಿಕಲ್ಪನೆಯೇ ಅವರ `ನಾಕು ತಂತಿ`ಯ ಮೂಲ ಮಂತ್ರವಾಗಿರುವುದನ್ನು ಗಮನಿಸಬಹುದು.

Edited, Printed & Published by M.A.N. Prasad on behalf of the Mysore Association, Mumbai- Tel.: 402 46 47
Laser Typset and Printed at Aarati Art Printers, Fort, Bombay-400 001. * Tel.: 266 33 61/266 59 38